ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 23 ಗುರುವಾರ 2022

ಸಂಪುಟ: 43 | ಸಂಚಿಕೆ: 68 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮುಡಾ ಸಭೆಯಲ್ಲಿ ಮಹತ್ವದ ನಿರ್ಣಯ: ಮಾಜಿ ಸೈನಿಕರ ಆಸ್ತಿಗಳಿಗೆ

ಶೇ.50 ತೆರಿಗೆ ವಿನಾಯ್ತಿ

● 20 ಗುಂಟೆ ಒಳಗಿನ ಸಿಂಗಲ್ ಲೇಔಟ್ ಪ್ಲಾನ್ ಅಪ್ರೂವಲ್ ಅಧಿಕಾರ ಆಯುಕ್ತರಿಗೆ ● ಎರಡು ಕಡೆ ಗುಂಪು ಮನೆ, ಪೆರಿಫೆರಲ್ ರಸ್ತೆಗೆ ಡಿಪಿಆರ್; ರಿಂಗ್ ರಸ್ತೆ ದೀಪ ಬೆಳಗಿಸಲು 12 ಕೋಟಿ ಅನುದಾನ

ಮೈಸೂರು, ಜೂ.22(ಆರ್‌ಕೆ)– ಹಲವು ಕಾರಣಗಳಿಂದ ನೆನೆಗುದಿಗೆ ಬಿದ್ದಿದ್ದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಸಾಮಾನ್ಯ ಸಭೆ ಅಂತೂ 8 ತಿಂಗಳ ನಂತರ ಬುಧವಾರ ನಡೆಯಿತು.

ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ರಾಜೀವ್ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ 400ಕ್ಕೂ ಅಧಿಕ ವಿಷಯಗಳ ಮಂಡಿಸಲಾಗಿತ್ತಾದರೂ, ಭೂ ಉಪಯೋಗ ಬದಲಾವಣೆ, ಬದಲಿ ನಿವೇಶನ, ತುಂಡು ಭೂಮಿ ಮಂಜೂರಾತಿ, ಖಾಸಗಿ ಬಡಾವಣೆಗಳಿಗೆ ನಕ್ಷೆ ಅನುಮೋದನೆಗಳಿಗೆ ಸಭೆಯು ಯಾವುದೇ ಚರ್ಚೆಯೂ ಇಲ್ಲದೆ ತ್ವರಿತವಾಗಿ ಅನುಮೋದನೆ ನೀಡಿತು.


ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆ ಅಧ್ಯಕ್ಷ ರಾಜೀವ್ ಅಧ್ಯಕ್ಷತೆಯಲ್ಲಿ ಬುಧವಾರ ನಡೆಯಿತು.

ಸೋಮವಾರ ಉಪಸಮಿತಿ ಸಭೆ


ನಾಗರಿಕ ಸೌಲಭ್ಯ (CA) ನಿವೇಶನಗಳ ಹಂಚಿಕೆ ಸಂಬಂಧ ಜೂನ್ 27ರಂದು ಉಪಸಮಿತಿ ಸಭೆ ನಡೆಸಿ, ಸಲ್ಲಿಕೆಯಾಗಿರುವ ಅರ್ಜಿಗಳ ಪರಿಶೀಲನೆ ಪ್ರಕ್ರಿಯೆ ಪೂರ್ಣಗೊಳಿಸುವ ಬಗ್ಗೆ ಮುಡಾ ಸಾಮಾನ್ಯ ಸಭೆಯು ಸಲಹೆ ನೀಡಿದೆ.

ಮಾಜಿ ಸೈನಿಕರ ಸಂಘದ ಕೋರಿಕೆಯಂತೆ ಮುಡಾ ಸದಸ್ಯರಾದ ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡರ ಒತ್ತಾಯದ ಮೇರೆಗೆ ಮುಡಾದಿಂದ ಮಂಜೂರಾದ ಮಾಜಿ ಸೈನಿಕರ ನಿವೇಶನ, ಮನೆಗಳಿಗೆ ಶೇ. 50ರಷ್ಟು ತೆರಿಗೆ ವಿನಾಯ್ತಿ ನೀಡುವ ಕುರಿತು ಚರ್ಚೆ ನಡೆದು ಬಳಿಕ, ಮುನ್ಸಿಪಲ್ ಕಾಯ್ದೆಯಲ್ಲಿ ಅವಕಾಶವಿರುವ ಬಗ್ಗೆ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ಖಾತರಿಪಡಿಸಿದ ಹಿನ್ನೆಲೆಯಲ್ಲಿ ಮಾಜಿ ಸೈನಿಕರಿಗೆ ಶೇ.50 ತೆರಿಗೆ ವಿನಾಯಿತಿ ನೀಡಲು ತೀರ್ಮಾನಿಸಲಾಯಿತು. 20 ಗುಂಟೆ ಒಳಗಿನ ಭೂಮಿಯಲ್ಲಿ ಸಿಂಗಲ್ ಲೇಔಟ್ ▶ 9ನೇ ಪುಟಕ್ಕೆ

ಮಹಾರಾಷ್ಟ್ರ ಉದ್ಧವ್ ಠಾಕ್ರೆ ಸರ್ಕಾರ ಪತನ

ಸನ್ನಿಹಿತ

ಮುಂಬೈ: ಮಹಾರಾಷ್ಟ್ರ ಉದ್ಧವ್ ಠಾಕ್ರೆ ನೇತೃತ್ವದ ಸರ್ಕಾರದ ಪತನ ಸನ್ನಿಹಿತವಾಗಿದ್ದು, ಶಿವಸೇನೆ ಬಂಡಾಯ ನಾಯಕ ಏಕನಾಥ್ ಶಿಂಧೆ ನೇತೃತ್ವದ ಬಿಜೆಪಿ ಮೈತ್ರಿಕೂಟ ಸರ್ಕಾರ ಅಸ್ತಿತ್ವಕ್ಕೆ ಬರುವ ಲಕ್ಷಣಗಳು ಗೋಚರಿಸುತ್ತಿವೆ. 56 ಶಾಸಕ ಬಲದ ಶಿವಸೇನೆಯ 38 ಶಾಸಕರು ನಗರಾಭಿವೃದ್ಧಿ ಸಚಿವ ಏಕನಾಥ್ ಶಿಂಧೆ ಜೊತೆ ಕೈಜೋಡಿಸಿದ್ದಾರೆ.



ಏಕನಾಥ್ ಶಿಂಧೆ ನೇತೃತ್ವದಲ್ಲಿ 38 ಶಾಸಕರು ಬಂಡಾಯ

ಉದ್ಧವ್ ವಿರುದ್ಧ ಬಂಡಾಯವೆದ್ದಿರುವ ಏಕ್‌ನಾಥ್ ಶಿಂಧೆ, ತಮ್ಮ ಜೊತೆ 46 ಶಾಸಕರಿದ್ದು, ನಮ್ಮದೇ ನಿಜವಾದ ಶಿವಸೇನೆ ಎಂದು ಪ್ರತಿಪಾದಿಸುವುದರ ಜೊತೆಗೆ ಬಿಜೆಪಿ ಜೊತೆ ಸೇರಿ ಹಿಂದೂಪರ ಸರ್ಕಾರ ರಚಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ. ಮತ್ತೊಂದೆಡೆ ಶಿವಸೇನೆಯ 34 ಶಾಸಕರು ಸಭೆ ▶ 9ನೇ ಪುಟಕ್ಕೆ

ಮಾಮೂಲಿಯಂತೆ ಚಾಮುಂಡಿಬೆಟ್ಟದಲ್ಲಿ ಆಷಾಢ ಶುಕ್ರವಾರದ ವಿಶೇಷ ಪೂಜೆ

ಮೈಸೂರು: ಕೊರೊನಾ ಸೋಂಕಿನಿಂದಾಗಿ ಕಳೆದ 2 ವರ್ಷ ನಿರ್ಬಂಧಿತವಾಗಿ, ಸಾಂಪ್ರದಾಯಿಕವಾಗಷ್ಟೇ ನಡೆದಿದ್ದ ಆಷಾಢ ಶುಕ್ರವಾರ ವಿಶೇಷ ಪೂಜಾ ಕೈಂಕರ್ಯವನ್ನು ಈ ಬಾರಿ ಮಾಮೂಲಿನಂತೆ ನಡೆಸಲು ಜಿಲ್ಲಾಡಳಿತ ನಿರ್ಧರಿಸಿದೆ. ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಈ ವಿಷಯ ತಿಳಿಸಿದರು.

(ವರದಿ ಪುಟ–7)

ಜು.1ರಿಂದ ರಾಜ್ಯಾದ್ಯಂತ ಪೌರಕಾರ್ಮಿಕರ ಮುಷ್ಕರ

ಪೂರ್ವಭಾವಿ ಸಭೆಯಲ್ಲಿ ವಿವಿಧ ಸಂಘಟನೆಗಳಿಂದ ಬೆಂಬಲ

- **ಮುಷ್ಕರದ ಜೊತೆಗೆ ಅನಿರ್ದಿಷ್ಟಾವಧಿ ಅಹೋರಾತ್ರಿ ಪ್ರತಿಭಟನೆ**
- **ನಗರ ಸ್ಥಳೀಯ ಸಂಸ್ಥೆಗಳ ನೇರ ಪಾವತಿ ಪೌರಕಾರ್ಮಿಕರು, ಒಳಚರಂಡಿ ಸಹಾಯಕರು, ಕಸ ಸಾಗಾಣೆ ವಾಹನ ಚಾಲಕರ ಖಾಯಂಗೆ ಆಗ್ರಹ**

ಮೈಸೂರು,ಜೂ.22(ಪಿಎಂ)– ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ನೇರಪಾವತಿ ಪೌರಕಾರ್ಮಿಕರು, ಒಳಚರಂಡಿ ಸಹಾಯಕರು ಮತ್ತು ಕಸ ಸಾಗಾಣಿಕೆ ವಾಹನ ಚಾಲಕರನ್ನು ಖಾಯಂಗೊಳಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾ ಸಂಘದ ವತಿಯಿಂದ ಜುಲೈ 1ರಿಂದ ಬೇಡಿಕೆ ಈಡೇರುವವರೆಗೆ ಮುಷ್ಕರ ನಡೆಸಲು ತೀರ್ಮಾನಿಸಲಾಗಿದೆ.

ಅಲ್ಲದೆ, ರಾಜ್ಯಾದ್ಯಂತ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಎದುರು ಅನಿರ್ದಿಷ್ಟಾವಧಿ ಅಹೋರಾತ್ರಿ ಪ್ರತಿಭಟನಾ ಧರಣಿ ನಡೆಸಲು ನಿರ್ಣಯಿಸಲಾಗಿದೆ. ಅಂತೆಯೇ ಮೈಸೂರು ಮಹಾನಗರ ಪಾಲಿಕೆ ಎದುರು ಜು.1ರಿಂದ ಪ್ರತಿಭಟನಾ ಧರಣಿ ಆರಂಭಗೊಳ್ಳಲಿದ್ದು, ಸದರಿ ಕಾರ್ಮಿಕರು ಕೆಲಸ ಸ್ಥಗಿತಗೊಳಿಸಲಿದ್ದಾರೆ. ಇವರ ಹೋರಾಟಕ್ಕೆ ಪ್ರಗತಿಪರ ಸಂಘಟನೆಗಳು, ದಲಿತ ಸಂಘರ್ಷ ಸಮಿತಿ ಸೇರಿದಂತೆ ವಿವಿಧ ಸಂಘಟನೆಗಳು ಬೆಂಬಲ ನೀಡಿವೆ.

ಬದುಕು ನಿಕೃಷ್ಟ: ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಬುಧವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಹೋರಾಟದ ರೂಪುರೇಷೆ ಬಗ್ಗೆ ಚರ್ಚಿಸಲಾಯಿತು. ಪ್ರಸ್ತಾವಿಕವಾಗಿ ಮಾತನಾಡಿದ ಮಹಾ ಸಂಘದ ರಾಜ್ಯಾಧ್ಯಕ್ಷ ನಾರಾಯಣ್, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರಪಾವತಿ ಪೌರಕಾರ್ಮಿಕರು, ಒಳಚರಂಡಿ ಸಹಾಯಕರು ಮತ್ತು ಕಸ ಸಾಗಾಣಿಕೆ ವಾಹನ ಚಾಲಕರು ಸೇರಿದಂತೆ ಒಟ್ಟಾರೆ ಸುಮಾರು 50 ಸಾವಿರ ಮಂದಿ ಖಾಯಂ ಇಲ್ಲದೆ ಕೆಲಸ ಮಾಡುತ್ತಿದ್ದಾರೆ. ಇವರ ಬದುಕು ಅತ್ಯಂತ ನಿಕೃಷ್ಟವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಸಿದ್ದರಾಮಯ್ಯನವರು ಸಿಎಂ ಆಗಿದ್ದಾಗ ಸ್ವಚ್ಛತಾ ಕೆಲಸ ಸ್ಥಗಿತಗೊಳಿಸಿ, ಹೋರಾಟ ನಡೆಸಿದ್ದರ ಫಲವಾಗಿ ಗುತ್ತಿಗೆ ಪದ್ಧತಿ ರದ್ದುಗೊಂಡಿತು. ಆ ಮೂಲ ನೇರಪಾವತಿ ಜಾರಿಯಾಯಿತು. ಆದರೆ ಗುತ್ತಿಗೆದಾರರು ನೀಡುತ್ತಿದ್ದ ವೇತನವನ್ನು ಈಗ ಸರ್ಕಾರ ನೀಡುವಂತೆ ಆಗಿದೆಯೇ ಹೊರತು, ನೇರಪಾವತಿ ಪಡೆಯುವ ಪೌರಕಾರ್ಮಿಕರಿಗೆ ಸೇವಾ ಭದ್ರತೆ ಸೇರಿದಂತೆ ಯಾವುದೇ ಸೌಲಭ್ಯಗಳು ಇಲ್ಲವಾಗಿವೆ ಎಂದರು. ▶ 9ನೇ ಪುಟಕ್ಕೆ


ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಪೌರಕಾರ್ಮಿಕರ ಹೋರಾಟ ಸಂಬಂಧ ಪೂರ್ವಭಾವಿ ಸಭೆ ನಡೆಯಿತು. ಸಭೆಯಲ್ಲಿ ಪೌರಕಾರ್ಮಿಕರ ಮಹಾ ಸಂಘದ ಅಧ್ಯಕ್ಷ ನಾರಾಯಣ್ ಮಾತನಾಡುತ್ತಿರುವುದು.

ರಾಮದಾಸರಿಗೆ ಪ್ರಧಾನಿ ಮೋದಿ ಗುದ್ದು...!









ಬಾಂಧವ್ಯ ಬೆಸೆಯುವ ಮದ್ದು...!?

ತಾಯಿ ಅಗಲಿಕೆ ನಂತರ ಮೋದಿ ಹುಟ್ಟುಹಬ್ಬಕ್ಕೆ ರಾಮದಾಸ್ ಕುಟುಂಬ ಹೋಗದೇ ಇದ್ದರೂ, ಮೋದಿಯವರ ಹುಟ್ಟುಹಬ್ಬ ಸಂದರ್ಭದಲ್ಲಿ ಜನಪರ ಕೆಲಸಗಳನ್ನು ಮಾಡುತ್ತಿದ್ದರು ಎಂಬುದಕ್ಕೆ 2021ರ ಸೆಪ್ಟೆಂಬರ್‌ನಲ್ಲಿ ಮೋದಿಯವರ ಹುಟ್ಟುಹಬ್ಬದ ಅಂಗವಾಗಿ 'ಮೋದಿ ಯುಗ ಉತ್ಸವ್' ಹೆಸರಿನಲ್ಲಿ ಸುದೀರ್ಘ 20 ದಿನಗಳ ಕಾಲ ಕೇಂದ್ರ, ರಾಜ್ಯ ಸರ್ಕಾರದ ವಿವಿಧ ಯೋಜನೆಗಳನ್ನು ತನ್ನ ಕ್ಷೇತ್ರದ ಜನರಿಗೆ ತಲುಪಿಸುವ ಕಾರ್ಯವನ್ನು ರಾಮದಾಸ್ ಮಾಡಿದ್ದರು. ಈ ಉತ್ಸವಕ್ಕೆ ಕೇಂದ್ರ ಮತ್ತು ರಾಜ್ಯ ಸಚಿವರನ್ನು ಆಹ್ವಾನಿಸಿ, ಬಹುತೇಕ ಎಲ್ಲಾ ಇಲಾಖೆಗಳಿಂದ ದೊರೆಯುವ ಸೌಲಭ್ಯಗಳನ್ನು ತನ್ನ ಕ್ಷೇತ್ರದ ಜನತೆಗೆ ನೀಡುವ ಮೂಲಕ ಮೋದಿ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿದ್ದರು. ಇಂತಹ ಒಂದು ಬಾಂಧವ್ಯವೇ ರಾಮದಾಸ್ ಅವರಿಗೆ ಪ್ರಧಾನಿ ನೀಡಿದ ಗುದ್ದಿನ ಗುಟ್ಟು



ಗುಜರಾತ್ ವಿಧಾನಸಭೆ ಚುನಾವಣೆ ನಡೆಯುವ ವೇಳೆ ರಾಮದಾಸ್ ಮತ್ತು ಸಹೋದರ ಶ್ರೀಕಾಂತ್ ದಾಸ್ ಗುಜರಾತ್‌ಗೆ ಪ್ರತಿ ಬಾರಿಯೂ ಭೇಟಿ ನೀಡಿ, ಅವರಿಗೆ ನೈತಿಕ ಸ್ಥೈರ್ಯ, ಸ್ಫೂರ್ತಿ ತುಂಬುತ್ತಾ ಬಂದಿದ್ದಾರೆ. 10ರಿಂದ 15 ದಿನಗಳ ಕಾಲ ಅಲ್ಲೇ ಠಿಕಾಣಿ ಹೂಡಿ ಅಲ್ಲಿನ ಕನ್ನಡ ಸಂಘಟನೆಗಳನ್ನು ಒಗ್ಗೂಡಿಸಿ ಪ್ರಚಾರ ಮಾಡುವುದರ ಜೊತೆಗೆ ಇಂತಹ ಸಭೆಗಳಿಗೆ ಮೋದಿಯವರನ್ನು ಕರೆಸಿ, ಅಲ್ಲಿನ ಕನ್ನಡಿಗರ ಬೆಂಬಲವನ್ನು ಕೊಡಿಸುತ್ತಿದ್ದರು. ಮೋದಿ ಮೂರು ಬಾರಿ ಗುಜರಾತ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದಾಗಲೂ ರಾಮದಾಸ್ ಕುಟುಂಬ ಅಲ್ಲಿ ಹಾಜರಿರುತ್ತಿತ್ತು.

ಅಂದು ಜೂನ್ 20, ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ. ರಾಮದಾಸ್ ಅವರಿಗೆ ಗುದ್ದಿದ ಒಂದು ಪ್ರೀತಿ–ಮಮಕಾರದ ಗುದ್ದು ಇಡೀ ಮೈಸೂರಿನಲ್ಲಿ ಸಂಚಲನವನ್ನುಂಟು ಮಾಡಿದ್ದು, ಹಾಗಾದರೆ ಈ ಗುದ್ದಿನ ಗುಟ್ಟು ಏನಿರಬಹುದು ಎಂಬುದರ ಬಗ್ಗೆ ಭಾರೀ ಪ್ರಮಾಣದ ಚರ್ಚೆಗಳು ಆರಂಭವಾಗಿವೆ.

ನರೇಂದ್ರ ಮೋದಿಯವರು ಗುಜರಾತ್ ಮುಖ್ಯಮಂತ್ರಿ ಆಗುವುದಕ್ಕೆ ಮೊದಲಿನಿಂದಲೂ ಎಸ್.ಎ.ರಾಮದಾಸ್ ಅವರೊಂದಿಗೆ ಆತ್ಮೀಯ ಒಡನಾಟ ಹೊಂದಿರುವುದು ಬ್ರಹ್ಮ ರಹಸ್ಯ. ಆಗ ಮೋದಿ ಅವರು ಪಕ್ಷ ಸಂಘಟನೆಯಲ್ಲಿ ಮಾತ್ರ ತೊಡಗಿಕೊಂಡಿದ್ದರು. ಒಮ್ಮೆ ಮೈಸೂರಿಗೆ ಆಗಮಿಸಿದಂದಿನಿಂದ ರಾಮದಾಸ್ ಅವರೊಂದಿಗಿನ ಒಡನಾಟ ಇನ್ನು ಹೆಚ್ಚಾಯಿತು. ಮೋದಿ ಗುಜರಾತ್ ಮುಖ್ಯಮಂತ್ರಿಯಾದ ನಂತರ ಇಡೀ ದೇಶದ ಗಮನ ಸೆಳೆದರು. ಆದರೆ, ಅದಕ್ಕೂ ಮುನ್ನವೇ ಹಲವಾರು ಬಾರಿ ಸಂಘಟನೆಯ ಕೆಲಸ ಕಾರ್ಯಗಳಿಗಾಗಿ ಮೈಸೂರಿಗೆ ಭೇಟಿ ನೀಡಿದ್ದರು. ಆಗ ರಾಮದಾಸ್ ಅವರ ಮನೆಗೆ ತಪ್ಪದೇ ಭೇಟಿ ನೀಡುತ್ತಿದ್ದರು. ಅವರ ಮನೆಯಲ್ಲೇ ತಾಯಿಯ ಸವಿಯೂಟ. ರಾಮದಾಸ್ ಕುಟುಂಬದ ಜೊತೆ ಅವರದು ಗಾಢ ಸಂಬಂಧ.

ಮಾತ್ರವಲ್ಲ, ಮೋದಿಯವರ ಪ್ರತಿ ಹುಟ್ಟುಹಬ್ಬಕ್ಕೆ ರಾಮದಾಸ್ ಅವರು, ತಾಯಿ ಮತ್ತು ಸಹೋದರರಾದ ಖ್ಯಾತ ಉದ್ಯಮಿ ಶ್ರೀಕಾಂತ್‌ದಾಸ್ ಅವರೊಂದಿಗೆ ಅಹಮದಾಬಾದ್‌ಗೆ ಭೇಟಿ ನೀಡಿ, ಚಾಮುಂಡೇಶ್ವರಿ ಪ್ರಸಾದ, ಮೋದಿಯವರಿಗೆ ಇಷ್ಟವಾದ ಮೈಸೂರು ಪಾಕ್ ಮತ್ತು ಕಾಟನ್ ಬಟ್ಟೆಗಳನ್ನು ಉಡುಗೊರೆಯಾಗಿ ನೀಡುತ್ತಾ ಬಂದಿದ್ದರು. ಇದು ರಾಮದಾಸ್ ಅವರ ತಾಯಿ ನಿಧನರಾಗುವವರೆಗೂ ನಿರಂತರವಾಗಿ ಮುಂದುವರೆದಿತ್ತು. ಆನಂತರ ರಾಮದಾಸ್ ಕುಟುಂಬ ಮೋದಿಯವರ ಹುಟ್ಟುಹಬ್ಬಕ್ಕೆ ಅಲ್ಲಿಗೆ ಹೋಗಿದ್ದಿಲ್ಲ. ಮೋದಿಯವರು ಪ್ರಧಾನಿಯಾದ ನಂತರ ರಾಮದಾಸ್ ಅವರ ಮಾತೃಶ್ರೀ ಅವರು ಇಹಲೋಕ ತ್ಯಜಿಸಿದ್ದರು. ಮೋದಿ ಹುಟ್ಟುಹಬ್ಬಕ್ಕೆ ಶುಭಾಶಯ ಕೋರಲು ಅಹಮದಾಬಾದ್‌ಗೆ ಹೋಗುತ್ತಿದ್ದ ರಾಮದಾಸ್ ಕುಟುಂಬ, ಅವರು ಪ್ರಧಾನಿಯಾದ ನಂತರವಂತೂ ಹುಟ್ಟುಹಬ್ಬದ ಶುಭಾಶಯ ಕೋರಲು ಇಲ್ಲಿವರೆಗೂ ದೆಹಲಿಗೆ ಹೋಗಲೇ ಇಲ್ಲ. ಇದೇ ವಿಚಾರವನ್ನು ಮಹಾರಾಜ ಕಾಲೇಜು ಮೈದಾನದಲ್ಲಿ ರಾಜ್ಯಪಾಲರು ಮತ್ತು ಮುಖ್ಯಮಂತ್ರಿಯವರೊಂದಿಗೆ ಪ್ರಸ್ತಾಪಿಸಿದ ಮೋದಿ, "ನನಗೆ ಬಹಳ ಉಡುಗೊರೆಗಳು ತಪ್ಪಿ ಹೋಗಿದೆ" ಎಂದು ಹೇಳುತ್ತಾ ಹುಸಿ ಕೋಪದಿಂದ ಅವರ ಬೆನ್ನಿಗೆ ವಾತ್ಸಲ್ಯದಿಂದಲೇ ಗುದ್ದಿ, ತಟ್ಟುತ್ತಾ ನಂತರ ಸವರುತ್ತಾ "ತಾಯಿ ಹೋದ ಮೇಲೆ ಅಣ್ಣ ತಮ್ಮಂದಿರು ನನ್ನ ಮರೆತು ಬಿಟ್ಟಿದ್ದೀರಾ" ಎಂದು ನಯವಾಗಿ ತರಾಟೆಗೆ ತೆಗೆದುಕೊಂಡರು.

ಸುಮಾರು ಎರಡೂವರೆ ದಶಕದಿಂದ ಮೋದಿಯವರೊಂದಿಗೆ ಆತ್ಮೀಯ ಸಂಬಂಧ ಹೊಂದಿದ್ದ ರಾಮದಾಸ್, ವೈಯಕ್ತಿಕ ವಿಚಾರವಾಗಲಿ, ತಮ್ಮ ರಾಜಕೀಯ ಬೆಳವಣಿಗೆಗೆ ಮೋದಿಯವರನ್ನು ಬಳಸಿಕೊಂಡಿಲ್ಲ. ಅದೇ ರೀತಿ ಉದ್ಯಮಿಯಾಗಿರುವ ಶ್ರೀಕಾಂತ್‌ದಾಸ್ ಕೂಡ ತನ್ನ ಉದ್ಯಮದ ಬೆಳವಣಿಗೆಗಾಗಿ ಮೋದಿಯವರನ್ನು ಎಂದೂ ಬಳಸಿಕೊಂಡಿಲ್ಲ. ಬದಲಾಗಿ ರಾಮದಾಸ್ ತನ್ನ ಕ್ಷೇತ್ರದ ಜನರಿಗಾಗಿ ಮೋದಿಯವರನ್ನು ಬಳಸಿಕೊಂಡಿದ್ದಾರೆ. ಗರಿಷ್ಠ ಮಟ್ಟದಲ್ಲಿ ಜನರಿಗೆ ಅನುಕೂಲ ಕಲ್ಪಿಸಿದ್ದಾರೆ. ಕೇಂದ್ರ ಸರ್ಕಾರದ ಹಲವು ಯೋಜನೆಗಳನ್ನು ತನ್ನ ಕ್ಷೇತ್ರಕ್ಕೆ ಮೋದಿ ಪ್ರಭಾವ ಬಳಸಿಯೇ ತಂದಿದ್ದಾರೆ. ಉದಾಹರಣೆಗೆ ಕೊರೊನಾ ಸಂದರ್ಭದಲ್ಲಿ ಪ್ರತಿಯೊಂದು ಕ್ಷೇತ್ರಕ್ಕೂ ಇಷ್ಟೇ ಪ್ರಮಾಣದ ಲಸಿಕೆಯೆಂದು ನಿಗದಿಪಡಿಸಿ ವಿತರಿಸಲಾಗಿತ್ತು. ಆದರೆ, ರಾಮದಾಸ್ ಅವರ ಕೆ.ಆರ್. ಕ್ಷೇತ್ರಕ್ಕೆ ಮಾತ್ರ ಲಸಿಕೆಗೆ ಕೊರತೆಯೇ ಇಲ್ಲ. ರಾಮದಾಸ್ ಮೋದಿಯವರೊಂದಿಗಿನ ತಮ್ಮ ಬಾಂಧವ್ಯ ಬಳಸಿಕೊಂಡು ಹೆಚ್ಚಿನ ಪ್ರಮಾಣದ ಲಸಿಕೆಯನ್ನು ತಂದು ತನ್ನ ಕ್ಷೇತ್ರದ ಜನತೆಗೆ ನೀಡಿದ್ದರು. ಹೀಗಾಗಿಯೇ ಇಡೀ ರಾಜ್ಯದಲ್ಲಿ ಶೇ.100ರಷ್ಟು ಲಸಿಕೆ ನೀಡಿದ ಮೊದಲ ಕ್ಷೇತ್ರ ಎಂಬ ಹೆಗ್ಗಳಿಕೆಗೆ ಕೆ.ಆರ್.ಕ್ಷೇತ್ರ ಪಾತ್ರವಾಗಿದೆ. ಅದೇ ರೀತಿ ಆಯುಷ್ಮಾನ್ ಕಾರ್ಡ್ ವಿತರಣೆಯಲ್ಲೂ ರಾಮದಾಸ್ ಸಾಧನೆ ಮಾಡಿದ್ದಾರೆ.

ಬೀದಿಬದಿ ವ್ಯಾಪಾರಿಗಳು ಪ್ರತಿದಿನ ಬೆಳಗ್ಗೆ ಶೇ.10ರಿಂದ 20ರವರೆಗೆ ಬಡ್ಡಿ ದರದಲ್ಲಿ ಲೇವಾದೇವಿದಾರರಿಂದ ದೈನಂದಿನ ವ್ಯಾಪಾರ ವಹಿವಾಟಿಗೆ ಸಾಲ ಪಡೆಯುತ್ತಿದ್ದರು. ವ್ಯಾಪಾರ ಮುಗಿಸಿ ಸಂಜೆ ಆ ಹಣವನ್ನು ಹಿಂತಿರುಗಿಸಿ ಮರುದಿನ ಮತ್ತೆ ಸಾಲದ ಮೊರೆ ಹೋಗುತ್ತಿದ್ದರು. ಇದನ್ನು ಗಮನಿಸಿದ ರಾಮದಾಸ್ ತಾವು ಸಚಿವರಾಗಿದ್ದಾಗ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಬೀದಿಬದಿ ವ್ಯಾಪಾರಿಗಳಿಗಾಗಿ ಬ್ಯಾಂಕ್ ಸ್ಥಾಪಿಸಿ ಪ್ರತಿದಿನ ಅತೀ ಕಡಿಮೆ ಬಡ್ಡಿಯಲ್ಲಿ ಅವರಿಗೆ ಸಾಲ ಸೌಲಭ್ಯ ನೀಡುವ ಒಂದು ಯೋಜನೆಯನ್ನು ಪ್ರಕಟಿಸಿದ್ದರು. ಆದರೆ, ಅಷ್ಟರಲ್ಲಿ ಚುನಾವಣೆ ನೀತಿ ಸಂಹಿತೆ ಅಡ್ಡಿಯಾಯಿತು. ನಂತರದ ಚುನಾವಣೆಯಲ್ಲಿ ಪರಾಭವಗೊಂಡಿದ್ದರಿಂದ ಈ ಯೋಜನೆ ಕಾರ್ಯಗತವಾಗಲೇ ಇಲ್ಲ. ಆದರೆ, ರಾಮದಾಸ್ ಅವರು ಇದೇ ಚಿಂತನೆಯಲ್ಲಿ ಮೋದಿಯವರು ಬೀದಿಬದಿ ವ್ಯಾಪಾರಿಗಳ ಕಲ್ಯಾಣಕ್ಕಾಗಿ ವಿಶೇಷ ಯೋಜನೆಯನ್ನು ಜಾರಿಗೆ ತಂದಿದ್ದಾರೆ ಎಂದರೆ ನರೇಂದ್ರ ಮೋದಿ ಮತ್ತು ಎಸ್.ಎ.ರಾಮದಾಸ್ ಅವರ ಚಿಂತನೆಗಳ ಸಾಮ್ಯತೆ ಗಮನಿಸಬಹುದಾಗಿದೆ.

ಇನ್ನು ಮೋದಿಯವರಂತೆಯೇ ರಾಮದಾಸ್ ಕೂಡ ಸದಾ ಜನಪರ ಚಿಂತನಾಶೀಲರು. ಅವರು ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದಾಗ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಜೆನರಿಕ್ ಔಷಧಿ ಮಳಿಗೆಗಳನ್ನು ತೆರೆದು ಬಡ ಜನರಿಗೆ ಕಡಿಮೆ ದರದಲ್ಲಿ ಮಾತ್ರೆ, ಔಷಧಿ ದೊರೆಯುವಂತೆ ಮಾಡಿದ್ದರು. ಆನಂತರ ಬಂದ ಸರ್ಕಾರ ಜೆನರಿಕ್ ಔಷಧಿ ಮಳಿಗೆಗಳ ಬಗ್ಗೆ ಅಷ್ಟೇನೂ ಗಮನಹರಿಸಲಿಲ್ಲ. ಆದರೆ, ಮೋದಿಯವರು ರಾಮದಾಸ್ ಜಾರಿಗೆ ತಂದಿದ್ದ ಜೆನರಿಕ್ ಔಷಧಿ ಮಳಿಗೆಯಂತೆಯೇ ಇಡೀ ರಾಷ್ಟ್ರದಲ್ಲಿ ಜನೌಷಧಿ ಮಳಿಗೆಗಳನ್ನು ತೆರೆದು ಬಡಜನರಿಗೆ ಕಡಿಮೆ ದರದಲ್ಲಿ ಔಷಧಿ ಕಲ್ಪಿಸುತ್ತಿದೆ. ಈ ಯೋಜನೆ ಜಾರಿಗೆ ಬಂದಾಗಲೂ ರಾಮದಾಸ್ ಆಗ ಶಾಸಕರಾಗಿಲ್ಲದಿದ್ದರೂ ತನ್ನ ಕ್ಷೇತ್ರದಲ್ಲಿ ಜನೌಷಧಿ ಮಳಿಗೆ ತೆರೆಯುವಂತೆ ನೋಡಿಕೊಂಡರು.

ಮೈಸೂರು ಮಿತ್ರ ಗುರುವಾರ 23 ಜೂನ್ 2022

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯಲ್ಲಿ ಯೋಗ ದಿನಾಚರಣೆ



ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯಲ್ಲಿ ಯೋಗ ದಿನವನ್ನು ಆಚರಿಸಲಾಯಿತು. ಮಾನವೀಯತೆಗಾಗಿ ಯೋಗ ಎಂಬ ನುಡಿಯೊಂದಿಗೆ, ಬಿಳಿ ಮತ್ತು ನೀಲಿ ಬಣ್ಣದ ಸಂಕೇತದ ವಸ್ತ್ರವನ್ನು ಧರಿಸಿ ಯೋಗದ ಹಲವಾರು ಪ್ರಕಾರಗಳನ್ನು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಮಾಡಿ ಯೋಗದ ಮಹತ್ವವನ್ನು ತಿಳಿದುಕೊಂಡರು ಹಾಗೂ ಯೋಗ ಭಾರತದ ಪ್ರಾಚೀನ ಸಂಪ್ರದಾಯದ ಅಮೂಲ್ಯ ಕೊಡುಗೆಯಾಗಿದೆ. ಯೋಗವು ಮನಸ್ಸು ಮತ್ತು ದೇಹ ಚಿಂತನೆ ಮತ್ತು ಕ್ರಿಯೆ ಸಂಯಮ ಹಾಗೂ ಸಾರ್ಥಕತೆಯನ್ನು ಒಗ್ಗೂಡಿಸುತ್ತದೆ ಎಂದು ನೈಪುಣ್ಯ ಶಾಲೆ ಮುಖ್ಯಸ್ಥ ಆರ್.ರಘು, ಪ್ರಾಂಶುಪಾಲರಾದ ಶಿಲ್ಪ ಪ್ರಶಾಂತ್ ಮಕ್ಕಳಿಗೆ ತಿಳಿಸಿದರು.

ಬಾಲಕಾರ್ಮಿಕ ಪದ್ಧತಿ ವಿರುದ್ಧ ಮೈಸೂರಲ್ಲಿ ಜಾಗೃತಿ ಜಾಥಾ

ಮೈಸೂರು,ಜೂ.22(ಪಿಎಂ)– ಮಕ್ಕಳನ್ನು ದುಡಿತಕ್ಕೆ ಹಚ್ಚಬೇಡಿ, ಅವರು ಓದಲು ಅವಕಾಶ ಮಾಡಿಕೊಡಿ... ಮಕ್ಕಳ ದುಡಿಮೆ ಅಭಿವೃದ್ಧಿ ಕಡಿಮೆ... ಮಕ್ಕಳ ಶಿಕ್ಷಣ ವಿಕಾಸದ ಲಕ್ಷಣ... ಶಾಲೆಯ ಕಡೆ ನಮ್ಮ ನಡೆ... ಎಂಬಿತ್ಯಾದಿ ಘೋಷ ವಾಕ್ಯಗಳ ಫಲಕಗಳನ್ನಿಡಿದು ಬಾಲ ಕಾರ್ಮಿಕ ಪದ್ಧತಿ ವಿರುದ್ಧ ಶಾಲಾ ಮಕ್ಕಳು ಜಾಗೃತಿ ಮೂಡಿಸಿದರು.

ಮೈಸೂರಿನ ರಾಜೇಂದ್ರನಗರದಲ್ಲಿ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ (ಆರ್‌ಎಲ್‌ಹೆಚ್‌ಪಿ), ಚೈಲ್ಡ್‌ಲೈನ್–1098 ಮತ್ತು ರಾಜೇಂದ್ರನಗರದ ಕರ್ನಾಟಕ ಪಬ್ಲಿಕ್ ಶಾಲೆ ಸಂಯುಕ್ತಾಶ್ರಯದಲ್ಲಿ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನದ ಅಂಗವಾಗಿ ಬುಧವಾರ ಹಮ್ಮಿಕೊಂಡಿದ್ದ ಜಾಗೃತಿ ಜಾಥಾದಲ್ಲಿ ಇಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆ ಮಕ್ಕಳು ಹೀಗೆ ಅರಿವು ಮೂಡಿಸಿದರು.

ಶಾಲೆ ಆವರಣದಲ್ಲಿ ಚಾಲನೆ ಪಡೆದ ಜಾಥಾವು, ಕುರಿಮಂಡಿ, ರಾಜೇಂದ್ರನಗರ ಮುಖ್ಯದ್ವಾರ ಸೇರಿದಂತೆ ಇನ್ನಿತರ ಮುಖ್ಯ ರಸ್ತೆಗಳಲ್ಲಿ ಸಾಗಿ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸಾರ್ವಜನಿಕರ ಸಹಕಾರ ಅಗತ್ಯ ಎಂಬ ಸಂದೇಶ ಸಾರಿತು.



ಮೈಸೂರಿನ ರಾಜೇಂದ್ರನಗರದ ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ಜಾಗೃತಿ ಜಾಥಾಕ್ಕೆ ಸಹಾಯಕ ಕಾರ್ಮಿಕ ಆಯುಕ್ತರಾದ ನಾಜಿಯಾ ಸುಲ್ತಾನ ಚಾಲನೆ ನೀಡಿದರು.

ಜಾಥಾಗೆ ಚಾಲನೆ ನೀಡಿದ ಸಹಾಯಕ ಕಾರ್ಮಿಕ ಆಯುಕ್ತರಾದ ನಾಜಿಯಾ ಸುಲ್ತಾನ ಮಾತನಾಡಿ, ಪ್ರತಿ ಮಕ್ಕಳು ತಪ್ಪದೆ ಶಿಕ್ಷಣ ಪಡೆಯುವುದರಿಂದ ಸಮಾಜದ ಪ್ರಗತಿ ಸಾಧ್ಯವಾಗಲಿದೆ. ಮಕ್ಕಳ ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡುವುದು ಹಾಗೂ ಅವರಿಗೆ ತಪ್ಪದೇ ಶಿಕ್ಷಣ ಕೊಡಿಸುವುದು ಪೋಷಕರು ಹಾಗೂ ಸಮಾಜದ ಕರ್ತವ್ಯ. ಈ ಬಗ್ಗೆ ನಮ್ಮ ಸಮಾಜದಲ್ಲಿ ಇನ್ನು ಹೆಚ್ಚಿನ ಅರಿವು ಮೂಡಬೇಕಿದೆ ಎಂದು ಹೇಳಿದರು.

ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಪೊಲೀಸ್ ಇಲಾಖೆ, ಕಾರ್ಮಿಕ ಇಲಾಖೆ, ಕಂದಾಯ ಇಲಾಖೆ, ಪಂಚಾಯತ್ ರಾಜ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಾರ್ಖಾನೆ ಮತ್ತು ಬಾಯ್ಲರ್‌ಗಳ ಇಲಾಖೆ, ನಗರಾಭಿವೃದ್ಧಿ ಇಲಾಖೆ, ರೇಷ್ಮೆ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೃಷಿ ಇಲಾಖೆ ಹಾಗೂ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಸೇರಿದಂತೆ 13 ಇಲಾಖೆಗಳು ಕೆಲಸ ಮಾಡುತ್ತಿವೆ. ಈ ಇಲಾಖೆಗಳಿಗೆ ಸಾರ್ವಜನಿಕರ ಸಹಕಾರವೂ ಮುಖ್ಯವಾಗುತ್ತದೆ ಎಂದರು.

ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಡಿ.ಕೆ.ಶ್ರೀನಿವಾಸಮೂರ್ತಿ ಮಾತನಾಡಿ, ತಮ್ಮ ಹಕ್ಕುಗಳ ಬಗ್ಗೆ ಯಾವುದೇ ಮಕ್ಕಳಿಗೆ ಅರಿವು ಇರುವುದಿಲ್ಲ. ಅವರಿಗೆ ಸವಲತ್ತು ಕಲ್ಪಿಸಿಕೊಡುವುದು ಪೋಷಕರು ಹಾಗೂ ಸಮಾಜದ ಜವಾಬ್ದಾರಿ. ಆರ್ಥಿಕವಾಗಿ ಹಿಂದುಳಿದ ಕುಟುಂಬಗಳು ವಾಸಿಸುವ ಪ್ರದೇಶಗಳಲ್ಲಿ ಮಕ್ಕಳನ್ನು ದುಡಿಮೆಗೆ ಹಚ್ಚುವುದು ಹೆಚ್ಚಿದೆ. ಇದರ ನಿವಾರಣೆಗೆ ಗಮನ ನೀಡಬೇಕಿದೆ.

> “ಮೈಸೂರು ಚೈಲ್ಡ್ ಲೈನ್ 1098ಕ್ಕೆ ಮಕ್ಕಳೇ ಕರೆ ಮಾಡಿ ಬಾಲಕಾರ್ಮಿಕ ಪದ್ಧತಿಗೆ ಸಿಲುಕಿರುವ ತಮ್ಮ ಸಹಪಾಠಿಗಳ ಬಗ್ಗೆ ಮಾಹಿತಿ ನೀಡಿರುವುದು ಸಾಕಷ್ಟಿದ್ದು, ಇದು ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸಹಕಾರಿ.
> –ನಾಜಿಯಾ ಸುಲ್ತಾನ

ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಸರ್ಕಾರ ಕನಿಷ್ಠ ಪ್ರಮಾಣದ ಸೌಲಭ್ಯಗಳನ್ನು ಕಲ್ಪಿಸುತ್ತಿರುವ ಹಿನ್ನೆಲೆಯಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಪೋಷಕರು ಆತಂಕ ಪಡುವ ಅಗತ್ಯವಿಲ್ಲ ಎಂದು ಹೇಳಿದರು.

ಮೈಸೂರು ನಗರ ಮಕ್ಕಳ ವಿಶೇಷ ಪೊಲೀಸ್ ಘಟಕದ ಸಿಡಬ್ಲ್ಯೂಪಿಸಿ ಪ್ರಸನ್ನಕುಮಾರ್, ರಾಜೇಂದ್ರನಗರ ಕರ್ನಾಟಕ ಪಬ್ಲಿಕ್ ಶಾಲೆ ಮುಖ್ಯಶಿಕ್ಷಕ ಎನ್.ಎಂ.ವಿಜಯೇಂದ್ರ ಕುಮಾರ್, ಆರ್‌ಎಲ್ ಹೆಚ್‌ಪಿ ನಿರ್ದೇಶಕಿ ಸರಸ್ವತಿ, ಮೈಸೂರು ನಗರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಧುಸೂದನ್, ಎನ್‌ಆರ್ ಪೊಲೀಸ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ಗಂಗಾಧರ್ ಮತ್ತಿತರರು ಹಾಜರಿದ್ದರು.

ತಾಲೂಕು ಮಡಿವಾಳರ ಸಂಘದ ನೂತನ ಪದಾಧಿಕಾರಿಗಳ ಆಯ್ಕೆ



ಮೈಸೂರು, ಜೂ.22(ಆರ್‌ಕೆಬಿ)–ಮೈಸೂರು ತಾಲೂಕು ವೀರ ಮಡಿವಾಳರ ಸಂಘದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಂಘದ ಅಧ್ಯಕ್ಷ ಜಯರಾಮ ದುದ್ದಗೆರೆ, ಮೈಸೂರು ಜಿಲ್ಲಾ ಮಡಿವಾಳರ ಸಂಘದ ಉಪಾಧ್ಯಕ್ಷ ಸಿದ್ದಪ್ಪಾಜಿ, ಕಾರ್ಯಾಧ್ಯಕ್ಷ ರಾಜು, ಪ್ರಧಾನ ಕಾರ್ಯದರ್ಶಿ ಚನ್ನಕೇಶವ ಅವರ ಸಮ್ಮುಖದಲ್ಲಿ ಸಂಘದ ಪದಾಧಿಕಾರಿಗಳಾಗಿ ಜಯರಾಮ ದುದ್ದಗೆರೆ (ಅಧ್ಯಕ್ಷ), ಮೈದನಹಳ್ಳಿ ಸೋಮಣ್ಣ (ಕಾರ್ಯಾಧ್ಯಕ್ಷ), ಬೆಳವಾಡಿ ಪಿ.ಮಾದೇವ (ಉಪಾಧ್ಯಕ್ಷ), ಆಲನಹಳ್ಳಿ ಎಸ್.ಮಾದುರಾಜು (ಪ್ರಧಾನ ಕಾರ್ಯದರ್ಶಿ), ವಿಜಯ ಕುಮಾರ್ (ಖಜಾಂಚಿ), ಹಾರೋಹಳ್ಳಿ ಲಿಂಗರಾಜು (ಸಹ ಕಾರ್ಯದರ್ಶಿ), ಕೀರಾಳು ಮಹೇಶ್ (ಸಂಘಟನಾ ಕಾರ್ಯದರ್ಶಿ), ಮೋಸಂಬಾಯನಹಳ್ಳಿ ರವಿ (ಸಂಚಾಲಕ), ಮಹದೇವ, ಮೆಲ್ಲಹಳ್ಳಿ ವೆಂಕಟೇಶ್, ಹಂಚ್ಯ ಮಹದೇವ, ಆಲನಹಳ್ಳಿ ಸಿ.ರಾಜು (ನಿರ್ದೇಶಕರು) ಆಯ್ಕೆಯಾಗಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಆಲನಹಳ್ಳಿ ಎಸ್.ಮಾದುರಾಜು, ಸೋಮಣ್ಣ ಮೈದನಹಳ್ಳಿ, ಶಿವಣ್ಣ ಇನ್ನಿತರರು ಉಪಸ್ಥಿತರಿದ್ದರು.

ಜೂ.25, ತಾಂಡವಪುರ ಎಂಐಟಿ ಕಾಲೇಜಿನಲ್ಲಿ ಉದ್ಯೋಗ ಮೇಳ

ಮೈಸೂರು, ಜೂ.22(ಆರ್‌ಕೆಬಿ)– ನಂಜನಗೂಡು ತಾಲೂಕಿನ ತಾಂಡವಪುರ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯ (ಎಂಐಟಿ ಕಾಲೇಜು)ದಲ್ಲಿ ಲೀಡ್ ಟ್ರೈನಿಂಗ್ ಕಾರ್ಪೋರೇಷನ್ ಸಲ್ಯೂಷನ್ಸ್ ಸಹಯೋಗದಲ್ಲಿ ಜೂ.25ರಂದು ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಪ್ರಾಂಶುಪಾಲ ಡಾ.ವೈ.ಟಿ.ಕೃಷ್ಣೇಗೌಡ ತಿಳಿಸಿದ್ದಾರೆ.

ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇಳದಲ್ಲಿ ಸುಮಾರು 50ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿದ್ದು, 10ನೇ ತರಗತಿ, ದ್ವಿತೀಯ ಪಿಯು, ಪಾಲಿಟೆಕ್ನಿಕ್ ಡಿಪ್ಲೊಮಾ, ಐಟಿಐ ಹಾಗೂ ಯಾವುದೇ ಪದವಿ ಹೊಂದಿರುವ ಅರ್ಹ ಅಭ್ಯರ್ಥಿಗಳು ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ ಎಂದರು. ಆಯ್ಕೆಯಾದ ಅಭ್ಯರ್ಥಿಗಳ ಜೀವನ ಮಟ್ಟ ಸುಧಾರಣೆಗಾಗಿ ಸ್ವಾವಲಂಬನೆಯ ಬದುಕಿಗಾಗಿ ಈ ಮೇಳ ಹೆಚ್ಚು ಉಪಯುಕ್ತವಾಗಲಿದೆ. ಉದ್ಯೋಗಾಕಾಂಕ್ಷಿಗಳಿಗೆ ಸ್ಥಳಕ್ಕೆ ಬರಲು ಉಚಿತ ಬಸ್ ಸೌಲಭ್ಯ ಕಲ್ಪಿಸಿಕೊಡಲಾಗುತ್ತಿದೆ. ಹೆಚ್ಚಿನವರು ಉದ್ಯೋಗ ಮೇಳದಲ್ಲಿ ಭಾಗವಹಿಸುವಂತೆ ಕೋರಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ– 9538469916, 9980832371 ಸಂಪರ್ಕಿಸಬಹುದು.

ಯೋಗದಿಂದ ದೀರ್ಘ ಕಾಲದ ಆರೋಗ್ಯ ವೃದ್ಧಿ



ಮೈಸೂರು ,ಜೂ.22– ಯೋಗದಿಂದ ದೀರ್ಘ ಕಾಲದ ಆರೋಗ್ಯ ವೃದ್ಧಿ ಆಗಲಿದೆ ಎಂದು ಸರಸ್ವತಿಪುರಂನಲ್ಲಿರುವ ಮಹಾಬೋಧಿ ಶಾಲೆಯಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಶಿಕ್ಷಣ ಸಂಯೋಜಕ ವೆಂಕಟೇಶ್ವರಲು ಅಭಿಪ್ರಾಯಪಟ್ಟರು.

ಮೈಸೂರಿನ ಅರಮನೆಯ ಆವರಣದಲ್ಲಿ ಪ್ರಧಾನಿ ಮೋದಿಯವರ ಸಮ್ಮುಖದಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ವಿವಿಧ ಶಾಲೆಗಳಿಂದ ಸಾವಿರಾರು ಮಕ್ಕಳು ಭಾಗವಹಿಸಿದ್ದಾರೆ. ಅದರಲ್ಲಿ ವಿಶೇಷವಾಗಿ ನಮ್ಮ ಶಾಲೆಯಿಂದ ಅತೀ ಹೆಚ್ಚು ಮಕ್ಕಳು ಈ ಐತಿಹಾಸಿಕ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ನಮ್ಮ ಶಾಲೆಗೆ ಹೆಮ್ಮೆಯ ವಿಚಾರ ಮತ್ತು ನಮ್ಮ ಮಕ್ಕಳಿಗೂ ಸ್ಫೂರ್ತಿ ಎಂದರು.

ಸುಮಾರು 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಯೋಗಾಭ್ಯಾಸ ಮಾಡಿದರು. ಕರ್ನಾಟಕ 14 ಬೆಟಾಲಿಯನ್ ಕಮ್ಯಾಂಡಿಂಗ್ ಆಫೀಸರ್ ಕರ್ನಲ್ ಮನೀಷ ಪ್ರಸಾದ್ ಯೋಗಾಭ್ಯಾಸ ನಡೆಸಿಕೊಟ್ಟರು. ಪೂಜ್ಯ ಸೋಬಾನ ಭಂತೇ, ಉಪಪ್ರಾಂಶುಪಾಲ ದ್ವಾರಕೀಶ್, ಶಿಕ್ಷಕರಾದ ಕೌಷರ್‌ಬಾನು, ಲಿಖಿತ, ಸುರೇಖ, ಎನ್‌ಸಿಸಿ ಬೆಟಾಲಿಯನ್ ಹಾಜರಿದ್ದರು.

ಮನೆ ಕಿಟಕಿ ಗಾಜು ಒಡೆದು 6.56 ಲಕ್ಷ ಚಿನ್ನಾಭರಣ ಕಳವು

ಮೈಸೂರು, ಜೂ.22– ಇಂಜಿನಿಯರ್‌ರೊಬ್ಬರ ಮನೆ ಕಿಟಕಿ ಗಾಜು ಒಡೆದು ಒಳ ನುಗ್ಗಿದ ಖದೀಮರು 4 ಲಕ್ಷ ನಗದು ಸೇರಿದಂತೆ 6.56 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಮೈಸೂರು ತಾಲೂಕು ಮೂಗನಹುಂಡಿ ಗ್ರಾಮದಲ್ಲಿ ಜೂ.19ರ ರಾತ್ರಿ ನಡೆದಿದೆ.

ವಿವರ: ಮೂಗನಹುಂಡಿ ಗ್ರಾಮದ ಇಂಜಿನಿಯರ್ ಎಂ.ಚಂದ್ರ ಅವರ ಸಹೋದರ ರವಿ ಅವರ ರಿಸೆಪ್ಷನ್ ಜೂ.19ರಂದು ಸಂಜೆ ಪರಸಯ್ಯನಹುಂಡಿ ಗ್ರಾಮದ ಟಿ.ಎನ್. ಕನ್ವೆನ್ಷನ್ ಹಾಲ್‌ನಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕಾಗಿ ಮನೆಯವರೆಲ್ಲ ಅಂದು ಸಂಜೆ 6 ಗಂಟೆ ಸುಮಾರಿನಲ್ಲಿ ಮನೆಗೆ ಬೀಗ ಹಾಕಿಕೊಂಡು ಹೋಗಿದ್ದರು. ರಾತ್ರಿ 12 ಗಂಟೆ ಸುಮಾರಿನಲ್ಲಿ ಚಂದ್ರ ಅವರ ಕೆಲ ಸಂಬಂಧಿಕರು ಮಲಗಲು ಮನೆಗೆ ಬಂದಾಗ ಮನೆ ಬಾಗಿಲ ಪಕ್ಕದಲ್ಲಿದ್ದ ಕಿಟಕಿ ಗಾಜು ಒಡೆದಿರುವುದು ಹಾಗೂ ಮನೆಯ ಸಾಮಾನುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುವುದು ಕಂಡು ಬಂದಿದೆ.

ಮಾಹಿತಿ ಅರಿತು ಮನೆಗೆ ಬಂದ ಚಂದ್ರ ನೋಡಿದಾಗ 5 ಗ್ರಾಂ. ಡೈಮಂಡ್ ರಿಂಗ್, ಒಟ್ಟು 34 ಗ್ರಾಂ ತೂಕದ 6 ಚಿನ್ನದ ಉಂಗುರಗಳು, 5 ಗ್ರಾಂ. ಕಿವಿಯ ರಿಂಗ್, 16 ಗ್ರಾಂ ನೆಕ್ಲೆಸ್, ತಲಾ 3 ಗ್ರಾಂ. 2 ಓಲೆ, 4 ಲಕ್ಷದ 3 ಸಾವಿರ ನಗದು ಸೇರಿದಂತೆ 6,56,500 ರೂ. ಮೌಲ್ಯದ ಚಿನ್ನಾಭರಣ ಕಳವಾಗಿರುವುದು ಗೊತ್ತಾಗಿದೆ. ಮದುವೆ ಕಾರ್ಯ ಮುಗಿದ ನಂತರ ಚಂದ್ರ ಅವರು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಜಯಪುರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ನಿಧನ

ಗಂಗಮ್ಮ



ಮೈಸೂರು,ಜೂ.22–ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ದಿವಂಗತ ಲಿಂಗಯ್ಯನವರ ಧರ್ಮಪತ್ನಿ ಗಂಗಮ್ಮ(87) ಕೆಎಸ್‌ಆರ್‌ಟಿಸಿ ಲೇಔಟ್‌ನಲ್ಲಿರುವ ತಮ್ಮ ನಿವಾಸದಲ್ಲಿ ಬುಧವಾರ ಬೆಳಗ್ಗೆ ನಿಧನರಾದರು. ದಿವಂಗತರು ಪುತ್ರ ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಅಸಿಸ್ಟೆಂಟ್ ಅಡ್ಮಿನಿಸ್ಟ್ರೇಷನ್ ಆಫೀಸರ್ ಎಸ್.ಎಲ್. ಉಮಾಮಹೇಶ್ವರ, ಪುತ್ರಿಯರಾದ ರೇಣುಕಾದೇವಿ, ಯೋಗೇಶ್ವರಿ, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಬುಧವಾರ ಸಂಜೆ ಚಾಮುಂಡಿಬೆಟ್ಟದ ತಪ್ಪಲಲ್ಲಿರುವ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿತು.

ಕೆಎಂಪಿಕೆ ಚಾರಿಟಬಲ್ ಟ್រಸ್ಟ್ ವತಿಯಿಂದ ವಿಶ್ವ ಸಂಗೀತ ದಿನ ಆಚರಣೆ

ಸಂಗೀತ ಸಾಧಕರಿಗೆ ‘ಕಲಾ ಸಾರಥಿ’ ಪ್ರಶಸ್ತಿ ಪ್ರದಾನ



ಮೈಸೂರಿನ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಸಂಗೀತ ಸಾಧಕರಿಗೆ ‘ಸಂಗೀತ ಕಲಾ ಸಾರಥಿ’ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಜೂ.22(ಆರ್‌ಕೆಬಿ)–‘ವಿಶ್ವ ಸಂಗೀತ ದಿನ’ದ ಅಂಗವಾಗಿ ಮೈಸೂರಿನ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದ ಸಭಾಂಗಣದಲ್ಲಿ ಸಂಗೀತ ಸಾಧಕರಿಗೆ ‘ಸಂಗೀತ ಕಲಾ ಸಾರಥಿ’ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ವೀಣೆಯಲ್ಲಿ ಪಾಂಡಿತ್ಯ ಪಡೆದು ದೇಶ ವಿದೇಶಗಳಲ್ಲಿ ಕಾರ್ಯಕ್ರಮ ನೀಡಿರುವ ವಿದ್ವಾನ್ ಆರ್.ಕೆ.ಪದ್ಮನಾಭ, ಖ್ಯಾತ ಪಿಟೀಲು ವಾದಕರಾದ ವಿದೂಷಿ ಸಿ.ಎಸ್.ನಾಗರತ್ನ, ದಾಸ ಸಾಹಿತ್ಯ, ಶಾಸ್ತ್ರೀಯ ಸಂಗೀತ ಗಾಯಕಿ, ಭರತನಾಟ್ಯದಲ್ಲಿ ಪ್ರಥಮ ಶ್ರೇಣಿ ಪಡೆದ ವಿದೂಷಿ ದೀಪಿಕಾ ಪಾಂಡುರಂಗಿ, ತಾಳವಾದ್ಯ ಪ್ರವೀಣ, ಮೃದಂಗ, ಮೋರ್ಚಿಂಗ್, ಘಟಂ ವಾದಕ ವಿದ್ವಾನ್ ವಿ.ಎಸ್.ರಮೇಶ್, ಅಂಧರು– ಕರ್ನಾಟಕ ಶಾಸ್ತ್ರೀಯ ಗಾಯಕ, ಕೀಬೋರ್ಡ್ ವಾದಕರಾದ ವಿದ್ವಾನ್ ಹೆಚ್.ಪಿ.ಕಿರಣ್, ಸ್ಯಾಕ್ಸೋಫೋನ್ ವಾದಕ, ಮೈಸೂರು ಅರಮನೆ ವಿದ್ವಾಂಸರಾದ ವಿದ್ವಾನ್ ಯದುಕುಮಾರ್ ಅವರನ್ನು ಬುಧವಾರ ಸನ್ಮಾನಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಸಂಗೀತ ಸಾಧಕರನ್ನು ಗೌರವಿಸಿದರೆ ನಮ್ಮನ್ನು ನಾವು ಗೌರವಿಸಿಕೊಂಡಂತೆ. ಸಂಗೀತಕ್ಕೆ ದೇಶದಲ್ಲಿ ಮೊದಲನೇ ಸ್ಥಾನ ಸಿಗಬೇಕಿತ್ತು. ಆದರೆ ಸಿಕ್ಕಿಲ್ಲ. ಸಂಗೀತಗಾರರು ಸ್ವಾಭಿಮಾನಿಗಳು ಎಂದರಲ್ಲದೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸರ್ಕಾರ ಹೆಚ್ಚಿನ ಅನುದಾನ ಮೀಸಲಿಟ್ಟರೆ ಸಂಗೀತ ಕ್ಷೇತ್ರವನ್ನು ಮತ್ತಷ್ಟು ಬೆಳೆಸಬಹುದು ಎಂದು ಸಲಹೆ ನೀಡಿದರು.

ಹಳ್ಳಿ ಹಳ್ಳಿಗಳಲ್ಲೂ ಇರುವ ಸಂಗೀತ ಪ್ರತಿಭೆಗಳನ್ನು ಪತ್ತೆಹಚ್ಚಿ ಅವರಿಗೆ ಸಹಕಾರ, ಪ್ರೋತ್ಸಾಹ ನೀಡಿದರೆ ಸಂಗೀತ ಕ್ಷೇತ್ರ ಇನ್ನಷ್ಟು ಬೆಳೆಯಲು ಸಾಧ್ಯವಾಗುತ್ತದೆ. ಯೋಗ ನಗರಿ ಮೈಸೂರಿನಲ್ಲಿ ಯೋಗ ದಿನೋತ್ಸವದಲ್ಲಿ ಪಾಲ್ಗೊಳ್ಳುವ ಮೂಲಕ ಮೈಸೂರನ್ನು ವಿಶ್ವ ಮಟ್ಟದಲ್ಲಿ ಗಮನ ಸೆಳೆಯುವಂತೆ ಮಾಡಿದ ಪ್ರಧಾನಿ ಮೋದಿ ಅವರು ಸಂಗೀತ ನಗರಿಯೂ ಆಗಿರುವ ಮೈಸೂರಿನಲ್ಲಿ ವಿಶ್ವ ಮಟ್ಟದ ಸಂಗೀತ ಕಾರ್ಯಕ್ರಮ ಏರ್ಪಡಿಸಿ, ಅದರಲ್ಲಿ ಭಾಗವಹಿಸುವಂತಾಗಬೇಕು ಎಂದು ಆಶಿಸಿದರು.

ಚಿಂತಕ ರಘುರಾಮ್ ವಾಜಪೇಯಿ ಮಾತನಾಡಿ, ಮೈಸೂರು ಅರಮನೆ ಕಲಾವಿದರು ಸಂಗೀತದಲ್ಲಿ ಹೆಸರು ಮಾಡಿದ್ದಾರೆ. ಮೈಸೂರು ಮಹಾರಾಜರು ಸಂಗೀತ ಕ್ಷೇತ್ರಕ್ಕೆ ದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ಹಾಗಾಗಿ ಮೈಸೂರು ಸಂಗೀತ ನಗರಿಯು ಹೌದು ಎಂದು ಹೇಳಿದರು.

ಕಸಾಪ ಮಾಜಿ ಅಧ್ಯಕ್ಷ ವೈ.ಡಿ.ರಾಜಣ್ಣ ಮಾತನಾಡಿ, ವಿಶ್ವ ಯೋಗ ದಿನ ಮತ್ತು ವಿಶ್ವ ಸಂಗೀತ ದಿನ ಒಂದೇ ದಿನ ಬಂದಿರುವುದು ವಿಶೇಷವಾಗಿದೆ. ಸಂಗೀತ ಮನೋಲ್ಲಾಸದ ಜೊತೆಗೆ ಮನೋವಿಕಾಸ ಉಂಟು ಮಾಡುತ್ತದೆ. ಕಾಯಿಲೆಯನ್ನು ಗುಣಪಡಿಸುವ ಶಕ್ತಿ ಸಂಗೀತಕ್ಕಿದೆ. ಜಿಲ್ಲಾಡಳಿತ ಮತ್ತು ಸರ್ಕಾರ ಸಂಗೀತ ದಿನವನ್ನು ಸಂಭ್ರಮದಿಂದ ಆಚರಿಸುವಂತಾಗಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ವೆಂಗಿಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಎಸ್.ಗಿರೀಶ್, ಸಂಗೀತ ಶಿಕ್ಷಕ ರಾಘವೇಂದ್ರ ಪ್ರಸಾದ್, ಗಾಯಕಿ ಶ್ವೇತಾ ಮಡಪ್ಪಾಡಿ, ಯುವ ಮುಖಂಡ ಅಜಯ್ ಶಾಸ್ತ್ರಿ ಇದ್ದರು.

ವಿ.ದೀಪ್ತಿಪೂರ್ಣಳಿಗೆ 564 ಅಂಕ



ಮೈಸೂರು,ಜೂ.22– ಮೈಸೂರಿನ ಪ್ರಮತಿ ಪಿಯು ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ವಿ.ದೀಪ್ತಿ ಪೂರ್ಣ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.94ರಷ್ಟು ಅಂಕ ಗಳಿಸಿ ಗಮನ ಸೆಳೆದಿದ್ದಾರೆ. ವಿಜ್ಞಾನ ವಿಭಾಗದ ವಿದ್ಯಾರ್ಥಿನಿಯಾಗಿದ್ದ ಈಕೆ 600 ಅಂಕಗಳಿಗೆ 564 ಅಂಕಗಳನ್ನು ಪಡೆದಿದ್ದು, ಈಕೆ ನಗರದ ನಿಮಿಷಾಂಬ ಬಡಾವಣೆಯ ನಿವಾಸಿ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ವಿ.ವಿಜಯ್‌ಕುಮಾರ್ ನಾಗನಾಳ ಹಾಗೂ ಹೆಚ್.ಡಿ.ಕೋಟೆ ಹಿರೇಹಳ್ಳಿ ಕಾಲೋನಿಯ ಸರ್ಕಾರಿ ಪ್ರೌಢಶಾಲೆ ಸಹ ಶಿಕ್ಷಕಿ ವಿ.ಎಸ್.ಗೀತಾ ದಂಪತಿ ಪುತ್ರಿ.

ಮೈಸೂರಿನ ಬಾಲೆ ಅರ್ಜಂಟೈನಾ ವಿಶ್ವ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ಗೆ ಆಯ್ಕೆ



ಮೈಸೂರು, ಜೂ. 22 – ಕಲ್ಪನಾ ಕುಟ್ಟಪ್ಪ ಎಂಬ ಮೈಸೂರಿನ ಬಾಲೆ ಈಗಾಗಲೇ ಹಲವಾರು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಸ್ಕೇಟಿಂಗ್‌ನಲ್ಲಿ ಹೆಸರು ಮಾಡಿರುವ ಪ್ರತಿಭಾವಂತೆ. ಕಳೆದ ತಿಂಗಳು ಚಂಡೀಗಢದಲ್ಲಿ ನಡೆದ ರಾಷ್ಟ್ರ ಮಟ್ಟದ ಸ್ಕೇಟಿಂಗ್‌ನಲ್ಲಿ ಮೂರು ಚಿನ್ನದ ಪದಕ ಬಾಚಿರುವ ಈಕೆ, ಇದೀಗ ವಿಶಾಖಪಟ್ಟಣದಲ್ಲಿ ನಡೆದ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿ ಚಿನ್ನದ ಪದಕ ಗೆದ್ದು ಇದೀಗ ಅ. 24ರಿಂದ ನವಂಬರ್ 14ರವರೆಗೂ ಅರ್ಜಂಟೈನಾದ ಬ್ಯೂನಸ್‌ಐರಿಸ್‌ನಲ್ಲಿ ನಡೆಯುವ ವಿಶ್ವ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಿದ್ದಾಳೆ. ಒಟ್ಟು ಹತ್ತೊಂಭತ್ತು ಮಂದಿಯ ಈ ಸ್ಕೇಟಿಂಗ್ ತಂಡದಲ್ಲಿ ಮೈಸೂರಿನ ಈ ಬಾಲೆಯೂ ಭಾಗವಹಿಸುತ್ತಿದ್ದು, ಇವಳಿಗೆ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಲು ಯಾವುದಾದರೂ ಸಂಘ ಸಂಸ್ಥೆಗಳು ಆರ್ಥಿಕ ನೆರವು ನೀಡಬೇಕಿದೆ.

ಇಂದಿನಿಂದ 4 ದಿನ ಸಾಧಾರಣ ಮಳೆ

ಮೈಸೂರು, ಜೂ.22(ಆರ್‌ಕೆಬಿ)–ಭಾರತೀಯ ಹವಾಮಾನ ಇಲಾಖೆ ನೀಡಿರುವ ಹವಾಮಾನ ಮುನ್ಸೂಚನೆಯಂತೆ ಮೈಸೂರು ಭಾಗವಾದ ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ ಜಿಲ್ಲೆಗಳಲ್ಲಿ ಜೂ.23ರಿಂದ 26ರವರೆಗೆ ಸಾಧಾರಣ ಮಳೆಯಾಗಲಿದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.



ಕೊಡಗು ಜಿಲ್ಲೆಯಲ್ಲಿ 4 ದಿನಗಳ ಅವಧಿಯಲ್ಲಿ ಒಟ್ಟು 62 ಮಿ.ಮೀ., ಮೈಸೂರು ಜಿಲ್ಲೆಯಲ್ಲಿ 34 ಮಿ.ಮೀ., ಚಾಮರಾಜನಗರ ಜಿಲ್ಲೆಯಲ್ಲಿ 26 ಮಿ.ಮೀ. ಹಾಗೂ ಮಂಡ್ಯ ಜಿಲ್ಲೆಯಲ್ಲಿ 24 ಮಿ.ಮೀ. ಮಳೆಯಾಗಲಿದೆ. ಈ ಅವಧಿಯಲ್ಲಿ ಕೊಡಗಿನಲ್ಲಿ ಗರಿಷ್ಠ 23 ಡಿಗ್ರಿ ಸೆಲ್ಸಿಯಸ್, ಕನಿಷ್ಠ 18 ಡಿಗ್ರಿ ಸೆಲ್ಸಿಯಸ್, ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ ಗರಿಷ್ಠ 27–28 ಡಿಗ್ರಿ ಸೆಲ್ಸಿಯಸ್, ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ಇರಲಿದೆ.

ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ: 17 ಬೆಳೆಗಳಿಗೆ ಅಧಿಸೂಚನೆ

ಟೊಮ್ಯಾಟೊ, ಅರಿಶಿಣಕ್ಕೆ ಗರಿಷ್ಠ ವಿಮಾ ಮೊತ್ತ ನಿಗದಿ

ಮೈಸೂರು, ಜೂ.22(ಎಂಕೆ)– 2022–23ನೇ ಸಾಲಿನ ಮುಂಗಾರು ಹಂಗಾಮಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ(ವಿಮಾ) ಯೋಜನೆಯಡಿ ಜಿಲ್ಲೆಯಲ್ಲಿ 17 ಬೆಳೆಗಳಿಗೆ ಅಧಿಸೂಚನೆ ನೀಡಿದ್ದು, ಟೊಮ್ಯಾಟೊ ಹಾಗೂ ಅರಿಶಿಣಕ್ಕೆ ಗರಿಷ್ಠ ವಿಮಾ ಮೊತ್ತ ನಿಗದಿಪಡಿಸಲಾಗಿದೆ.

9 ಆಹಾರ ಧಾನ್ಯ, 3 ಎಣ್ಣೆಕಾಳು ಬೆಳೆಗಳು, 1 ವಾಣಿಜ್ಯ ಬೆಳೆ ಹಾಗೂ 4 ತೋಟಗಾರಿಕೆ ಬೆಳೆಗಳಿಗೆ ವಿಮಾ ಯೋಜನೆಯಡಿ ಬೆಳೆ ನಷ್ಟ ಪರಿಹಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಬೆಳೆ ನಷ್ಟವಾದರೆ ವಾಣಿಜ್ಯ ವಿಮಾ ಕಂತಿನ ದರ ಹಾಗೂ ರೈತರು ಕಟ್ಟಬೇಕಾಗಿರುವ ವಿಮಾ ಕಂತಿನ ದರದಲ್ಲಿನ ವ್ಯತ್ಯಾಸದ ಮೊತ್ತದಲ್ಲಿ ಶೇ.50ರಷ್ಟು ಹಣವನ್ನು ರಾಜ್ಯ ಸರ್ಕಾರ ಭರಿಸಲಿದ್ದು, ಅನುಷ್ಠಾನಗೊಳಿಸಲು ‘ಐಸಿಐಸಿಐ ಲೋಂಬಾರ್ಡ್ ಜನರಲ್ ಇನ್ಶೂರೆನ್ಸ್’ ಸಂಸ್ಥೆಗೆ ನಿಯಮಾನುಸಾರ ಪಾವತಿಸಲು ಮಂಜೂರಾತಿ ನೀಡಲಾಗಿದೆ.

ವಿಮಾ ಯೋಜನೆಯಡಿ ಬರುವ ಬೆಳೆಗಳು: ಜಿಲ್ಲೆಯಲ್ಲಿ ವಿಮಾ ಯೋಜನೆಯಡಿ ನೀರಾವರಿ ಹಾಗೂ ಮಳೆಯಾಶ್ರಿತ 17 ಬೆಳೆಗಳನ್ನು ಆಯ್ಕೆ ಮಾಡಲಾಗಿದೆ. ‘ಉದ್ದು’ ಬೆಳೆ ನಷ್ಟಕ್ಕೆ ಎಕರೆಗೆ 11,200 ರೂ. ವಿಮಾ ಮೊತ್ತ ನಿಗದಿಯಾಗಿದ್ದು, ರೈತರು 226.63 ರೂ., (ವಿಮಾ ಮೊತ್ತದ ಶೇ.2ರಷ್ಟು) ವಿಮಾ ಕಂತು ಹಣ ಪಾವತಿಸಬೇಕಾಗಿದೆ. ಹಾಗೆಯೇ ‘ಹೆಸರುಕಾಳಿ’ಗೆ 11,600 ರೂ., ‘ಎಳ್ಳು’ 10,000 ರೂ. ವಿಮಾ ಮೊತ್ತ ನಿಗದಿಯಾಗಿದೆ. ‘ಮುಸುಕಿನ ಜೋಳ’ಕ್ಕೆ(ನೀರಾವರಿ) 23,600 ರೂ., ‘ಜೋಳ’ಕ್ಕೆ(ಮಳೆಯಾಶ್ರಿತ) 13,600 ರೂ., ‘ಸೂರ್ಯಕಾಂತಿ’ಗೆ 14,000 ರೂ., ‘ನೆಲಗಡಲೆ’ 18,400 ರೂ., ‘ಅಲಸಂದೆ’ 10,400 ರೂ., ‘ಟೊಮ್ಯಾಟೊ’ 47,200 ರೂ., ‘ಆಲೂಗೆಡ್ಡೆ’ 28,000 ರೂ., ‘ಎಲೆಕೋಸು’ 25,200 ರೂ., ‘ರಾಗಿ’ (ನೀರಾವರಿ) 18,400 ರೂ., ‘ರಾಗಿ’ (ಮಳೆಯಾಶ್ರಿತ) 15,200 ರೂ., ಹತ್ತಿ 17,200 ರೂ., ‘ತೊಗರಿ’ 16,000 ರೂ., ‘ಅರಿಶಿಣ’ 53,200 ರೂ., ‘ಭತ್ತ’ 34,400 ರೂ. ಹಾಗೂ ‘ಹುರುಳಿ’ಗೆ 7200 ವಿಮಾ ಮೊತ್ತ ನಿಗದಿಪಡಿಸಲಾಗಿದೆ. ಟೊಮ್ಯಾಟೊ, ಆಲೂಗೆಡ್ಡೆ, ಎಲೆಕೋಸು ಹಾಗೂ ಅರಿಶಿಣಕ್ಕೆ ಶೇ.5ರಷ್ಟು ವಿಮಾ ಕಂತಿನ ಹಣವನ್ನು ರೈತರು ಪಾವತಿಸಬೇಕಾಗಿದೆ. ಉದ್ದು, ಹೆಸರು ಮತ್ತು ಎಳ್ಳಿಗೆ ಜೂ.30ರೊಳಗೆ ವಿಮಾ ಕಂತು ಹಣ ಪಾವತಿಸಬೇಕಾಗಿದೆ. ಮುಸುಕಿನ ಜೋಳ, ಸೂರ್ಯಕಾಂತಿ, ನೆಲಗಡಲೆ, ಅಲಸಂದೆ, ಟೊಮ್ಯಾಟೊ, ಆಲೂಗೆಡ್ಡೆ ಹಾಗೂ ಎಲೆಕೋಸಿಗೆ ವಿಮಾ ಕಂತು ಹಣ ಪಾವತಿಸಲು ಜು.15 ಕಡೆಯ ದಿನವಾಗಿದ್ದು, ರಾಗಿ, ಹತ್ತಿ, ತೊಗರಿ ಮತ್ತು ಅರಿಶಿಣಕ್ಕೆ ಜುಲೈ 31 ಹಾಗೂ ಭತ್ತ, ಹುರುಳಿಗೆ ಆಗಸ್ಟ್ 16 ಕಡೆಯ ದಿನವಾಗಿದೆ.




ಮೈಸೂರಿನ ಕೃಷಿ ಇಲಾಖೆ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಕೃಷಿ ಆಯುಕ್ತ ಬಿ.ಶರತ್, 2022–23ನೇ ಸಾಲಿನ ಬೆಳೆ ವಿಮೆ ಕೈಪಿಡಿ ಬಿಡುಗಡೆಗೊಳಿಸಿದರು. ಜಂಟಿ ನಿರ್ದೇಶಕ ಡಾ.ಚಂದ್ರಶೇಖರ್ ಮತ್ತಿತರರಿದ್ದರು.

ಮೈಸೂರು ಜಿಲ್ಲೆಯಲ್ಲಿ ವಿಮಾ ಸೌಲಭ್ಯ ಪಡೆಯುವ ರೈತರ ಸಂಖ್ಯೆ ಬಹಳ ಕಡಿಮೆಯಿದ್ದು, ಕಳೆದ 2021ರ ಸಾಲಿನಲ್ಲಿ 2551 ಫಲಾನುಭವಿಗಳ ಪೈಕಿ 2508 ಮಂದಿಗೆ 1.20 ಕೋಟಿ ರೂ., ಬೆಳೆ ನಷ್ಟ ವಿಮಾ ಪರಿಹಾರ ನೀಡಲಾಗಿದೆ. ರಾಜ್ಯದಲ್ಲಿ ಬೀದರ್, ಹಾವೇರಿ ಮತ್ತು ವಿಜಯಪುರದ ರೈತರು ಹೆಚ್ಚಿನ ಮಟ್ಟದಲ್ಲಿ ವಿಮಾ ಯೋಜನೆಯನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ.

ಹಿಂಗಾರಿನಲ್ಲಿ ಹೆಚ್ಚಳ: ಮೈಸೂರು, ಚಾ.ನಗರ ಭಾಗದ ರೈತರು ಮುಂಗಾರಿಗಿಂತ ಹಿಂಗಾರು ಮಳೆ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೆಳೆ ವಿಮೆ ಮಾಡಿಸಲಿದ್ದಾರೆ. ಈಗ ಅತಿವೃಷ್ಟಿ–ಅನಾವೃಷ್ಟಿಯಿಂದಲೂ ಬೆಳೆ ನಷ್ಟವಾಗುವ ಸಾಧ್ಯತೆ ಇರುವುದರಿಂದ ಬೆಳೆ ವಿಮೆ ಮಾಡಿಸುವುದರಿಂದ ನಷ್ಟದಿಂದ ಪಾರಾಗಲೂ ಅನುಕೂಲವಾಗುತ್ತದೆ. ಈ ವರ್ಷದಿಂದ ಬೆಳೆ ವಿಮೆ ಕುರಿತು ಹೆಚ್ಚಿನ ಪ್ರಚಾರ ನೀಡಲಾಗುತ್ತಿದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ. ಬಿ.ಎಸ್. ಚಂದ್ರಶೇಖರ್ ‘ಮೈಸೂರು ಮಿತ್ರ’ನಿಗೆ ತಿಳಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ


23.06.2022 ಗುರುವಾರ, ಮಳೆ ನಕ್ಷತ್ರ : ಆರ್ದ್ರೆ 22.06.2022 ರಿಂದ 05.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ
ತಿಥಿ: ದಶಮೀ, ನಕ್ಷತ್ರ : ರೇವತಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

- **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ :** ಬೇಸಿಗೆ ಮೇಳ–2022, ದಸರಾ ವಸ್ತುಪ್ರದರ್ಶನ ಮೈದಾನ, ಮಧ್ಯಾಹ್ನ 3.30ರಿಂದ ರಾತ್ರಿ 9 ಗಂಟೆವರೆಗೆ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾನ್ ಡಾ.ವಿಜಯೇಂದ್ರಚಾರ್ಯರಿಂದ ‘ಶ್ರೀ ಮಹಾಭಾರತದ ಉದ್ಯೋಗ ಪರ್ವ’ ಕುರಿತು ಪ್ರವಚನ, ಸ್ಥಳ: ಶ್ರೀ ರಾಯರ ಮಠ, ಜಯಲಕ್ಷ್ಮೀಪುರಂ, ಸಂಜೆ 5ರಿಂದ.
- **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಜೆ.ಪಿ. ನಗರ ಶರಣ ವೇದಿಕೆ:** ವೀರ ವಿರಾಗಿಣಿ ಅಕ್ಕಮಹಾದೇವಿ ಕುರಿತ ಮಾಸಿಕ ಉಪನ್ಯಾಸ ಹಾಗೂ ಬಸವ ಜಯಂತಿ ಮಹೋತ್ಸವ, ಅಧ್ಯಕ್ಷತೆ: ಜೆ.ಪಿ.ನಗರ ಶರಣ ವೇದಿಕೆ ಅಧ್ಯಕ್ಷ ಎಸ್.ಪುಟ್ಟರಾಜಪ್ಪ, ಪ್ರಾಚ್ಯವಿದ್ಯಾ ಸಂಶೋಧನಾಲಯ ವಿಶ್ರಾಂತ ನಿರ್ದೇಶಕ ಡಾ. ಎಸ್. ಶಿವರಾಜಪ್ಪ ಅವರಿಂದ ವಚನ ಸಾಹಿತ್ಯದ ಶ್ರೀಮಂತಿಕೆಯಲ್ಲಿ ಅಕ್ಕ ಮತ್ತು ಬಸವಣ್ಣ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು : ಆರಕ್ಷಕ ನಿರೀಕ್ಷಕ ಜಿ.ಸಿ. ರಾಜು, ಸ್ಥಳ: ಅಕ್ಕಮಹಾದೇವಿ ಪ್ರತಿಮೆ ಆವರಣ, ಜೆ.ಪಿ.ನಗರ. ಸಂಜೆ 6.30ಕ್ಕೆ.

ಬೀರಿಹುಂಡಿಯಲ್ಲಿಂದು

- **ಆಯುರ್ವೇದ ಅಕಾಡೆಮಿ ಬೆಂಗಳೂರು, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಅರ್ಕಧಾಮ:** ಉಚಿತ ಆಯುರ್ವೇದ ಚಿಕಿತ್ಸಾ ಶಿಬಿರ, ಸ್ಥಳ: ಅರ್ಕಧಾಮ, ಬೀರಿಹುಂಡಿ, ಬೆಳಗ್ಗೆ 10ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ “ಒಂದೇ ಕಥೆ” ವಿವಿಧ ಮುಖ– ಬಾನುಲಿ ಸರಣಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಅಂಬಯ್ಯನುಲಿ, ಟಿ.ಎಸ್. ಸ್ನೇಹಾ, ವ್ಯಾಖ್ಯಾನ– ಹೆಚ್.ಎನ್. ಮಂಜುರಾಜ್, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ “ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ”, 10.00 ಗೀತಾ ವೈ. ಪುಟ್ಟಿ –ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ–ರೂಪ ಮತ್ತು ದೀಪ, ಡಾ.ರಾಜ್‌ಕುಮಾರ್, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ.ಮೀನಾ, 1.20ಭಾವಗೀತೆ–ಶ್ರೀಪಾದ ಹೆಗ್ಡೆ, 3.00 ರಾಗಲಹರಿ, ಪ್ರಸ್ತುತಿ– ಜಿ.ಪುಷ್ಪಲತಾ, 4.00 ಹಳ್ಳಿ ಹಾಡು–ಭಾಗವಹಿಸುವವರು ಜವರಯ್ಯ ಮತ್ತು ತಂಡ, 6.50 ಕೃಷಿರಂಗ–ಕಿಸಾನ್‌ವಾಣಿ, ತೋಟಗಾರಿಕೆ ಬೆಳೆಗಳಲ್ಲಿ ಬೋರ್ಡೋ ದ್ರಾವಣದ ಪ್ರಾಮುಖ್ಯತೆ ಕುರಿತು ಡಾ.ಜಿ.ನಾಗೇಶ್ ಅವರೊಡನೆ ಸಂದರ್ಶನ, 9.00 ಯುವವಾಣಿ “ಹಲೋ ಯುವವಾಣಿ” ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಿಶೇಷ ರಸಪ್ರಶ್ನೆ, ನಡೆಸಿಕೊಡುತ್ತಾರೆ ನಿವೇದಿತಾ ಹೆಚ್., 10.00 ನಾಟಕ, 10.30 ಸವಿನೆನಪು

5ನೇ ವರ್ಷದ ಸವಿನೆನಪು



ನಿಮ್ಮ ಆಶೀರ್ವಾದವೇ ನಮಗೆ ಶ್ರೀರಕ್ಷೆ ನಿಮ್ಮ ಆದರ್ಶವೇ ನಮಗೆ ದಾರಿದೀಪ ನಿಮ್ಮ ಮಾರ್ಗ ದರ್ಶನವೇ ನಮಗೆ ಚೇತನ ನಾವುಗಳು ಸದಾ ನಿಮ್ಮ ನೆನಪಿನಲ್ಲಿದ್ದು ದೇವರು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ ಪತ್ನಿ: ಮಂಜುಳ ಪ್ರಕಾಶ್ ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು, ಸಾಲಿಗ್ರಾಮ

ಸಿ.ಪ್ರಕಾಶ್
ಮುಖ್ಯ ಶಿಕ್ಷಕರು, ತಮ್ಮಡಹಳ್ಳಿ

ಸವಿನೆನಪು



ನೀವು ನಮ್ಮನ್ನಗಲಿ 14 ವರ್ಷ ಕಳೆದರೂ ನಮ್ಮ ಮನಸ್ಸಿನಲ್ಲಿ ಹಸಿರಾಗಿದ್ದೀರ

ದುಃಖತಪ್ತರು: ಲೀಲಾವತಿ.ಎಸ್, ಕೌಸಲ್ಯ.M.P, ಮಹೇಶ್.ಎಂ.ಆರ್, ದಿವ್ಯ.ಎಂ.ಆರ್, ಪುರುಷೋತ್ತಮ್.ಎಂ.ಆರ್, ಕುಟುಂಬವರ್ಗದವರು

ಆರ್.ರವೀಂದ್ರಬಾಬು
(ನೀರಾವರಿ ಇಲಾಖೆ ಕೆ.ಆರ್.ಎಸ್)

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಇವರು ದಿ: 13-06-2022 ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಮೃತರ **ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು** ದಿ.23/06/2022 ಗುರುವಾರ, ಬೆಳಿಗ್ಗೆ 10.30 ರಿಂದ 1.00 ಗಂಟೆಗೆ ಬಿಳಿಕೆರೆ, ದೇವರಹಳ್ಳಿ ರಸ್ತೆ ತೋಟದಲ್ಲಿ ಏರ್ಪಡಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಶ್ರೀ ರವಿಕುಮಾರ್.ಎಸ್

ದುಃಖತಪ್ತರು: ಮೃತರ ತಾಯಿ, ಹೆಂಡತಿ, ಮಕ್ಕಳು ಅಕ್ಕ ತಂಗಿಯರು ಕುಟುಂಬವರ್ಗದವರು ಹಾಗೂ ಬಂಧುಮಿತ್ರರು

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : "ನಿಮಗೆ ಹೊಸ ಕನ್ನಡಕದ ಅಗತ್ಯವಿದೆ"
ರೋಗಿ : "ನಿಮಗೆ ಹೇಗೆ ಗೊತ್ತಾಯಿತು?"
ಡಾಕ್ಟರ್ : "ನೀವು ಕಿಟಕಿ ಮೂಲಕ ಒಳಬಂದಾಗ!"

ಮೈಸೂರು ಮಿತ್ರ
ಗುರುವಾರ, 23 ಜೂನ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಸಮಸ್ಯೆಗಿಂತಲೂ ಅದನ್ನು ಬಿಡಿಸುವ ಬಗ್ಗೆ ಮಹತ್ವವಿದೆ.
– ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ತಾಯಿಗಿಂತ ಹಿತವರಿಲ್ಲ, ಸಕ್ಕರೆಗಿಂತ ಸವಿಯಿಲ್ಲ

ನಿಮ್ಮ ಪತ್ರಗಳು

ಯುಪಿಎಸ್ ಇಲ್ಲದೆ ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ಪರದಾಟ

ಮಾನ್ಯರೆ,



ಮೈಸೂರು ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಟಲ್‌ಜೀ ಜನಸ್ನೇಹಿ ಕೇಂದ್ರ, ಜಾತಿ, ಆದಾಯ ಪ್ರಮಾಣ ಪತ್ರಗಳು ಹಾಗೂ ಇನ್ನಿತರ ದಾಖಲಾತಿಗಾಗಿ ಅರ್ಜಿ ಸ್ವೀಕಾರ ಹಾಗೂ ವಿತರಣಾ ಕಾರ್ಯ ನಿರ್ವಹಿಸುತ್ತಿರುವುದು ಸರಿಯಷ್ಟೆ. ಈ ಕೇಂದ್ರಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾದರೆ ಈ ಸಮಯದಲ್ಲಿ ಸದರಿ ಕೇಂದ್ರಗಳಲ್ಲಿ ಸಾರ್ವಜನಿಕರು ದಿನವೆಲ್ಲಾ ಕಾಯಬೇಕಾದ ಪರಿಸ್ಥಿತಿ ಇದೆ. ವಿವಿಧ ದಾಖಲಾತಿಗಳಿಗಾಗಿ ಕೇಂದ್ರದ ಮುಂದೆ ಕಾದು ನಿಲ್ಲುವಂತಹ ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ಮಹಿಳೆಯರ ಪಾಡು ಹೇಳತೀರದು. ಇದನ್ನು ಮನಗಂಡ ಸಾರ್ವಜನಿಕರು ಮತ್ತೊಂದು ಕೇಂದ್ರಕ್ಕೆ ಹೋದರೆ ಅಲ್ಲಿಯೂ ಜನಸಂದಣಿ ಇರುತ್ತದೆ. ಇಂತಹ ಸಮಸ್ಯೆ ಎದುರಿಸುತ್ತಿರುವ ಅಟಲ್‌ಜೀ ಜನಸ್ನೇಹಿಗಳಿಗೆ ಪ್ರತ್ಯೇಕ ಯುಪಿಎಸ್ ಸೌಲಭ್ಯ ಕಲ್ಪಿಸಬೇಕಾಗಿ ಜಿಲ್ಲಾಧಿಕಾರಿಯವರು ಹಾಗೂ ತಾಲೂಕು ತಹಸೀಲ್ದಾರ್‌ರವರು ಸೂಕ್ತ ಕ್ರಮ ವಹಿಸಬೇಕಾಗಿ ಮನವಿ.

– ಎಸ್. ರಾಜಗೋಪಾಲ್, ಗಾಂಧಿನಗರ, ಮೈಸೂರು.

'ಚಾರ್ಲಿ'ಗೆ ತೆರಿಗೆ ವಿನಾಯಿತಿ ಸ್ವಾಗತಾರ್ಹ

ಮಾನ್ಯರೆ,



ಮಾನವೀಯ ಮೌಲ್ಯಗಳನ್ನು ಪ್ರೇಕ್ಷಕರ ಮನಮುಟ್ಟುವಂತೆ ತೋರಿಸುವ ಚಿತ್ರಗಳ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ತೀರಾ ವಿರಳ. ಮನುಷ್ಯರ ನಡುವೆಯೇ ಮಾನವೀಯತೆಯ ಕೊರತೆ ಎದ್ದು ಕಾಣುತ್ತಿದ್ದು, ಪ್ರಾಣಿಗಳನ್ನು ಪ್ರೀತಿಯಿಂದ ಕಾಣಬೇಕು ಎಂದು ರಕ್ಷಿತ್ ಶೆಟ್ಟಿ ಅಭಿನಯದ "777 ಚಾರ್ಲಿ" ಚಿತ್ರ ಸಮಾಜಕ್ಕೆ ಸಂದೇಶ ನೀಡುತ್ತಿದೆ.

ವಿಶ್ವಾಸಕ್ಕೆ ಇನ್ನೊಂದು ಹೆಸರೆಂದರೆ ಅದುವೆ "ಶ್ವಾನ". ಹಿಂದೂ ಧರ್ಮದಲ್ಲಿ ಶ್ವಾನವನ್ನು ಸಹ ಪ್ರೀತಿಯಿಂದ ಕಾಣಬೇಕು ಎಂಬ ಕಾರಣಕ್ಕೆ ವಿಶೇಷ ಸ್ಥಾನವನ್ನು ನೀಡಲಾಗಿದೆ. ಪ್ರತಿಯೊಂದು ಪ್ರಾಣಿಗೂ ತನ್ನದೆ ಆದ ಆಹಾರ ಸರಪಳಿಯಿದ್ದು ತಮ್ಮ ಆಹಾರವನ್ನು ತಾವೇ ಹುಡುಕಿಕೊಳ್ಳುತ್ತವೆ.

ಆದರೆ ಶ್ವಾನಕ್ಕೆ ಇಂತಹದ್ದೆ ಆಹಾರವೆಂಬುವುದಿಲ್ಲ ಮತ್ತು ಅದು ಮನುಷ್ಯರ ಮೇಲೆ ಅವಲಂಬಿತವಾಗಿದೆ. ಶ್ವಾನವನ್ನು ಪ್ರೀತಿಯಿಂದ ಕಾಣಬೇಕಾಗಿರುವುದು ಮನುಷ್ಯರಾದ ನಮ್ಮೆಲ್ಲರ ಕರ್ತವ್ಯವಾಗಿದೆ. ಇದೇ ಕಥಾಹಂದರ ಹೊಂದಿರುವ ಚಾರ್ಲಿ ಚಿತ್ರ ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತಿದೆ.

"ಇವನ್ ಬ್ರಿಡಿಂಗ್" ಎಂದರೆ ಒಂದೇ ಜಾತಿಯ ಶ್ವಾನದ ತಳಿಯನ್ನು ಬಳಸಿ ಮರಿಗಳನ್ನು ಅಭಿವೃದ್ಧಿ ಪಡಿಸುವುದಾಗಿದೆ. ಒಂದೇ ರೀತಿಯ ಡಿಎನ್ಎ ಅಥವಾ ವಂಶವಾಹಿಗಳನ್ನು ಬಳಸಿ ಅಭಿವೃದ್ಧಿ ಮಾಡಿದರೆ ಶ್ವಾನಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುವುದನ್ನು ಚಿತ್ರದಲ್ಲಿ ತೋರಿಸಲಾಗಿದೆ.

ಇಂತಹ ಸಂವೇದನಾಶೀಲ ಚಿತ್ರಕ್ಕೆ ಕರ್ನಾಟಕ ರಾಜ್ಯ ಸರ್ಕಾರ ಆರು ತಿಂಗಳ ಕಾಲ ಸರಕು ಮತ್ತು ಸೇವಾ ತೆರಿಗೆ (ಎಸ್‌ಜಿಎಸ್‌ಟಿ), ಹಿಂಪಾವತಿ ಸೌಲಭ್ಯ ನೀಡುವ ಮೂಲಕ ಚಿತ್ರಕ್ಕೆ ಪ್ರೋತ್ಸಾಹ ನೀಡುತ್ತಿರುವುದು ಉತ್ತಮ ಕ್ರಮವಾಗಿದೆ.

ಚಾರ್ಲಿ ಚಿತ್ರದ ಟಿಕೆಟ್ ದರವನ್ನು ಎಸ್‌ಜಿಎಸ್‌ಟಿ ಕಡಿತಗೊಳಿಸಿ ಮಾರಾಟ ಮಾಡಬೇಕಾಗಿರುವುದರಿಂದ ಪ್ರೇಕ್ಷಕರಿಗೂ ಅನುಕೂಲವಾಗುತ್ತದೆ. ಇಂತಹ ಮಾನವೀಯತೆಯ ಚಿತ್ರಕ್ಕೆ ತೆರಿಗೆ ವಿನಾಯಿತಿ ಘೋಷಿಸಿರುವ ರಾಜ್ಯ ಸರ್ಕಾರಕ್ಕೆ ಅಭಿನಂದನೆಗಳು.

–ರಾಸುಮ ಭಟ್, ಚಿಕ್ಕಮಗಳೂರು.

ವಿಜಯನಗರ 4ನೇ ಹಂತದಲ್ಲಿ ಎಲ್ಲೆಂದರಲ್ಲಿ ಕಸದ ರಾಶಿ



ಮಾನ್ಯರೆ,

ಇದು ಮೈಸೂರಿನ ವಿಜಯನಗರ 4ನೇ ಹಂತದ ಚಿತ್ರವಾಗಿದ್ದು, ಇಲ್ಲಿನ ನಿವಾಸಿಗಳು ಮತ್ತು ಪ್ಲಾಸ್ಟಿಕ್ ತಯಾರಕರು ತಮ್ಮ ಬೇಜವಾಬ್ದಾರಿ ಮತ್ತು ಅಸಡ್ಡೆಯಿಂದ ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಮತ್ತು ತ್ಯಾಜ್ಯವನ್ನು ಸುರಿಯುತ್ತಿದ್ದಾರೆ. ಇದರಿಂದ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದಲ್ಲದೆ, ದನ ಕರುಗಳು ಪ್ಲಾಸ್ಟಿಕ್ ತಿನ್ನುವುದರಿಂದ (ಚಿತ್ರದಲ್ಲಿ ಕಾಣಬಹುದು) ಅವುಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಇಲ್ಲಿನ ನಿವಾಸಿಗಳು ಮೈಸೂರು ಮಹಾನಗರ ಪಾಲಿಕೆಯನ್ನು ಅತಿಯಾಗಿ ಅವಲಂಬಿಸಿದಂತೆ ಕಾಣುತ್ತದೆ. ಆದ್ದರಿಂದ ಪ್ರತಿದಿನವೂ ನಿವಾಸಿಗಳು ಪ್ಲಾಸ್ಟಿಕ್ ಮತ್ತು ತ್ಯಾಜ್ಯವನ್ನು ತೆರೆದ ಪ್ರದೇಶದಲ್ಲಿ ಹಸಿರು ಬೆಳೆದಿರುವಂತಹ ಸ್ಥಳದಲ್ಲಿ ಸುರಿಯುತ್ತಿದ್ದಾರೆ.

ಇಲ್ಲಿನ ನಿವಾಸಿಗಳು ಕಣ್ಣು ಮುಚ್ಚಿಕೊಂಡು ತಮ್ಮ ದೈನಂದಿನ ಕಸ ಮತ್ತು ಪ್ಲಾಸ್ಟಿಕ್ ಅನ್ನು ಬಿಸಾಡುವುದುಂಟು. ಇದು ಪರಿಸರದ ಮೇಲೆ ವಿನಾಶಕಾರಿ ಪರಿಣಾಮಗಳನ್ನು ಬೀರುವುದಲ್ಲದೆ, ಮಣ್ಣಿನ ಫಲವತ್ತತೆಯನ್ನು ನಾಶ ಮಾಡುತ್ತದೆ. ಹಾಗೂ ಇಂತಹ ವಿಷಕಾರಿ ವಸ್ತುಗಳನ್ನು ದನ ಕರುಗಳು ಮೇಯುವುದರಿಂದ ಅವುಗಳ ಆರೋಗ್ಯ ಹದಗೆಡುವುದಲ್ಲದೆ, ಸಾಯುವ ಸಾಧ್ಯತೆಗಳು ಉಂಟು. ಇದನ್ನು ಸಂಬಂಧಪಟ್ಟ ಮುಡಾ ಅಧಿಕಾರಿಗಳು, ಆರೋಗ್ಯಾಧಿಕಾರಿಗಳು ಅಥವಾ ಬೋಗಾದಿ ಪಟ್ಟಣ ಪಂಚಾಯಿತಿ ಅಧಿಕಾರಿಗಳು ತ್ಯಾಜ್ಯ ಪ್ರತ್ಯೇಕತೆ ಮತ್ತು ವಿಲೇವಾರಿ ಬಗ್ಗೆ ಸೂಕ್ತ ಮಾರ್ಗದರ್ಶನ ಮಾಡಿ, ಎಲ್ಲೆಂದರಲ್ಲಿ ತ್ಯಾಜ್ಯ ಬಿಸಾಡದಂತೆ ಕ್ರಮ ವಹಿಸಿ ಈ ಸಮಸ್ಯೆಯನ್ನು ನಿವಾರಿಸಬೇಕೆಂದು ಈ ಮೂಲಕ ಮನವಿ.

– ರಾಜೀವ್ ಕೃಷ್ಣನ್, ವಿಜಯನಗರ, ಮೈಸೂರು.



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

'ಮರ್ಯಾದೆ'ಗೆ ಕಳಂಕ ಮರ್ಯಾದಾ ಹತ್ಯೆಗಳು



ನಮ್ಮ ಬದುಕು ಇಂದು ಕಾಣುತ್ತಿರುವ ಹಾಗೂ ಅನುಭವಿಸುತ್ತಿರುವ ವೈರುಧ್ಯಗಳು ಪ್ರಾಯಶಃ ಈ ಸಮಾಜದ ಯಾವುದೇ ಕಾಲಘಟ್ಟದಲ್ಲಿ ಅಸ್ತಿತ್ವದಲ್ಲಿ ಇರಲಿಲ್ಲ. ಒಂದೆಡೆ ಮುಕ್ತ, ಸ್ವತಂತ್ರ ಹಾಗೂ ಸ್ವಾಭಿಮಾನದ ಬದುಕಿನ ಮೌಲ್ಯಾಚರಣೆಗಳನ್ನು ಎತ್ತಿ ಹಿಡಿಯುತ್ತಿರುವ ಜನರ ಸಂಖ್ಯೆಯಲ್ಲಿ ಹೆಚ್ಚಳ, ಮತ್ತೊಂದೆಡೆ ಧರ್ಮ–ಜಾತಿ–ವರ್ಗಗಳ ಹಿಡಿತದಿಂದ ಹೊರಬರದೆ, ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತಿರುವ ದುಷ್ಟ ಶಕ್ತಿಗಳ ಸಂಖ್ಯೆಯಲ್ಲಿಯೂ ಏರಿಕೆ– ಇದು ನಮ್ಮ ಸಮಾಜ ಕಾಣುತ್ತಿರುವ ವಿಪರ್ಯಾಸ. ಆಧುನಿಕತೆಯತ್ತ ಶರವೇಗದಲ್ಲಿ ನಾವು ಸಾಗುತ್ತಿದ್ದೇವೆ, ಅಭಿವೃದ್ಧಿಯ ಎಲ್ಲ ಸೂಚ್ಯಂಕಗಳಲ್ಲಿಯೂ ದೊಡ್ಡ ಸಾಧನೆಗಳನ್ನು ಮಾಡಿದ್ದೇವೆ ಎಂದು ಸಾರುತ್ತಾ ಇಂದಿಗೂ ಊಳಿಗಮಾನ್ಯ ಸಂಸ್ಕೃತಿಯ ದ್ಯೋತಕಗಳನ್ನು ಉಳಿಸಿಕೊಂಡು–ಬೆಳೆಸಿಕೊಂಡು ಬರುತ್ತಿರುವ, ದ್ವಂದ ಮೌಲ್ಯಗಳಿಂದ ಆವೃತ್ತವಾಗಿರುವ ಈ ಸಾಮಾಜಿಕ ವ್ಯವಸ್ಥೆಯಲ್ಲಿ, ಕುಟುಂಬದ ಮರ್ಯಾದೆಯನ್ನು ಉಳಿಸಲು ವ್ಯಕ್ತಿ ಸಾತಂತ್ರವನ್ನು, ಅಭಿವ್ಯಕ್ತಿ ಸ್ವಾತಂತ್ರವನ್ನೂ, ಪ್ರೀತಿಸಿ–ವಿವಾಹವಾಗುವ ಸ್ವಾತಂತ್ರ್ಯವನ್ನೂ ಕಿತ್ತುಕೊಂಡು ತಮ್ಮ ಮಕ್ಕಳ ಆಯ್ಕೆಯ ಸ್ವಾತಂತ್ರ್ಯವನ್ನು ಹೊಸೆದು ಹಾಕುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ತೋರಿಸುತ್ತಿರುವ ಅಂಕಿ–ಅಂಶಗಳನ್ನು ನೋಡಿದರೆ ನಾಗರಿಕ ಸಮಾಜ ತಲೆತಗ್ಗಿಸಬೇಕಾದ ಹಂತದಲ್ಲಿ ಇಂದಿಗೂ ಇದೆಯಲ್ಲ ಎಂಬುದೇ ಒಂದು ದುರಂತ.

ಏನಿದು 'ಮರ್ಯಾದಾ ಹತ್ಯೆ' ಅಥವಾ ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳಲ್ಲಿ 'ಮರ್ಯಾದಾಗೇಡು ಹತ್ಯೆ' ಎಂದು ಕರೆಯಲ್ಪಡುತ್ತಿರುವ ಅಮಾನುಷ ಕೃತ್ಯ ತಮ್ಮ ಜಾತಿ, ಕುಲ, ವರ್ಗ ಅಥವಾ ಧಾರ್ಮಿಕ ಹಿನ್ನೆಲೆಯಿಂದ ಭಿನ್ನವಾದ ಗುಂಪಿಗೆ ಸೇರಿದ ವ್ಯಕ್ತಿಯನ್ನು ವೈವಾಹಿಕ ಸಂಗಾತಿಯನ್ನಾಗಿ ಆಯ್ಕೆ ಮಾಡಿ, ಕುಟುಂಬದ ಆಜ್ಞೆಯನ್ನು ಧಿಕ್ಕರಿಸಿ ಸಂಬಂಧವನ್ನು ಬೆಳೆಸಿದ ಮಕ್ಕಳ ಜೀವನವನ್ನು ತಂದೆ–ತಾಯಿ ಅಥವಾ ಕುಟುಂಬದ ಇತರ ಸದಸ್ಯರು ಸ್ವತಃ ತಾವೇ ಅಥವಾ ಬಾಡಿಗೆ ಕೊಲೆಗಡುಕರಿಂದ ಅಂತ್ಯಗೊಳಿಸುವ ಕೆಟ್ಟ ವ್ಯವಸ್ಥೆಗೆ ಮಾರ್ಯಾದಾ ಹತ್ಯೆ ಎಂಬ ಹೆಸರನ್ನು ಅದರ ಸಮರ್ಥಕರು ನೀಡಿದರು. ಈ ಪದದ ಬಳಕೆಗೆ ಪ್ರಜ್ಞಾವಂತರಿಂದ ತೀವ್ರ ಆಕ್ಷೇಪ ವ್ಯಕ್ತವಾದಾಗ ಅದು ಮರ್ಯಾದಾಗೇಡು ಹತ್ಯೆಯಾಗಿ ಮಾರ್ಪಾಡಾಯಿತು. ಹೆಸರು ಬದಲಾದರೆ ಏನಂತೆ, ಅದರ ಸ್ವರೂಪ, ಉದ್ದೇಶ ಅಥವಾ ಅದನ್ನು ಸುತ್ತುವರೆದಿರುವ ನೀಚತನವೇನಾದರೂ ಕಡಿಮೆಯಾಯಿತೇ?

ಎಲ್ಲ ಸಾಮಾಜಿಕ–ಸಾರ್ವಜನಿಕ ನಿಯಮಗಳನ್ನು ಸಂಪೂರ್ಣವಾಗಿ ಅಲಕ್ಷಿಸಿ ತಮ್ಮ ಮಕ್ಕಳನ್ನೇ ಕೊಲೆ ಮಾಡುತ್ತಿರುವ ಪೋಷಕರು, ಅವರಿಗೆ ಬೆಂಬಲವಾಗಿ ನಿಂತು ಈ ದುಷ್ಕೃತ್ಯಗಳಿಗೆ ನೇರವಾಗಿಯೇ ಕುಮ್ಮಕ್ಕು ನೀಡುವ ಜಾತಿ ಅಥವಾ ಖಾಪ್ ಪಂಚಾಯತಿಗಳು ಹಾಗೂ ರಕ್ತ ಸಂಬಂಧಿಗಳು ಅಥವಾ ಕುಟುಂಬದ ಬಂಧು–ಮಿತ್ರರು, ಅನೇಕ ಸಂದರ್ಭಗಳಲ್ಲಿ ಈ ಅಪರಾಧಿಗಳನ್ನು ಬಂಧಿಸಿ ಶಿಕ್ಷಿಸುವ ಬದಲು ಕಂಡೂ ಕಾಣದಂತಿರುವ ಆರಕ್ಷಕ ವ್ಯವಸ್ಥೆ, ಪ್ರಭಾವಿ ಪೋಷಕರನ್ನು, ಮತ ಬ್ಯಾಂಕುಗಳನ್ನೂ ರಕ್ಷಿಸಲು ನಿಂತಿರುವ ರಾಜಕೀಯ ವ್ಯವಸ್ಥೆ– ಈ ದುಷ್ಟ ಕೂಟವೇ ಕುಟುಂಬದ ಮರ್ಯಾದೆಯ ರಕ್ಷಣೆಯ ಸೋಗಿನಲ್ಲಿ ಯುವ ಜನರ ಜೀವ ಹರಣ ಮಾಡುತ್ತಿರುವುದನ್ನು ಗಮನಿಸಿದಾಗ ತಿಳಿಯುತ್ತದೆ ಎಂಥ ಕಲುಷಿತ ಮನಸ್ಸುಗಳ ನಡುವೆ ನಮ್ಮ ಬದುಕು ಸಾಗುತ್ತಿದೆ ಎಂಬುದು.

ಕುಟುಂಬದ, ಜಾತಿಯ ಅಥವಾ ಅಂತಸ್ತಿನ ನೆಪವೊಡ್ಡಿ ತಮ್ಮ ಮರ್ಯಾದೆಗಿಂತ ಮಿಗಿಲಾದುದು ಯಾವುದೂ ಇಲ್ಲ ಎಂಬ ಊಳಿಗಮಾನ್ಯ ಮನಸ್ಥಿತಿ ಕಾಲ ಬದಲಾದ ಹಾಗೆಲ್ಲ ಮರೆಯಾಗುತ್ತದೆ ಎಂಬ ನಂಬಿಕೆ ಹುಸಿಯಾಗಿ, ಈ ಸಾಂಸ್ಥಿಕ ಬಂಧನಗಳು ಮತ್ತಷ್ಟು ಗಟ್ಟಿಯಾಗುತ್ತಿವೆ. ಸುಮಾರು ಎರಡು ದಶಕಗಳ ಹಿಂದೆ ಈ ಮರ್ಯಾದಾಗೇಡು ಹತ್ಯೆಗಳ ಪ್ರಕರಣಗಳು ವರದಿಯಾಗ ತೊಡಗಿದಾಗ ಇವೆಲ್ಲಾ ಹಳ್ಳಿಗಳಲ್ಲಿ, ಅನಕ್ಷರಸ್ಥ ಕುಟುಂಬಗಳಲ್ಲಿ, ಜಾತಿ ಪಂಚಾಯತಿಗಳ ಪ್ರಾಬಲ್ಯವಿರುವಲ್ಲಿ ಹಾಗೂ ಉತ್ತರ ಭಾರತದ ಕೆಲ ರಾಜ್ಯಗಳಲ್ಲಿ ಮಾತ್ರ ನಡೆಯುವಂತಹ ಘಟನೆಗಳು ಎಂದು ಅನೇಕರು ವಾದ ಮಾಡುತ್ತಿದ್ದುದುಂಟು. ಆದರೆ ಇಂದು ಈ ನೀಚ ಕೃತ್ಯಗಳು ದೇಶದ ಎಲ್ಲೆಡೆ ಹರಡಿ ನಗರವೇನು, ಗ್ರಾಮವೇನು, ವಿದ್ಯಾವಂತ ಕುಟುಂಬಗಳಾದರೇನು, ಅನಕ್ಷರಸ್ಥರಾದರೇನು ಎಂಬ ಮಟ್ಟಕ್ಕೆ ತಲುಪುತ್ತಿವೆ. ಮೈಸೂರು ನಗರದಲ್ಲೇ ಅಂತರ ಜಾತಿ ವಿವಾಹವಾಗಿದ್ದ ಕಾಲೇಜೊಂದರ ಕಂಪ್ಯೂಟರ್ ಸೈನ್ಸ್ ಅಧ್ಯಾಪಕಿಯನ್ನು ಆಕೆಯ ಸಹೋದರನೇ ಕೊಲೆ ಮಾಡಿದ್ದು ಇದಕ್ಕೊಂದು ನಿದರ್ಶನವಷ್ಟೇ. ಇಂಥ ನೂರಾರು ಘಟನೆಗಳು ಕಾನೂನಿನ ಗಮನಕ್ಕೇ ಬಾರದೆಯೇ ಮುಚ್ಚಿ ಹೋಗಿವೆ.

> "ಎಲ್ಲ ಸಾಮಾಜಿಕ–ಸಾರ್ವಜನಿಕ ನಿಯಮಗಳನ್ನು ಸಂಪೂರ್ಣವಾಗಿ ಅಲಕ್ಷಿಸಿ ತಮ್ಮ ಮಕ್ಕಳನ್ನೇ ಕೊಲೆ ಮಾಡುತ್ತಿರುವ ಪೋಷಕರು, ಅವರಿಗೆ ಬೆಂಬಲವಾಗಿ ನಿಂತು ಈ ದುಷ್ಕೃತ್ಯಗಳಿಗೆ ನೇರವಾಗಿಯೇ ಕುಮ್ಮಕ್ಕು ನೀಡುವ ಜಾತಿ ಅಥವಾ ಖಾಪ್ ಪಂಚಾಯತಿಗಳು ಹಾಗೂ ರಕ್ತ ಸಂಬಂಧಿಗಳು ಅಥವಾ ಕುಟುಂಬದ ಬಂಧು–ಮಿತ್ರರು, ಅನೇಕ ಸಂದರ್ಭಗಳಲ್ಲಿ ಈ ಅಪರಾಧಿಗಳನ್ನು ಬಂಧಿಸಿ ಶಿಕ್ಷಿಸುವ ಬದಲು ಕಂಡೂ ಕಾಣದಂತಿರುವ ಆರಕ್ಷಕ ವ್ಯವಸ್ಥೆ, ಪ್ರಭಾವಿ ಪೋಷಕರನ್ನು, ಮತ ಬ್ಯಾಂಕುಗಳನ್ನೂ ರಕ್ಷಿಸಲು ನಿಂತಿರುವ ರಾಜಕೀಯ ವ್ಯವಸ್ಥೆ– ಈ ದುಷ್ಟ ಕೂಟವೇ ಕುಟುಂಬದ ಮರ್ಯಾದೆಯ ರಕ್ಷಣೆಯ ಸೋಗಿನಲ್ಲಿ ಯುವ ಜನರ ಜೀವ ಹರಣ ಮಾಡುತ್ತಿದೆ.

ದೇಶದ ವಿವಿಧ ಭಾಗಗಳಲ್ಲಿ ಹೆಚ್ಚುತ್ತಾ ಹೋಗುತ್ತಿರುವ ಮರ್ಯಾದಾರಹಿತ ಹತ್ಯೆಗಳ ಬಗ್ಗೆ ಸಂಸತ್ತಿನಲ್ಲಿ ಕೇಳಲಾಗಿದ್ದ ಲಿಖಿತ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಗೃಹ ಮಂತ್ರಾಲಯದ ಮೂಲದಿಂದ ಬಂದ ಮಾಹಿತಿಯ ಪ್ರಕಾರ 2017 ರಿಂದ 2019 ರವರೆಗೆ ದೇಶದಲ್ಲಿ ಹೆಚ್ಚು–ಕಡಿಮೆ 150 ಪ್ರಕರಣಗಳು ಬಯಲಿಗೆ ಬಂದಿದ್ದವು. ಇದರಲ್ಲಿ ಶೇಕಡಾ 35 ರಷ್ಟು ಪ್ರಕರಣಗಳು ಝಾರ್ಖಂಡ್ ರಾಜ್ಯ ಒಂದರಲ್ಲೇ ನಡೆದಂತವು. ಈ ಸಂಖ್ಯೆ ಕೂಡ ವಾಸ್ತವ ಚಿತ್ರಣವನ್ನು ನೀಡುತ್ತಿದೆ ಎಂದು ಅರ್ಥೈಸುವ ಹಾಗಿಲ್ಲ. ಸಾರ್ವಜನಿಕ ವಲಯಕ್ಕೆ ಬಾರದೆ ಮನೆಗಳ ಒಳಗೇ ಹೂತಿಟ್ಟ ಪ್ರಕರಣಗಳೆಷ್ಟೋ?

2014 ರವರೆಗೆ ಭಾರತದಲ್ಲಿ ಮರ್ಯಾದೆಯ ಹೆಸರಿನಲ್ಲಿ ನಡೆಯುತ್ತಿದ್ದ ಕೊಲೆಗಳನ್ನು ದಾಖಲು ಮಾಡುವ ವ್ಯವಸ್ಥೆಯೇ ಇರಲಿಲ್ಲ. ದೇಶದ ಸಂವಿಧಾನಾತ್ಮಕ ಹಕ್ಕುಗಳೇ ಅಲ್ಲದೆ, ವಿಶೇಷ ವಿವಾಹ ಕಾಯಿದೆ, ಕೌಟುಂಬಿಕ ದೌರ್ಜನ್ಯ ತಡೆಗಟ್ಟುವ ಕಾಯಿದೆಗಳನ್ನು ಈ ಮರ್ಯಾದಾಗೇಡಿ ಹತ್ಯೆಗಳು ಉಲ್ಲಂಘಿಸುತ್ತಿದ್ದರೂ ಅವುಗಳ ವಿರುದ್ಧ ಕಠಿಣ ಕ್ರಮ ಜರುಗಿಸಲು ನಮ್ಮ ಆಡಳಿತಾತ್ಮಕ ಹಾಗೂ ಕಾನೂನು ವ್ಯವಸ್ಥೆ ಅಸಮರ್ಥವಾಗಿರುವುದು ಸಂಪ್ರದಾಯವಾದಿಗಳ ಕೂಟದತ್ತ ಈ ಸಮಾಜ ತಳೆಯುವ ಮೃದು ಧೋರಣೆಗಳಿಗೆ ಒಂದು ನಿದರ್ಶನವಷ್ಟೇ. ಈಗಾಗಲೇ ಜಾರಿಯಾಗಿರುವ ಕಾನೂನುಗಳನ್ನೇ ಅಳವಡಿಸಿ ಕೊಲೆಗಡುಕರನ್ನು ಶಿಕ್ಷಿಸಬಹುದಾದರೂ ಮರ್ಯಾದಾ ಹತ್ಯೆಗಳೆಂಬ ವರ್ಗಕ್ಕೆ ಸೇರಿದ ಕೃತ್ಯಗಳನ್ನು ಅಪರಾಧಗಳೆಂದು ಪರಿಗಣಿಸಲು ವಿಶೇಷ ಕಾಯಿದೆಯ ಅಗತ್ಯವಿದೆ ಎಂಬ ನೆಪವೊಡ್ಡಿ ಆಡಳಿತಾತ್ಮಕ ವ್ಯವಸ್ಥೆ ಕಾಲ ಮತ್ತು ಜೀವಗಳೆರಡರ ಹರಣ ಮಾಡುತ್ತಿದೆಯಷ್ಟೆ

ಮರ್ಯಾದಾ ರಕ್ಷಣೆಯ ಹೆಸರಿನಲ್ಲಿ ನಡೆಯುವ ಹತ್ಯೆಗಳಿಗೆ ದೀರ್ಘ ಕಾಲಿಕ ಇತಿಹಾಸವೇ ಇದೆ. ಮತ್ತೊಂದು ಮುಖ್ಯ ವಿಚಾರವೆಂದರೆ ಇದು ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ ಎನ್ನುವುದು. ಮಧ್ಯ ಯುಗದಲ್ಲೇ ಆರಂಭವಾದ ಈ ಕೊಲೆಗಳು ಯೂರೋಪ್‌ನ ಕೆಲ ಪ್ರದೇಶಗಳಲ್ಲಿ ಹಾಗೂ ಜೋರ್ಡಾನ್, ಆಫ್ಘಾನಿಸ್ತಾನ್, ಪಾಕಿಸ್ತಾನ ಮುಂತಾದ ಇನ್ನೂ ಅನೇಕ ದೇಶಗಳಲ್ಲಿ ನಡೆಯುತ್ತಲೇ ಬಂದಿವೆ.

ಎಲ್ಲ ಸಮಾಜಗಳಲ್ಲೂ ಸಂಗಾತಿ ಆಯ್ಕೆಯ ಹಕ್ಕನ್ನು ಸಾಮಾನ್ಯವಾಗಿ ಕಸಿದುಕೊಳ್ಳುವುದು ಮಹಿಳೆಯರಿಂದಾದರೂ ತಮ್ಮ ಗುಂಪಿನ ಹೊರಗೆ ಸಂಬಂಧ ಬೆಳೆಸಿದ ಪುರುಷರೆಲ್ಲ ಈ ಹತ್ಯೆಗಳ ಹಿಡಿತದಿಂದ ತಪ್ಪಿಸಿಕೊಂಡಿದ್ದಾರೆ ಎಂದು ಭಾವಿಸಬಾರದು. ಪುರುಷ, ಜಾತಿ ಶ್ರೇಣಿಯಲ್ಲಿ ತಳ ಸ್ತರಕ್ಕೆ ತಳ್ಳಲ್ಪಟ್ಟ ಜಾತಿಯ ಹಿನ್ನೆಲೆಯಿಂದೇನಾದರೂ ಬಂದು ಊಳಿಗಮಾನ್ಯ–ಭೂಮಾಲಿಕ–ಜಾತಿವಾದಿ ಕುಟುಂಬದ ಹೆಣ್ಣು ಮಗಳೊಡನೆ ವಿವಾಹ ಸಂಬಂಧವನ್ನು ಬೆಸೆದಿದ್ದರೆ ಅಂಥ ಅನೇಕ ಯುವಕರ ಮೇಲೆ ಮಾರಣಾಂತಿಕ ಹಲ್ಲೆಗಳು ನಡೆದು ಅವರ ಪ್ರಾಣ ಹರಣ ಮಾಡಿರುವ ಘಟನೆಗಳು ಅನೇಕವಿವೆ.

ಮರ್ಯಾದೆಯ ಹೆಸರಿನಲ್ಲಿ ನಡೆಯುವ ಹತ್ಯೆಗಳನ್ನು ಸುತ್ತುವರೆದಿರುವುದು ಹೆಚ್ಚು–ಕಡಿಮೆ ಎಲ್ಲ ಸಮಾಜಗಳಲ್ಲಿಯೂ ಹಾಸುಹೊಕ್ಕಾಗಿರುವ ಶ್ರೇಣೀಕೃತ ವ್ಯವಸ್ಥೆ. ಇದರ ಒಳ ಪದರಗಳಲ್ಲಿ ಹುದುಗಿರುವ ಜಾತಿ, ಲಿಂಗ, ವರ್ಗ, ಕುಲ, ಪ್ರದೇಶ ಮುಂತಾದುವು ವ್ಯಕ್ತಿಗಳಿಗೆ, ಗುಂಪುಗಳಿಗೆ ಹುಸಿ ಅಸ್ಮಿತೆಯನ್ನು ಅಂಟಿಸಿ, ತಮ್ಮ ಈ ಅಸ್ಮಿತೆಯನ್ನು ಸ್ವಜಾತಿ, ಸ್ವಧರ್ಮ, ಸ್ವಕುಲಗಳಂಥ ಸಂಕುಚಿತ ಗುಂಪುಗಳ ಒಳಗೆ ವಿವಾಹ ಸಂಬಂಧಗಳನ್ನು ಬೆಳೆಸುವುದರ ಮೂಲಕ ರಕ್ಷಿಸುವಂಥ ಮೌಲ್ಯಾಚರಣೆಗಳು ಎಲ್ಲ ಸಮಾಜಗಳಲ್ಲೂ ಚಾಲ್ತಿಯಲ್ಲಿವೆ. ಈ ಸ್ವಕುಲಾಭಿಮಾನಕ್ಕೆ ಲೈಂಗಿಕ ಮಡಿವಂತಿಕೆಯ ಲೇಪನವನ್ನೂ ಬಳಿದು ಯಾರು ಯಾರನ್ನು ವಿವಾಹವಾಗಬಹುದು ಅಥವಾ ವಿವಾಹವಾಗಬಾರದು ಎಂಬ ನಿರ್ಬಂಧದ ಸಂಕೋಲೆಯಲ್ಲಿ ಯುವಜನತೆಯನ್ನು ಸಿಲುಕಿಸಲಾಗುತ್ತದೆ. ಈ ನಿಯಮಗಳಿಗೆ ಯಾವ ಔಪಚಾರಿಕ ಕಾನೂನು ವ್ಯವಸ್ಥೆಯ ಸಮ್ಮತಿಯಿಲ್ಲದಿದ್ದರೂ ಖಾಪ್ ಅಥವಾ ಜಾತಿ ಪಂಚಾಯಿತಿ ಗಳು, ಗ್ರಾಮಗಳ ಮುಖಂಡರು, ಭೂ ಮಾಲೀಕರು, ಸಾಂಸ್ಕೃತಿಕ ಅರಕ್ಷಕರು ಮುಂತಾದ ಸಮಾಜ ಘಾತುಕ ಅಧಿಕಾರ ಕೇಂದ್ರಗಳು ಕಾನೂನನ್ನು ತಮ್ಮ ಕೈಗೆತ್ತಿಕೊಂಡು ಮಾನವ ಹಕ್ಕುಗಳ ನಿರಂತರ ಉಲ್ಲಂಘನೆ ಮಾಡುತ್ತಿವೆ. ಎಲ್ಲೋ ಅಲ್ಲೊಂದು–ಇಲ್ಲೊಂದು ಪ್ರಕರಣವನ್ನು ಬಿಟ್ಟರೆ ಕಾನೂನು ಕ್ರಮದಿಂದ ತಪ್ಪಿಸಿಕೊಂಡು ಹೋಗುತ್ತಿರುವವರೇ ಎಲ್ಲೆಡೆ ಹರಡಿದ್ದು ಸಮಾಜಕ್ಕೆ ತಪ್ಪು ಸಂದೇಶವನ್ನು ಕಳುಹಿಸುತ್ತಿರುವುದು, ಅದನ್ನು ಪ್ರಶ್ನಿಸದೆ–ಪ್ರತಿಭಟಿಸದೆ ಬಹುಮಂದಿ ಮೌನ ಸಾಂಗತ್ಯ ಮಾಡಿಕೊಂಡಿರುವುದು ಸಮಕಾಲೀನ ಬದುಕಿನ ದುರಂತಗಳಲ್ಲಿ ಒಂದೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಮರ್ಯಾದೆ, ಸಂಸ್ಕೃತಿ, ಸ್ವಕುಲ ನಿಷ್ಠೆ ಇವೇ ಮುಂತಾದ ಸಮಾಜ ಘಾತುಕ ಪ್ರವೃತ್ತಿಗಳ ಸೋಗಿನಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಮಾಡುವವರಿಗೆ ಎಲ್ಲಿಯ ವರೆಗೂ ಕಠಿಣ ಶಿಕ್ಷೆಗಳನ್ನು ವಿಧಿಸುವುದಿಲ್ಲವೋ ಅಲ್ಲಿಯವರೆಗೂ ಪರಿಸ್ಥಿತಿ ಹೀಗೆಯೇ ಮುಂದುವರೆಯುವುದರಲ್ಲಿ ಸಂದೇಹವೇ ಇಲ್ಲ.

ಆರೋಗ್ಯ ವರ್ಧಕ 'ದಂಟಿನ ಸೊಪ್ಪಿನ' ಸಂರಕ್ಷಣೆ ಸತ್ಕಾರ್ಯ



ಒಡಿಸ್ಸಾದ ಕಟುವಾ ದಂಟಿನ ಸೊಪ್ಪು.

ಮೈಸೂರು, ಜೂ.22(ಎಂಕೆ)– ಒಂದು ಕಾಲದಲ್ಲಿ ಅಡುಗೆ ಮನೆಯ ಅವಿಭಾಜ್ಯ ಅಂಗವಾಗಿ, ನಂತರ ಸ್ವಲ್ಪ ಮರೆಯಾಗಿದ್ದ 'ದಂಟು ಸೊಪ್ಪಿ'ನ ಅಸಲಿ ರುಚಿ ಸವಿಯುವುದರ ಜೊತೆಗೆ ಸೊಪ್ಪಿನ ಲೋಕದ ಅನಾವರಣ ಮಾಡಲಾಗಿದೆ.

ಕಣ್ಮರೆಯಾಗುತ್ತಿರುವ ನಾಟಿ ದಂಟಿನ ಸೊಪ್ಪಿನ ತಳಿಗಳನ್ನು ಜನಪ್ರಿಯಗೊಳಿಸುವ ಹಿನ್ನೆಲೆಯಲ್ಲಿ ಸಹಜ ಸಮೃದ್ಧ ಸಂಸ್ಥೆ ವತಿಯಿಂದ ಹೆಚ್.ಡಿ.ಕೋಟೆ ತಾಲೂಕಿನ ರಾಮೇನಹಳ್ಳಿ ಗ್ರಾಮದ ಶ್ರೀನಿವಾಸ್ ಅವರ ಜಮೀನಿನಲ್ಲಿ ಗಾಢ ಕೆಂಪು ವರ್ಣದ ಪಶ್ಚಿಮ ಬಂಗಾಳದ 'ಟಿಕಾ', ಬಹುವರ್ಣದ ಒರಿಸ್ಸಾ ರಾಜ್ಯದ 'ಕಟುವಾ' ಮತ್ತು ಕರ್ನಾಟಕದ 'ಬಿಳಿ ದಂಟು' ಸೇರಿದಂತೆ 30 ಬಗೆಯ ದಂಟಿನ ಸೊಪ್ಪಿನ ತಳಿಗಳನ್ನು ಬೆಳೆಸುವ ಮೂಲಕ ಕ್ಷೇತ್ರೋತ್ಸವ ನಡೆಸಲಾಗಿದೆ.

ದಂಟು ಸೊಪ್ಪಿನ ಕ್ಷೇತ್ರೋತ್ಸವವನ್ನು ಉದ್ಘಾಟಿಸಿದ ನವದೆಹಲಿಯ ಡಾ.ತನಯ್ ಜೋಷಿ ಮಾತನಾಡಿ, ಸೊಪ್ಪು ಪೋಷಕಾಂಶಗಳ ಖಜಾನೆ. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ ಸೊಪ್ಪನ್ನು ವಿಶ್ವದ ಅತ್ಯಂತ ಪೌಷ್ಟಿದಾಯಕ ಆಹಾರ ಎಂದು ಗುರುತಿಸಿದೆ. ಆಧುನಿಕ ಕೃಷಿಯಲ್ಲಿ 'ಕಳೆ' ಎಂದು ಹಣೆಪಟ್ಟಿ ಹಚ್ಚಿಕೊಂಡ ಅನೇಕ ಕಾಡು ಜಾತಿಯ ಸೊಪ್ಪಿನ ತಳಿಗಳು ಗ್ರಾಮೀಣ ಜನತೆಯ ಇಷ್ಟದ ತರಕಾರಿ. ಸೊಪ್ಪಿನ ವೈವಿಧ್ಯವನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ನೀಡಬೇಕು. ಇಂಥ ಮಹತ್ವದ ಕಾರ್ಯಕ್ಕೆ ಶ್ರೀನಿವಾಸ್ ಮುಂದಾಗಿರುವುದು ಶ್ಲಾಘನೀಯ ಎಂದರು.

ಸಹ ಪ್ರಾಧ್ಯಾಪಕ ಡಾ.ಜೆ.ಎಸ್.ಅರವಿಂದ ಕುಮಾರ್ ಮಾತನಾಡಿ, ಉಪ್ಪು ಮತ್ತು ಸೊಪ್ಪು ದಿನನಿತ್ಯದ ಅಡುಗೆಯ ಅಗತ್ಯಗಳು. ರಾಗಿ ಮುದ್ದೆ ಮತ್ತು ಸೊಪ್ಪಿನ ಸಾರು ಬಯಲು ಸೀಮೆಯ ಅನ್ನ ಸಂಸ್ಕೃತಿಯ ಪ್ರತೀಕ. ದಂಟಿನ ಸೊಪ್ಪು ಪ್ರೋಟೀನ್, ವಿಟಮಿನ್ ಎ ಮತ್ತು ಸಿ, ಕ್ಯಾಲ್ಸಿಯಂ ಮತ್ತು



ದಂಟಿನ ಸೊಪ್ಪಿನಿಂದ ಮಾಡಿದ ಖಾದ್ಯಗಳನ್ನು ಪ್ರದರ್ಶಿಸಿದ ಮಹಿಳೆಯರು.

ಕಬ್ಬಿಣದಂತಹ ಖನಿಜಗಳಿಂದ ಸಮೃದ್ಧವಾಗಿದೆ. ಸೊಪ್ಪಿನ ನಿರಂತರ ಬಳಕೆಯಿಂದ ಕಣ್ಣಿನ ಮತ್ತು ದೇಹದ ಆರೋಗ್ಯವನ್ನು ಉತ್ತಮವಾಗುತ್ತದೆ. ನಾರಿನಂಶದಿಂದ ಸಮೃದ್ಧವಾಗಿರುವ ದಂಟು ಸೊಪ್ಪು ಮಲಬದ್ಧತೆಯನ್ನು ನಿವಾರಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ರಕ್ತ ಹೀನತೆಯಿಂದ ಬಳಲುವವರಿಗೆ ದಂಟು ಸೊಪ್ಪು ದಿವ್ಯೌಷಧ. ಸ್ಥಳೀಯ ಸೊಪ್ಪಿನ ತಳಿಗಳನ್ನು ರಾಸಾಯನಿಕರಹಿತವಾಗಿ ರೈತರು ಮುಂದಾಗಬೇಕು ಎಂದು ಸಲಹೆ ನೀಡಿದರು.

ಸಹಜ ಸಮೃದ್ಧ ಸಂಸ್ಥೆಯ ಸಂಶೋಧನಾ ಮುಖ್ಯಸ್ಥ ನಿಶಾಂತ್ ಬಂಕಾಪುರ ಮಾತನಾಡಿ, ದೇಶದ ವಿವಿಧ ಭಾಗಗಳಿಂದ 30 ಬಗೆಯ ದಂಟು ಸೊಪ್ಪಿನ ತಳಿಗಳ ಬೀಜಗಳನ್ನು ಸಂಗ್ರಹಿಸಿ ರೈತರ ಹೊಲದಲ್ಲಿ ಬೆಳೆಸಲಾಗಿದೆ. ಸಹಭಾಗಿತ್ವ ತಳಿ ಆಯ್ಕೆಯ ಮೂಲಕ ರೈತರ ಮತ್ತು ಗ್ರಾಹಕರ



ಕರ್ನಾಟಕದ ಬಿಳಿ ದಂಟಿನ ಸೊಪ್ಪು.

ಇಷ್ಟದ ತಳಿಗಳನ್ನು ಆಯ್ಕೆ ಮಾಡಲಾಯಿತು. ಗಾಢ ಕೆಂಪು ವರ್ಣದ ಪಶ್ಚಿಮ ಬಂಗಾಳದ 'ಟಿಕಾ', ಬಹು ವರ್ಣದ ಒರಿಸ್ಸಾ ರಾಜ್ಯದ 'ಕಟುವಾ' ಮತ್ತು ಕರ್ನಾಟಕದ 'ಬಿಳಿ ದಂಟು' ಉತ್ತಮ ತಳಿ ಎಂದು ಗುರುತಿಸಲ್ಪಟ್ಟಿವೆ. ಮುಂದಿನ ದಿನಗಳಲ್ಲಿ ಈ ತಳಿಗಳ ಬೀಜಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಿ, ರೈತರಿಗೆ ಕೊಡಲಾಗುವುದು ಎಂದರು.

ಈ ವೇಳೆ 30 ಬಗೆಯ ದಂಟಿನ ಸೊಪ್ಪುಗಳನ್ನು ಸಂರಕ್ಷಿಸಿದ ರಾಮೇನಹಳ್ಳಿಯ ಶ್ರೀನಿವಾಸ್ ಮತ್ತು ಮಚ್ಚಾರೆಯ ನೀಲೇಗೌಡರನ್ನು ಸನ್ಮಾನಿಸಲಾಯಿತು. ಮಹಿಳಾ ಸಂಘದ ಸದಸ್ಯರು ಸೊಪ್ಪಿನಿಂದ ಮಾಡುವ ವಿವಿಧ ಬಗೆಯ ಅಡುಗೆಗಳನ್ನು ತಯಾರಿಸಿ ಪ್ರದರ್ಶನಕ್ಕೆ ಇಟ್ಟಿದ್ದರು. ಸಹಜ ಸಮೃದ್ಧದ ಸಂಚಾಲಕಿ ಗೌರಮ್ಮ, ಕೋಮಲ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ನಾನು ಮನಸ್ಸು ಮಾಡಿದರೆ ಒಂದು ದಿನಕ್ಕಾದರೂ ಸಿಎಂ ಆಗುವೆ



ಬಳ್ಳಾರಿ: ನಾನು ಮನಸ್ಸು ಮಾಡಿದರೆ ಒಂದು ದಿನವಾದರೂ ಮುಖ್ಯಮಂತ್ರಿಯಾಗುವೆ ಎಂದು ಹೇಳುವ ಮೂಲಕ ಮಾಜಿ ಸಚಿವ ಜನಾರ್ದನ ರೆಡ್ಡಿ ಮತ್ತೆ ಸುದ್ದಿಯಾಗಿದ್ದಾರೆ.

ನಿನ್ನೆ ಬಳ್ಳಾರಿಯಲ್ಲಿ ಶಾಸಕ ಸೋಮಶೇಖರ್ ರೆಡ್ಡಿ ಹುಟ್ಟುಹಬ್ಬದ ಸಮಾರಂಭದಲ್ಲಿ ಮಾತನಾಡಿದ ಅವರು, ರೆಡ್ಡಿ, ರಾಮುಲು ಸಹೋದರರಿಗೆ ಇಂದು ದುಡ್ಡಿನ ಅವಶ್ಯಕತೆ ಇಲ್ಲ. ನನಗೆ ಶಾಸಕ ಆಗಬೇಕು. ಮಂತ್ರಿ ಆಗಬೇಕು ಎಂಬ ಆಸೆಯಿಲ್ಲ. ನಾನು ಮನಸ್ಸು ಮಾಡಿದರೆ ಇವತ್ತು ಒಂದು ದಿನವಾದರೂ ಸಿಎಂ ಆಗುವೆ ಎಂದರು.

ಲೋಕಸಭಾ ಕ್ಷೇತ್ರದ ಕೊನೆಯ ಸದಸ್ಯರಾಗಿ ಕರುಣಾಕರ ರೆಡ್ಡಿ ಕೆಲಸ ಮಾಡಿದ್ದಾರೆ. ಸೋಮಶೇಖರ್ ರೆಡ್ಡಿ ಬಳ್ಳಾರಿ ನಗರಸಭೆ ಅಧ್ಯಕ್ಷರಿಂದ ಈಗ ಶಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ನಾನು ರಾಜಕೀಯದಲ್ಲಿ ಸಾಕಷ್ಟು ಕಷ್ಟಪಟ್ಟಿದ್ದೇನೆ. ಇಷ್ಟಾದರೂ ನಾನಿಂದು ನಿಮ್ಮ ಮುಂದೆ ಬಂದು ನಿಲ್ಲಲು ಬಳ್ಳಾರಿ ಕನಕದುರ್ಗಮ್ಮ ದೇವಿ ವಿಶೇಷ ಆಶೀರ್ವಾದ ಕಾರಣ ಎಂದು ದೇವರ ಮೇಲೆ ಭಕ್ತಿ ತೋರಿದರು.

ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಈ ವರ್ಷದಿಂದ ಶೇ.10ರಷ್ಟು ಶುಲ್ಕ ಏರಿಕೆ

ಮುಂದಿನ ವರ್ಷದಿಂದ ಒಂದೇ ಸಿಇಟಿ

ಬೆಂಗಳೂರು: ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಶುಲ್ಕ ಶೇ. 10 ಹೆಚ್ಚಳ ಮಾಡುವ ಮೂಲಕ ಸರ್ಕಾರ ಶಾಕ್ ನೀಡಿದೆ.

ವಿಕಾಸಸೌಧದಲ್ಲಿ ಇಂದು ಸಚಿವ ಅಶ್ವಥ್ ನಾರಾಯಣ್ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಈ ವರ್ಷ ಸೇರುವ ವಿದ್ಯಾರ್ಥಿಗಳಿಗೆ ಶೇ.10ರಷ್ಟು ಶುಲ್ಕ ಹೆಚ್ಚಿಸಲು ನಿರ್ಧಾರ ಮಾಡಲಾಗಿದೆ. ಶೇ. 45 ಲೋವರ್ ಫೀಸ್, ಶೇ. 30 ಹೈಯರ್ ಫೀಸ್, ಶೇ. 25 ಮ್ಯಾನೇಜ್ಮೆಂಟ್ ಸೀಟ್‌ಗೆ ಹೋಗಲಿದೆ ಎಂದು ಹೇಳಿದರು.

ಎಂಜಿನಿಯರಿಂಗ್ ಕಾಲೇಜುಗಳ ಜೊತೆ ಹಲವು ವಿಚಾರ ಚರ್ಚೆಯಾಗಿದೆ. ವಿದ್ಯಾರ್ಥಿಗಳಿಂದ ಹೆಚ್ಚು ಶುಲ್ಕ ಸಂಗ್ರಹ ಮಾಡಬಾರದು. ನಿರ್ದಿಷ್ಟ ಶುಲ್ಕ ಮಾತ್ರ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ. ಕೋರ್ಡಿನೇಷನ್ ಸಿಂಪಲ್ ಮಾಡುವ ಬಗ್ಗೆ ಚರ್ಚೆ ಆಗಿದೆ ಎಂದರು. ಈವರೆಗೂ ಸರ್ಕಾರಿ ಸೀಟುಗಳಿಗೆ ಮಾತ್ರ ಸಿಇಟಿ ನಡೆಯುತ್ತಿತ್ತು. ಖಾಸಗಿ ಸೀಟುಗಳಿಗೆ ಕಾಮಿಡ್ ಕೆ ಸೀಟು ಮಾಡಲಾಗುತ್ತಿತ್ತು. ಇದೀಗ ಸಿಇಟಿ ಮತ್ತು ಕಾಮೆಡ್ ಕೆ ಎರಡನ್ನೂ ಒಟ್ಟಿಗೆ ನಡೆಸಲು ಸಮ್ಮತಿ ನೀಡಿದ್ದಾರೆ. ಹಾಗಾಗಿ ಹೇಗೆ ಪರೀಕ್ಷೆ ನಡೆಸಬೇಕು ಎಂದು ಚರ್ಚೆ ಮಾಡಿದ್ದೇವೆ. ಈ ವರ್ಷ ಮಾತ್ರ ಸಿಇಟಿ ಮತ್ತು ಕಾಮೆಡ್–ಕೆ ಪ್ರತ್ಯೇಕ ಪರೀಕ್ಷೆ ಇರಲಿದೆ. ಮುಂದಿನ ವರ್ಷದಿಂದ ಸಿಇಟಿ ಏಕರೂಪದ ಸಿಇಟಿ ನಡೆಸಲು ನಿರ್ಧಾರ ಮಾಡಲಾಗಿದೆ. ಈ ಬಗ್ಗೆ ಒಡಂಬಡಿಕೆ ಆಗಲಿದೆ ಎಂದು ಅಶ್ವಥ್ ನಾರಾಯಣ್ ಮಾಹಿತಿ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಫರ್ನಿಶಿಂಗ್ ಅಂಗಡಿಗೆ ಕೆಲಸಕ್ಕೆ, ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಹುಡುಗಿಯರು: 10am to 7pm ಸಂಬಳ 6000 to 8000.
ಹುಡುಗರು: 10am to 9pm ಸಂಬಳ 8000 to 10,000. Contact:
9916459786

ಹೊಸ ಮನೆ ಮಾರಾಟಕ್ಕಿದೆ
30x40 ಡ್ಯೂಪ್ಲೆಕ್ಸ್ ಮನೆ, 3 ಬೆಡ್ ರೂಂ, ಆಲ್ ಟೀಕ್, ಇಟಲಿಯನ್ ಕಿಚನ್, ವಿಜಯನಗರ 4ನೇ ಹಂತದ ಹತ್ತಿರ
8618495118

ಸೈಟು ಮಾರಾಟಕ್ಕಿದೆ
30x40, 30 ಲಕ್ಷ, ನ್ಯೂ ಆರ್.ಟಿ.ನಗರದ ಹತ್ತಿರ, ದಟ್ಟಗಳ್ಳಿ, ಸೈಟ್, ಹೊಸ ಮನೆ ಹಳೇ ಮನೆ ಮಾರುವವರು – ಕೊಳ್ಳುವವರು
9945042875

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷಿನ್, ಮೈಕ್ರೋ ವೋವೆನ್, LED, LCD, AC
Sales & Service
Contact: Srinivas
9379699229

For Housing Loan,
Personal, Business Loan
Sale / Purchase of Property, Registration, Plan, Estimation, Free Legal Check
99454 14974

airtel WANTED
SALES EXECUTIVE
Salary: 12,000/-
Incentive up to 8,000/-. Contact:
9972728134

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
ಬ್ರಾಹ್ಮಣ ಮಹಿಳೆ ಅಡುಗೆ ಸಹಾಯಕಿ ಬೇಕಾಗಿದ್ದಾರೆ
9449380528
7026498386

FOR TUTIONS
From: 1std to 7th Std, State /CBSE / ICSE Syllabus, Ananda Nagar 'B' Block, Mysore - 570026
7019760330

ಸೈಟು ಮಾರಾಟಕ್ಕಿದೆ
ದಟ್ಟಗಳ್ಳಿ, 3ನೇ ಹಂತ (ಕನಕದಾಸನಗರ) 40x60, ಪೂರ್ವಕ್ಕೆ ರಸ್ತೆ, 80 ಅಡಿ ರಸ್ತೆ ಹಿಂಭಾಗ, MUDA ನಿವೇಶನ. ತಕ್ಷಣ ಸಂಪರ್ಕಿಸಿ:
Mob: 9342119411
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

@ Dattagalli
House For Sale
20 x 30 Duplex S/F
@ Hunsur Road
Site For Sale 30 x 51 N/W Corner
@ Yesh Mega City
99454 14974

ತಕ್ಷಣ ಬೇಕಾಗಿದ್ದಾರೆ
ಮೈಸೂರು, ವಿಜಯನಗರ 4ನೇ ಹಂತ, ಕುವೆಂಪುನಗರ, ಹೆಬ್ಬಾಳ್ & ಅಂತರಸಂತೆ ಏರಿಯಾಗಳಲ್ಲಿ ಸೆಕ್ಯೂರಿಟಿ ಗಾರ್ಡ್‌ಗಳು ಹೆಬ್ಬಾಳ್‌ನ ಕಂಪನಿಯಲ್ಲಿ ಲೋಡಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದು, SSLC, PUC ಓದಿರುವವರಿಗೆ ಹತ್ತಿರದವರಿಗೆ ಮೊದಲ ಆದ್ಯತೆ.
9035050653 / 9035050656

TV ಕೆಟ್ಟಿದೆಯೇ?
LCD, LED TV
ಫ್ರಿಡ್ಜ್, ವಾಷಿಂಗ್ ಮೆಷಿನ್, Micro Oven Doorstep ಸರ್ವಿಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವಿಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ
9342114069

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಗಾಯತ್ರಿಪುರಂ ವಿಶ್ವಕರ್ಮ ಕಾಲೋನಿ ಹತ್ತಿರವಿರುವ, ಕ್ಯಾತಮಾರನಹಳ್ಳಿ ಮುಖ್ಯ ರಸ್ತೆ ಎಡ ಭಾಗದಲ್ಲಿರುವ ನಂದಿನಿ ಕ್ಷೀರ ಕೇಂದ್ರಕ್ಕೆ ಪುರುಷ ಮತ್ತು ಮಹಿಳೆ ಕೆಲಸಕ್ಕೆ ಬೇಕಾಗಿದ್ದಾರೆ. ಗೀತಾ
9900069111

SITES FOR SALE
20x30 - 12.60 Lakhs
30x40 - 25.20 Lakhs
Bank Loan upto 75%, Ready for Registration, Near Gurur Bus Stop, Ramabainagar, Mysore, DTCP approved, (Corporation Limits) 1.5 kms from J P Nagar Ring Road.
8660105902

ಮಾರಾಟಕ್ಕಿದೆ
ವರ್ಟಿಕಲ್ ಬಾಯ್ಲರ್ 600kg, ಬೆಳಗೊಳ ಇಂಡಸ್ಟ್ರಿಯಲ್ ಏರಿಯಾ, ಮೇಟಗಳ್ಳಿ, ಮೈಸೂರು.
9448750522 / 9448290309

ಬ್ಯುಸಿನೆಸ್ ಪ್ಲಾನ್
ಬ್ಯುಸಿನೆಸ್ ಪ್ಲಾನ್ ನಿಮ್ಮದು, ಬಂಡವಾಳ ನಮ್ಮದು. ಬಂದ ಆದಾಯದಲ್ಲಿ 50–50 ಈ ರೀತಿ ಬ್ಯುಸಿನೆಸ್ ಪ್ಲಾನ್ ಇರುವವರು ಕೂಡಲೇ ಸಂಪರ್ಕಿಸಿ:
Mob: 9901080314

ಹೊಸ ಚೀಟಿಗಳ ಪ್ರಾರಂಭ
ಸೀಬಿ ನರಸಿಂಹಸ್ವಾಮಿ ಚಿಟ್ಸ್ (ಕ) ಪ್ರೈ.ಲಿ, ಮೈಸೂರು / ಹಾಸನ

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/–	3000/–
2 ಲಕ್ಷ	25	8000/–	6000/–
5 ಲಕ್ಷ	25	20,000/–	15,000/–
10 ಲಕ್ಷ	50	20,000/–	15,000/–
10 ಲಕ್ಷ	100	10,000/–	7,500/–
25 ಲಕ್ಷ	100	25,000/–	18,750/–

7892303484 / 8749077453

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL
@ Srirampura & Gokulam
Call: 7829937469, 9901803394
ONLINE TRAINING AVAILABLE

ವಿವಾಹ ವೇದಿಕೆ
ಒಕ್ಕಲಿಗ ಗೌಡರು 20 ರಿಂದ 40 ವಯಸ್ಸು ಲಿಂಗಾಯಿತರು 20 ರಿಂದ 40, ನಾಯಕರು 20 ರಿಂದ 40 ವರ್ಷ, ಬ್ರಾಹ್ಮಣರು 20 ರಿಂದ 40 ವರ್ಷ (ಹೆಣ್ಣು ಮಕ್ಕಳು ಮಾತ್ರ)
8660870553

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್, ಸಂಬಳ: 9,500–11,000/–, ವಯಸ್ಸು: 25 ವರ್ಷದಿಂದ 60 ವರ್ಷ, ಸ್ಥಳ: ವಿಜಯನಗರ, ಹೆಬ್ಬಾಳ್, ಯಾದವಗಿರಿ, ಬನ್ನಿಮಂಟಪ, ಸಿದ್ದಾರ್ಥ ಲೇಔಟ್ ಮತ್ತು ಮೈಸೂರು ಸಿಟಿ.
6361740914

PUBLIC NOTICE
We, Rakesh B.P. & Swetha R, Resident of D.No.4828, Rajendra Nagara Main Road, Mysore have changed our son's name as Nihal Raj B.R instead of Rhehaansh R Bondade as sworn affidavit made before S.V.Nagendra Notary, Mysore on 21-06-2022

ತಕ್ಷಣವೇ ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ ಸೆಕ್ಯೂರಿಟಿ ಗಾರ್ಡ್ಸ್, ಹೌಸ್‌ಕೀಪಿಂಗ್ ಮಹಿಳೆಯರು ಮತ್ತು ಪುರುಷರು, ಟಿ. ನರಸೀಪುರ, ಆಲನಹಳ್ಳಿ, ಸಿದ್ದಾರ್ಥ ಲೇಔಟ್, ಮೇಟಗಳ್ಳಿ, ಹಿನಕಲ್, ಅಗ್ರಹಾರ, ರಾಮಕೃಷ್ಣನಗರ ಸುತ್ತಮುತ್ತ ಬೇಕಾಗಿದ್ದಾರೆ. ಆಸ್ಪತ್ರೆ ಕೆಲಸಕ್ಕೆ ಬೇಕಾಗಿದ್ದಾರೆ (ESI+PF ಉತ್ತಮ ಸಂಬಳ) ಯಾವುದೇ ಶುಲ್ಕ ಇಲ್ಲ. ಸಂಪರ್ಕಿಸಿ
8884286321
8884286123 / 8884339446

ತರಬೇತಿ ನಂತರ ತಕ್ಷಣ ಉದ್ಯೋಗ
SSLC Pass or PUC Fail!
Diploma in NTT (Teachers Training) (Nursery / Montessori / Kindergarten) Exam & Certificate by All India Child Care & Education. NEW Delhi (MHRD Govt of India Approved) Join Training off line / Online Classes, Jnana Gangothri Convent, Rajendra Nagara, Mysuru - 570007
9113980741

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣೀಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

S.M GOLD
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5200
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ.(T&C)
8050518881

Ground Floor ಮನೆ ಬಾಡಿಗೆಗೆ ದೊರೆಯುತ್ತದೆ
ಮೈಸೂರು, ಶ್ರೀರಾಂಪುರ 2ನೇ ಹಂತ, ಕಂದಾಯನಗರ 1ನೇ ಹಂತ, ರಿಂಗ್ ರಸ್ತೆಯ ಪಕ್ಕದಲ್ಲಿ, ಕೆಳ ಅಂತಸ್ತು 30X40 ಮನೆ ಪೂರ್ವ ಬಾಗಿಲು 2 Bedrooms (Attached), Living Room, Italian Kitchen, CCTV, Solar, Geyser, Mosquito Net and Doors, ಕಬಿನಿ ನೀರಿನ ಸೌಲಭ್ಯವುಳ್ಳ ಮನೆ ಬಾಡಿಗೆಗೆ ದೊರೆಯುತ್ತದೆ. ಹೆಚ್ಚಿನ ವಿವರಗಳಿಗೆ ಮತ್ತು ವೀಕ್ಷಿಸಲು ಮಾಲೀಕರಿಗೆ ಕರೆ ಮಾಡಿ.
7996504996 (Brokers Excuse)

IMMEDIATE HIRING IN MYSORE
Qualification: SSLC, PUC, ITI, Diploma, Any Degree. Salary: 15,000 - 30,000, Age Limit: Below 35, Applicable for Male Candidates Only.
9880151303 / 6366638189

HOUSE FOR RENT
Single BHK House, @ II Main, 9th Cross @ Vidyaranaypuram. Contact:
9740852698

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ತಕ್ಷಣ ಬೇಕಾಗಿದ್ದಾರೆ
2 Wheeler Service Station ಗೆ ಹುಡುಗರು ಬೇಕಾಗಿದ್ದಾರೆ.
ದಿ ಹೆರಿಟೇಜ್ ಗ್ಯಾರೇಜ್
ಅಗ್ರಹಾರ, ಮೈಸೂರು
9535266600
8073062515

Lost of Receipt Book
UJJIVAN SMALL FINANCE BANK
Book No. 8506
Recipt#212626-212650
Contact:
Mob: 9845311066

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿಯೊಂದರಲ್ಲಿ Supervisor ಕೆಲಸ ಮಾಡಲು ಸರ್ಕಾರಿ ಮಾನ್ಯತೆ ಇರುವ Dip in Agriculture / Horticultue ಮಾಡಿರುವ ಅಭ್ಯರ್ಥಿ ಬೇಕಾಗಿದ್ದಾರೆ. ESI, PF ಸೌಲಭ್ಯವಿದೆ
9945537353 / 7204642920

ಬೇಕಾಗಿದ್ದಾರೆ
Home Nurse ಕೆಲಸಕ್ಕೆ ಯುವಕ–ಯುವತಿಯರು ತಕ್ಷಣ ಬೇಕಾಗಿದ್ದಾರೆ. 14,000/– ಸಂಬಳ, ಅನುಭವವಿಲ್ಲದವರಿಗೆ ತರಬೇತಿಯನ್ನು ನೀಡಿ ಗೌರವ ಧನವನ್ನು ಸಹ ನೀಡಲಾಗುತ್ತದೆ. ಊಟ ವಸತಿ ಉಚಿತ. ವಿದ್ಯಾರ್ಹತೆ:–7th, SSLC, PUC ಅಥವಾ ಯಾವುದೇ ಡಿಗ್ರಿ ಪಾಸ್ ಅಥವಾ ಫೇಲ್. ಸಂಪರ್ಕಿಸಿ:
9916905188

AFFIDAVIT
I, Sridhar T.A., S/o T.S. Ananthanarayan, residing at #118, 3rd Cross, Vijayanagar Railway Layout, Mysuru-570 016, hereby declare that my name mentioned in some documents written as and Sridhar T.A., in some documents name written as T.A. Sridhar. I hereby declare in front of Notary C. Mangala on 22.6.2022, that both the name pertain to the one and same person. My correct name is Sridhar T.A.
Sd/- Sridhar T.A.

ಮಹಿಳೆಯರಿಗೆ
ಆಫೀಸ್ ಕೆಲಸ ಮತ್ತು ಮೇನೇಜ್‌ಮೆಂಟ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
Mob: 9901080314

ಬೇಕಾಗಿದ್ದಾರೆ
ಶಾಲೆಯಲ್ಲಿ ಕಸ ಗುಡಿಸಲು ಮತ್ತು ಮನೆ ಕೆಲಸಗಳಲ್ಲಿ ಸಹಾಯ ಮಾಡಲು ಮಹಿಳೆ ಬೇಕಾಗಿದ್ದಾರೆ, ಕೆಲಸದ ಸಮಯ ಬೆಳಿಗ್ಗೆ 9 ರಿಂದ ಸಂಜೆ 5, ಸಂಬಳ 7500/–. (ಶಾಲೆಯ ಸುತ್ತ ಮುತ್ತ ಸಮೀಪದಲ್ಲೇ ವಾಸಿಸುವವರಿಗೆ ಆದ್ಯತೆ) ಸಂಪರ್ಕಿಸಿ:
ಜ್ಞಾನ ಗಂಗೋತ್ರಿ ಕಾನ್ವೆಂಟ್, ಇಂಗ್ಲಿಷ್ ಮೀಡಿಯಮ್ ರಾಜೇಂದ್ರ ನಗರ, ಮೈಸೂರು 570007
Call 9243580672

WANTED
Field Supervisor - 02
Field Officer - 02
To work in Security Agency with experience.
Contact:
Mob: 9741616826

Sites for Sale
30x40 E/F, near Airport
30x40 W/F Kaveri Grameena Bank Layout.
30x40 W/F Chethana Layout, near SVIE, Vijayanagar 4th Stage. Contact:
Mob: 9480325747

THRISHVA BUILDERS
ಅತಿ ಉತ್ತಮ ಗುಣಮಟ್ಟದಲ್ಲಿ ಮನೆ ಕಟ್ಟಿಸಿ ಕೊಡುತ್ತೇವೆ ಮತ್ತು ಹೊಸದಾಗಿ ಕಟ್ಟುತ್ತಿರುವ ಮನೆಗೆ ಇಂಟೀರಿಯರ್ (Italian Kitchen and Wardrobe) ಕೆಲಸ ಮಾಡಿಕೊಡುತ್ತೇವೆ
9742327077

ಜಮೀನು ಮಾರಾಟಕ್ಕಿದೆ
ತಾಯೂರು ಗ್ರಾಮ, ನಂಜನಗೂಡು ತಾಲ್ಲೂಕು, ಸರ್ವೆ ನಂ. 432, 1ಎಕರೆ, 19 ಗುಂಟೆ
8217605560

ಶ್ರೀ ನಿಮಿಷಾಂಬ ಸಿವಿಲ್ ವರ್ಕ್
ನಮ್ಮಲ್ಲಿ ಎಲ್ಲಾ ವಿಧವಾದ ಸಿವಿಲ್ ವರ್ಕ್ ಮಾಡಿಕೊಡಲಾಗುವುದು ಹಾಗೂ ಸರ್ಕಾರಿ ನೌಕರರಿಗೆ ಯಾವುದೇ ಅಡ್ವಾನ್ಸ್ ಇಲ್ಲದೆ 25% ಕೆಲಸ ಮಾಡಿಕೊಡಲಾಗುವುದು. (ಷರತ್ತುಗಳು ಅನ್ವಯ). ಸಂಪರ್ಕಿಸಿ:
6363514905, 7483096526

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

HOTEL MANAGEMENT ADMISSION OPEN
Govt. of Karnataka Department of Tourism. Affiliated by NCHMCT - Noida
Food Craft Institute
Dasara Exhibition Grounds, Mysore. www.fcimysuru.com
6362018821 / 0821-2445388

30X40 @ 4.50 ಲಕ್ಷಗಳು
BMICAPA Approved 'A' Khatha, K.S.R.T.C ಬಸ್ ನಿಲ್ದಾಣದಿಂದ 8 km, 3km ಸಾತಗಳ್ಳಿ & 10 lane ಬೆಂಗಳೂರು– ಮೈಸೂರು ರಸ್ತೆ. ಸುಲಭ ಕಂತುಗಳಲ್ಲಿ ಲಭ್ಯ
9148972400 / 9060495010

ಹೋಟೆಲ್ ಮಧುರಾ
ನೂತನವಾಗಿ ಪ್ರಾರಂಭವಾಗುತ್ತಿರುವ ಹೋಟೆಲ್‌ಗೆ ಸೌತ್ ಇಂಡಿಯನ್ ನಾರ್ತ್ ಇಂಡಿಯನ್ ಮತ್ತು ರೋಟಿ, ಟೀ, ಕಾಫಿ ಮಾಡುವವರು, ರುಬ್ಬುವವರು, ದೋಸೆ ಭಟ್ಟರು, ಕೌಂಟರ್ ಬಾಯ್, ಅಡುಗೆ ಸಹಾಯಕರು ಸಪ್ಲೆಯರ್, ಕ್ಲೀನರ್ ಬೇಕಾಗಿದ್ದಾರೆ.
8088337564

ಬೇಕಾಗಿದ್ದಾರೆ
ಮನೆಯಲ್ಲಿಯೇ ಕುಳಿತು ಸಂಪಾದಿಸಲು ಮಹಿಳಾ ಸಂಘದ ಸದಸ್ಯರುಗಳು ಅಥವಾ ಗುಂಪಿನವರು ಬೇಕಾಗಿದ್ದಾರೆ. ಸಂಪರ್ಕಿಸಿ:
8884777415

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಬೇಕಾಗಿದ್ದಾರೆ. Salary: 13,000-21,000 + ESI, PF, ವಿದ್ಯಾರ್ಹತೆ: 10th, PUC, ITI, Diploma and Any Degree ಇಂದೇ ಸಂಪರ್ಕಿಸಿ:
9035734821

ಫಾಮ್ LAND ಮಾರಾಟಕ್ಕಿದೆ
17 ಗುಂಟೆ Forum ಮಾಲ್ ನಿಂದ 8.3 km
7892565278

ಬೇಕಾಗಿದ್ದಾರೆ
ಫುಲ್ ಟೈಂ ಅಥವಾ ಪಾರ್ಟ್ ಟೈಂ ಟೆಲಿಕಾಲ್ ಮಾಡಲು ಮಹಿಳೆಯರು ಕೆಲಸ ಮಾಡಲು ಬೇಕಾಗಿದ್ದಾರೆ.
9514425727

SITE FOR SALE
30x40
ಪೂರ್ವಾಭಿಮುಖ ಜ್ಞಾನಭಾರತಿ ಲೇಔಟ್ ದಡದಹಳ್ಳಿ, ಮುಡಾ ಖಾತೆ ಆಗಿದೆ. ಬೆಲೆ : 21 ಲಕ್ಷ
9342123373

SITES WANTED
All dimension in Rajiv Nagar (Devnoor) 1st Stage, 2nd Stage, 3rd Stage, Sathgalli, 'A' Zone, P & T, D.T.S Rao Layout & Cauvery Layout, Health Interested Owners can Contact:
8660463567

MUDA APPROVED SITE FOR SALE
30x40 Site @1650/ Sft.
Immediate Reg. & Bank Loan Available Next to KBL Green Wood Layout & Near Lal Bahadur Shasthri Nagar, 1.5 kms from Ring Road
7795609173

PART TIME WORK
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು ಕೊರಿಯರ್ ಸೌಲಭ್ಯವಿದೆ.
9108418233
9743217566

LOAN ಸಾಲ
ಮೈಸೂರು ಹಾಗೂ ಮೈಸೂರಿನ ಎಲ್ಲಾ ತಾಲ್ಲೂಕುಗಳಿಗೆ ಹೊಸ Business ಗೆ ಹಾಗೂ ಹಳೆಯ Business ಗೆ ಸಾಲದ ಸೌಲಭ್ಯಗಳನ್ನು ಒದಗಿಸಿ ಕೊಡಲಾಗುವುದು ಹಾಗೂ (New Business ಗೆ Subsidy ಮಾಡಿಕೊಡಲಾಗುವುದು) SC/ST ಮತ್ತು ಮಹಿಳೆಯರಿಗೆ ವಿಶೇಷ ಆದ್ಯತೆ.
9686773884 / 9620934944

FOR SALE
1)30x40 10 lakhs HD Kote
2)40x60 Commercial Jayanagara
3)40x60 KBL Layout Devegowda Circle Near Bannur Road
4) 30x40 G+2 House Srirampura
5)25x40 house Rk nagar
6) 30x40 G+floor New House Bogadi Near Hari Vidyalaya
PRAKRUTHI PROPERTIES
90359 90359 / 95386 90359

ತಕ್ಷಣ ಬೇಕಾಗಿದ್ದಾರೆ
ಬೇಗೂರು, ತೊಂಡುವಾಡಿ, ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC , ಸಂಬಳ: 14,000/- ESI ಮತ್ತು PF ಸೌಲಭ್ಯ ಇರುತ್ತದೆ. ಸಂಪರ್ಕಿಸ ಬೇಕಾದ ಸಂಖ್ಯೆಗಳು:
9620667819 / 9620777819

ಬೇಕಾಗಿದ್ದಾರೆ
ವಿದ್ಯಾರಣ್ಯಪುರಂನಲ್ಲಿ ಇರುವ ಪ್ರತಿಷ್ಠಿತ ಅಂಗಡಿಯಲ್ಲಿ ಕೆಲಸ ಮಾಡಲು
1) STORES INCHARGE
2) HELPER BOYS
ಸಂಪರ್ಕಿಸಿ:
9620459503 / 7795266905

HOUSE FOR SALE
20x30 MUDA 3 BHK Duplex with North Facing Site & Dattagalli, Somnathnagar. Rs.75 Lakhs
40x60 MUDA, 4BHK Duplex, East Facing Site, Vijayanagar 4th Stage, 2.65 Cr. Brokers Don't Call
8660105902

ತಕ್ಷಣ ಬೇಕಾಗಿದ್ದಾರೆ
ಮೈಸೂರು, ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. 8 hrs ಕೆಲಸ ಅನುಭವವುಳ್ಳವರು ತಕ್ಷಣ ಬೇಕಾಗಿದ್ದಾರೆ ಹಾಗೂ ಟಿ.ನರಸೀಪುರ, ಏರಿಯಾದಲ್ಲಿ ಸಹ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಆಸಕ್ತಿವುಳ್ಳವರು ಮೂಲ ದಾಖಲಾತಿಯೊಂದಿಗೆ ಸಂಪರ್ಕಿಸಿ:
9480615539

ಸುವರ್ಣ ಯಾತ್ರ
ಕಾಶಿ ಪ್ರವಾಸ 7 ದಿನಗಳು 09/08/22, ಅಯೋಧ್ಯೆ, ಪ್ರಯಾಗ್ ರಾಜ್, ಶ್ರೀ ಬಾಬಾ ಬೈದ್ಯನಾಥ ಹಾಗೂ ಇತರೆ ಸ್ಥಳಗಳು.
ತಮಿಳುನಾಡು ಪ್ರವಾಸ 5 ದಿನಗಳು 01/07/22, ರಾಮೇಶ್ವರ, ಕನ್ಯಾಕುಮಾರಿ, ತಂಜಾವೂರು 9 ನವಗ್ರಹ ಹಾಗೂ ಇತರೆ ಸ್ಥಳಗಳು
9019462508 / 8970949434

HOUSE FOR SALE
30x40 MUDA New 4 BHK Duplex, East Facing Site, at Ramkrishnagar, Near Andolana Circle - Rs.1.55 Cr.
30x40 New 3 BHK Duplex with Borewell, N/F Site & E/F Door, Vijayanagar 4th Stage - Rs.1.58 Cr. (Brokers Excuse)
8660105902

ಬೇಕಾಗಿದ್ದಾರೆ
ಕಂಪ್ಯೂಟರ್ ಟೈಪಿಂಗ್ ಬಲ್ಲ ನುರಿತ ಅಭ್ಯರ್ಥಿಗಳು ಬೇಕಾಗಿದ್ದಾರೆ.
ARTHOR SERVICES PVT. LTD
No.289, 2nd Floor, 'M' Block, Kuvempunagar, Mysore-570023, Opp. Karuna Hosptial.
Shekar : **9945911118**
Anil : **7026996123**

2ಲೀ ಸನ್‌ಪ್ಯೂರ್ ಎಣ್ಣೆ ಉಚಿತ
25Kg MRಗೋಲ್ಡ್ BTರೈಸನ್ನು ಖರೀದಿಸಿದರೆ 2 ಲೀಟರ್ ಸನ್‌ಪ್ಯೂರ್ ಅಡುಗೆ ಎಣ್ಣೆ ಉಚಿತ ಅಥವಾ 5Kg ಬ್ರಾಂಡೆಡ್ ಗೋದಿ ಹಿಟ್ಟು 2Kgಸಕ್ಕರೆ, 1Kg ಫೈನ್ ತೊಗರಿಬೇಳೆಯನ್ನು ಉಚಿತವಾಗಿ ಕೊಡುತ್ತೇವೆ ಬೆಲೆ ರೂ 1350/- ಮಾತ್ರ
ಸನ್‌ಶೈನ್ ಟ್ರೇಡರ್ಸ್ (ಷರತ್ತು ಅನ್ವಯ)
ಶಿವರಾಂಪೇಟೆಯ ಮೋರ್ ಮೆಗಾಸ್ಟೋರ್ ಎದುರಿನ ರಸ್ತೆ
9206470833 ಮೈಸೂರು

WANTED
1.Experienced House Keeping Supervisor For an Reputed Hospital In Mysuru
Contact: with original Documents.
M/S Karnataka Security Agency ,No. 513, Honna Complex, K.R.Mohalla Mysuru. Opp. Lakshmi Talkies Road, Mysuru. Contact
0821-4247385 / 9480420666

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000
9740733021 / 9535028750

ಕೊಳ್ಳೇಗಾಲ ಜ್ಯೋತಿಷ್ಯರು ನಂ.01 ಮೋಡಿ ಮಾಂತ್ರಿಕರು, ಪಂ.ಎಸ್.ಕುಮಾರಸ್ವಾಮಿ
ಮೊ: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋಚರ ಶಕ್ತಿಯಿಂದ ಸ್ತ್ರೀ–ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾಧೇ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ಕರೆ ಮಾಡಿ ಬನ್ನಿ.
ಖಾಯಂ ವಿಳಾಸ: ಎ.ಟಿ.ಎಂ ಪಕ್ಕ, ಟಿಕೇಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (ರಿಲಾಯನ್ಸ್ ಮಾಲ್), ಬಿ.ಎನ್.ರೋಡ್ ಕೆ.ಎಸ್.ಆರ್.ಟಿ.ಸಿ ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಮಾಂತ್ರಿಕ ಕೇರಳ ಶ್ರೀ ಭಗವತಿ ಜೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 97318 39596
ಇವರು ಕುಟ್ಟಿ ಚೇತನ್ ಮಾರ್ತಾಂಡ ದೇವಿ ಭಗವತಿ ಕಾಟೇರಿ ಪ್ರಯೋಗದಿಂದ, ಸ್ತ್ರೀ ಪುರುಷ ಪ್ರೇಮ, ವಿವಾಹ, ಸಂತಾನ, ದಾಂಪತ್ಯ ಸಮಸ್ಯೆ, ಶತ್ರು ಭಾಧೇ, ಪ್ರೇತಾ ಭಾದೇ, ಹಣದ ಸಮಸ್ಯೆ, ತನ್ನವರೇ ತನಗೆ ಶತ್ರು, ಕೌಟುಂಬಿಕ ಕಲಹ ನಿಮ್ಮ ಯಾವುದೇ ಸಮಸ್ಯೆಗಳಿಗೆ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ತಕ್ಷಣ ಪರಿಹಾರ ಶತಸಿದ್ಧ.
ಖಾಯಂ ಮನೆ ವಿಳಾಸ: ಮನೆ ನಂ 68, ಸತ್ಯ ಮಾರ್ಗ, ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ.ಆಫೀಸ್ ಎದುರು, ಸಿದ್ದಾರ್ಥನಗರ, ಮೈಸೂರು.

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರಿ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಮಹಾರಾಜರ ಯೋಜನೆಯಂತೆ ಅಭಿವೃದ್ಧಿಗೊಂಡಿದ್ದರೆ ಮೈಸೂರು ದೇಶದಲ್ಲೇ ನಂಬರ್ ಒನ್ ಮಾದರಿ ನಗರವಾಗುತ್ತಿತ್ತು

● ಉದ್ಯಮಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡರ ಅಭಿಮತ ● ಅಧಿಕಾರಕ್ಕೆ ಬಂದವರೆಲ್ಲಾ ಅಭಿವೃದ್ಧಿ... ಅಭಿವೃದ್ಧಿ... ಎಂದರೆ ಹೊರತು ಯೋಜನೆಯನ್ನೇ ರೂಪಿಸಿಲ್ಲ; ವಿಷಾದ

ಮೈಸೂರು, ಜೂ.22(ಎಂಕೆ)– ಮಹಾರಾಜರ ಯೋಜನೆಯಂತೆಯೇ ಅಭಿವೃದ್ಧಿಯಾಗಿದ್ದರೆ ಮೈಸೂರು ದೇಶದಲ್ಲಿಯೇ ನಂಬರ್ ಓನ್ ಮಾದರಿ ನಗರವಾಗುತ್ತಿತ್ತು. ಆದರೆ ಈಗಾಗಿರುವುದೇ ಬೇರೆ. ಇಲ್ಲಿಯವರೆಗೂ ಅಧಿಕಾರ ನಡೆಸಿದವರು ಅಭಿವೃದ್ಧಿ ಎಂದಿದ್ದಾರೆಯೇ ಹೊರತು ವ್ಯವಸ್ಥಿತ ಯೋಜನೆಯನ್ನು ರೂಪಿಸಿಲ್ಲ ಎಂದು ಮಾಜಿ ಸಚಿವರೂ ಆದ ಶಾಸಕ ಜಿ.ಟಿ. ದೇವೇಗೌಡ ಬೇಸರ ವ್ಯಕ್ತಪಡಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಉದ್ಯಮಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಗರದ ಸುತ್ತಲಿನ ಪ್ರದೇಶ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಬರಲಿದೆ. ಹಲವು ಬಡಾವಣೆಗಳಾಗಿದ್ದು, ಯಾವೊಂದು ಬಡಾವಣೆಯಲ್ಲಿಯೂ ವ್ಯವಸ್ಥಿತ ಮೂಲ ಸೌಕರ್ಯಗಳಿಲ್ಲ. ಒಳ ಚರಂಡಿ ವ್ಯವಸ್ಥೆ ಸರಿಯಿಲ್ಲ. ಬಡಾವಣೆ ನಿರ್ಮಾಣಕ್ಕೆ ಅನುಮತಿ ನೀಡುವ ಸಂಬಂಧಪಟ್ಟ ಅಧಿಕಾರಿಗಳು ಬಡಾವಣೆಯ ಪ್ಲಾನ್ ನೋಡದೆಯೇ ಅನುಮತಿ ನೀಡಿದ್ದಾರೇನೋ ಎನ್ನಿಸುತ್ತದೆ. ಸಾಲ ಮಾಡಿ ಮನೆಕಟ್ಟಿದವರು ಮೈಸೂರಿನಲ್ಲಿ ಮನೆಕಟ್ಟಿ ತಪ್ಪು ಮಾಡಿದ್ದೇವೆ ಎಂದು ಪರಿತಪಿಸುವಂತಾಗಿದೆ ಎಂದು ವಿಷಾಧಿಸಿದರು.

ಮೈಸೂರು ನಗರದ ಬಹುತೇಕ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಮಂತ್ರಿಯಾಗಿದ್ದ ವೇಳೆ ಪ್ರಯತ್ನಿಸಲಾಗಿತ್ತು. ಆದರೆ ದುರದೃಷ್ಟವೆಂಬಂತೆ ಎರಡು ಬಾರಿ ಮಂತ್ರಿಯಾದರೂ ವರ್ಷಕ್ಕಿಂತ ಹೆಚ್ಚು ಕಾಲ ಸರ್ಕಾರವೇ ಇರುತ್ತಿರಲಿಲ್ಲ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಪ್ರತಿನಿತ್ಯ ತಿರುಗಾಡುತ್ತಿದ್ದೇನೆ. ಸಾಧ್ಯವಾದಷ್ಟು ಸಮಸ್ಯೆಗಳನ್ನು ಬಗೆಹರಿಸುತ್ತಿದ್ದು, ಕೈಗಾರಿಗೋದ್ಯಮಿಗಳು, ವ್ಯಾಪಾರಸ್ಥರ ಸಮಸ್ಯೆಗಳನ್ನು ಬಗೆಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.



ಉದ್ಯಮಿಗಳೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಉದ್ಯಮಿಗಳು ತಮ್ಮ ಸಮಸ್ಯೆಗಳನ್ನು ಪರಿಹರಿಸುವಂತೆ ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಅವರಲ್ಲಿ ಮನವಿ ಮಾಡಿದರು. ಇದೇ ವೇಳೆ ಗೌಡರನ್ನು ಅಭಿನಂದಿಸಿದರು.

4 ತಿಂಗಳಾದರೂ ಟೆಂಡರ್ ಕರೆದಿಲ್ಲ: ಮೈಸೂರು ಹೋಟೆಲ್ ಮಾಲೀಕರ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ನಾಡಹಬ್ಬ ಮೈಸೂರು ದಸರಾಗೆ ಇನ್ನೂ ನಾಲ್ಕು ತಿಂಗಳು ಬಾಕಿ ಇದೆ. ಮೈಸೂರಿನ ಪ್ರಸಿದ್ಧ ಯಾತ್ರಾ ಸ್ಥಳವಾದ ಚಾಮುಂಡಿಬೆಟ್ಟದ ನಂದಿ ಮಾರ್ಗದ ರಸ್ತೆ ಕುಸಿದು 4 ತಿಂಗಳಾದರೂ ದುರಸ್ಥಿ ಮಾಡಿಲ್ಲ. ಅಧಿಕಾರಿಗಳು ಇನ್ನೂ ಟೆಂಡರ್ ಕರೆದಿಲ್ಲ. ಅಲ್ಲದೆ ಉದ್ದಿಮೆ ಪರವಾನಗಿ ನವೀಕರಣವನ್ನು 5 ವರ್ಷಗಳಿಗೊಮ್ಮೆ ಮಾಡಬೇಕು. ಪ್ರತಿ ವರ್ಷ ನವೀಕರಣವೆಂದು ಅಧಿಕಾರಿಗಳು ನೀಡುತ್ತಿರುವ ಹಿಂಸೆಯಿಂದ ತಪ್ಪಿಸಬೇಕು ಎಂಬುದಕ್ಕೆ ಪ್ರತಿಕ್ರಿಯಿಸಿದ ಜಿಟಿಡಿ, ಸ್ಥಳದಲ್ಲಿ ಲೋಕೋಪಯೋಗಿ ಅಧಿಕಾರಿಗಳಿಗೆ ಕರೆ ಮಾಡಿ ಕೂಡಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಚಾಮುಂಡಿಬೆಟ್ಟದ ರಸ್ತೆ ಸರಿಪಡಿಸುವಂತೆ ತಾಕೀತು ಮಾಡಿದರು.

ಎಪಿಎಂಸಿಯಲ್ಲಿ ಮೂಲಭೂತ ಸೌಕರ್ಯಗಳಿಲ್ಲ, ನಿತ್ಯ ಕಳ್ಳತನ: ಬಂಡಿಪಾಳ್ಯದ ಎಪಿಎಂಸಿ ಮಾರುಕಟ್ಟೆ ಆರಂಭವಾಗಿ 26 ವರ್ಷಗಳಾಗಿದ್ದರೂ ಮೂಲಸೌಕರ್ಯಗಳನ್ನು ಒದಗಿಸಿಲ್ಲ. ನಿತ್ಯ ಕಳ್ಳತನವಾಗುತ್ತಿದೆ. ಪೊಲೀಸರಿಗೆ ಸಾಕಷ್ಟು ಬಾರೀ ತಿಳಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಮೂಲ ಸೌಕರ್ಯದ ಜೊತೆಗೆ ಕಳ್ಳತನ ತಡೆಯಲು ಕ್ರಮವಹಿಸಬೇಕು ಎಂದು ಎಪಿಎಂಸಿಯ ದಿನೇಶ್ ಮಾಡಿದ ಮನವಿಗೆ ಸ್ಪಂದಿಸಿದ ಜಿಟಿಡಿ, ಎಂಪಿಎಂಸಿ ಮಾರುಕಟ್ಟೆಯಲ್ಲಿ ಕಳ್ಳತನ ಕುರಿತು ಈಗಾಗಲೇ ಎಸ್‌ಪಿ ಅವರೊಂದಿಗೆ ಮಾತನಾಡಿದ್ದೇನೆ. ಮುಂದಿನ ತಿಂಗಳು ಎಪಿಎಂಸಿಯಲ್ಲಿಯೇ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸಿಸಿಟಿವಿ ಅಳವಡಿಸುವುದು ಹಾಗೂ ಸೆಕ್ಯೂರಿಟಿ ಒದಗಿಸುವ ಕುರಿತು ಅಂತಿಮ ನಿರ್ಧಾರಕ್ಕೆ ಬರಲಾಗುವುದು. ಅಲ್ಲದೆ ಶೌಚಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರ ಸೇರಿದಂತೆ ಇನ್ನಿತರೆ ಮೂಲ ಭೂತ ಸೌಕರ್ಯಗಳನ್ನು ಒದಗಿಸಲು ಪ್ರಯತ್ನಿಸಲಾಗುವುದು ಎಂದರು.

ಸಣ್ಣ ಕೈಗಾರಿಕೆಗಳಿಗೆ ದುಪ್ಪಟ್ಟು ತೆರಿಗೆ: ಹೆಬ್ಬಾಳ ಕೈಗಾರಿಕಾ ಪ್ರದೇಶದ ಕೈಗಾರಿಕೋದ್ಯಮಿಗಳ ಸಂಘದ ಅಧ್ಯಕ್ಷ ಜಯಂತ್ ಮಾತನಾಡಿ, ಸಣ್ಣ ಕೈಗಾರಿಕೆಗಳಿಗೆ ದುಪ್ಪಟ್ಟು ತೆರಿಗೆ ವಿಧಿಸಲಾಗುತ್ತಿದೆ. ಗ್ರಾಪಂ ವ್ಯಾಪ್ತಿಯಲ್ಲಿದ್ದಾಗ 5 ಸಾವಿರ ಇದ್ದ ತೆರಿಗೆಯನ್ನು ಈಗ ನಗರ ಸಭೆ ಎಂದು ಹೇಳಿ 42 ಸಾವಿರಕ್ಕೆ ಏರಿಕೆ ಮಾಡಲಾಗಿದೆ. ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಖಂಡಿತವಾಗಿಯೂ ನಮ್ಮ ಕೈಯ್ಯಲ್ಲಿ ತೆರಿಗೆ ಕಟ್ಟಲು ಸಾಧ್ಯವಿಲ್ಲ. ಈ ಕುರಿತು ಸರ್ಕಾರದೊಂದಿಗೆ ಚರ್ಚಿಸುವಂತೆ ಜಿಟಿಡಿ ಅವರಲ್ಲಿ ಮನವಿ ಮಾಡಿದರು.

ಮನವಿಗೆ ಪ್ರತಿಕ್ರಿಯಿಸಿದ ಜಿ.ಟಿ.ದೇವೇಗೌಡರು, ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಹಾಗೂ ಮಂತ್ರಿಗಳೊಂದಿಗೆ ಚರ್ಚಿಸಿ ಸಮಸ್ಯೆ ಪರಿಹರಿಸಲಾಗುವುದು. 5 ವರ್ಷಗಳಿಗೊಮ್ಮೆ ಉದ್ದಿಮೆ ಪರವಾನಗಿ ನವೀಕರಣ ಮಾಡುವಂತೆ ಕೆಲ ವರ್ಷಗಳ ಹಿಂದೆಯೇ ಸರ್ಕಾರ ಆದೇಶ ನೀಡಿದ್ದರೂ ಮೈಸೂರಿನಲ್ಲಿ ಇನ್ನೂ ಅದರ ಅನುಸರಣೆಯಾಗದಿರುವ ಕುರಿತು ಮಾಹಿತಿ ಪಡೆದು ಸಮಸ್ಯೆ ಬಗೆಹರಿಸಲಾಗುವುದು ಎಂದು ತಿಳಿಸಿದರು.

ಹಲವು ಅಭಿವೃದ್ಧಿ ಕೆಲಸಗಳಾಗಬೇಕಿದೆ: ಇದಕ್ಕೂ ಮುನ್ನ ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ ಸುಧಾಕರ್ ಎಸ್. ಶೆಟ್ಟಿ ಮಾತನಾಡಿ, ಮೈಸೂರು ನಗರದಲ್ಲಿ ಸುಮಾರು 22 ಸಾವಿರ ಉದ್ಯಮಿಗಳಿದ್ದು, ಕೊರೊನಾ ಸಂದರ್ಭದಲ್ಲಿ ನಷ್ಟದಿಂದ ನರಕ ಅನುಭವಿಸಿದ್ದಾರೆ. ಹಣ ಎಣಿಸುವ ಉದ್ಯಮಿಗಳು ಕಾರ್ಮಿಕರಿಗೆ ಸಂಬಳ ಸೇರಿದಂತೆ ಹಲವಾರು ಬಿಲ್‌ಗಳನ್ನು ಪಾವತಿ ಮಾಡಿ ಕಡೆಗೆ ಅವರೂ ಕೂಡ ಕಾರ್ಮಿಕರೇ ಆಗುತ್ತಿದ್ದಾರೆ. ಮೈಸೂರು ನಗರದ ಅಭಿವೃದ್ಧಿಗಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಮಾನ ನಿಲ್ದಾಣ ಅಭಿವೃದ್ಧಿ, ಕೈಗಾರಿಕಾ ಪ್ರದೇಶದಲ್ಲಿ ಟೌನ್‌ಶಿಪ್, ನಗರದ ನಾಲ್ಕು ಭಾಗಗಳಲ್ಲಿ ಫ್ಲೈ ಓವರ್, ಮಲ್ಟಿ ಲೆವೆಲ್ ಪಾರ್ಕಿಂಗ್ ಸೇರಿದಂತೆ ಹಲವಾರು ಅಭಿವೃದ್ಧಿ ಕೆಲಸಗಳ ಆಗಬೇಕಾಗಿದೆ ಎಂದರು.

ಈ ವೇಳೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಪದಾಧಿಕಾರಿಗಳಾದ ಕೆ.ಬಿ.ಲಿಂಗರಾಜು, ಶಿವಾಜಿ, ಆರ್.ಆನಂದ್, ವಿನೋದ್ ಜೈನ್, ಅಶೋಕ್ ಮತ್ತಿತರರು ಉಪಸ್ಥಿತರಿದ್ದರು.

ಪ್ರಧಾನಿಗಳ ಗಮನಕ್ಕೆ ತಂದಿದ್ದೇನೆ...

ಮೈಸೂರಿನ ಅಭಿವೃದ್ಧಿ ಸಂಬಂಧ ಆಗಬೇಕಾಗಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಧಾನಿಗಳ ಗಮನಕ್ಕೆ ತರುವ ಪ್ರಯತ್ನ ಮಾಡಿದ್ದೇನೆ. ಬೆಂಗಳೂರಿನಂತೆ ಮೈಸೂರಿನಲ್ಲಿಯೂ ಟ್ರಾಫಿಕ್ ಸಮಸ್ಯೆ ಉಂಟಾಗಬಾರದೆಂದು ಫ್ಲೈ ಓವರ್ ನಿರ್ಮಾಣ, ಮೆಟ್ರೋ, ವಿಮಾನ ನಿಲ್ದಾಣ ಅಭಿವೃದ್ಧಿಯಾಗಬೇಕು ಎಂಬುದನ್ನು ಪ್ರಧಾನಿಗಳ ಗಮನಕ್ಕೆ ತಂದಿದ್ದೇನೆ. ಅವರಿಗೆ ಮನದಟ್ಟಾಗಲೀ ಎಂದೇ ಮನವಿ ಕೊಟ್ಟಿದ್ದೇನೆ. ಅವರ ಕಚೇರಿಗೆ ಹೋದ ಮೇಲೆ ರಾಜ್ಯ ಸರ್ಕಾರಕ್ಕೆ ಯಾವ ರೀತಿ ನಿರ್ದೇಶನ ಬರುತ್ತೋ ಗೊತ್ತಿಲ್ಲ. ಕಡೆಯ ಪಕ್ಷ ಈ ವರ್ಷ ಆಗದಿದ್ದರೂ ಮುಂದಿನ ವರ್ಷವಾದರೂ ಅಭಿವೃದ್ಧಿಯಾಗಲಿ ಎಂಬುದೇ ಉದ್ದೇಶ.

– ಜಿ.ಟಿ.ದೇವೇಗೌಡ, ಶಾಸಕ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ

ಮೃತರ ಹೆಸರಲ್ಲಿರುವ ಭೂ ದಾಖಲೆ ಹಾಲಿ ವಾರಸುದಾರರಿಗೆ 24 ಗಂಟೆಯಲ್ಲಿ ವರ್ಗಾವಣೆ

- ಕಂದಾಯ ಸಚಿವ ಆರ್.ಅಶೋಕ್ ಮಹತ್ವದ ನಿರ್ಧಾರ
- ಸೂಕ್ತ ಮಾಹಿತಿಯೊಂದಿಗೆ ಅರ್ಜಿ ಸಲ್ಲಿಸಿದರೆ ತ್ವರಿತ ಕ್ರಮ
- ಜು.16ರಿಂದ ರಾಜ್ಯಾದ್ಯಂತ ಪೌತಿ ಖಾತೆ ವರ್ಗಾವಣೆ ಅಭಿಯಾನ

ಬೆಂಗಳೂರು, ಜೂ.22(ಕೆಎಂಶಿ) – ಮೃತರ ಹೆಸರಿನಲ್ಲಿರುವ ಭೂದಾಖಲೆಗಳನ್ನು ಹಾಲಿ ವಾರಸುದಾರರು ಸೂಕ್ತ ಮಾಹಿತಿಯೊಂದಿಗೆ ಅರ್ಜಿ ಸಲ್ಲಿಸಿದಲ್ಲಿ ಅವರಿಗೆ 24 ಗಂಟೆಯಲ್ಲಿ ಖಾತೆ ಮಾಡಿ ಕೊಡುವ ಮಹತ್ವದ ನಿರ್ಧಾರವನ್ನು ರಾಜ್ಯ ಸರ್ಕಾರ ಕೈಗೊಂಡಿದೆ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಕಂದಾಯ ಸಚಿವ ಆರ್.ಅಶೋಕ್ ತಲತಲಾಂತರಗಳಿಂದ ಆಸ್ತಿ ವಿಭಜನೆಯಾಗದೇ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಸೌಲಭ್ಯಗಳು, ಬ್ಯಾಂಕ್‌ಗಳಲ್ಲಿ ಸಾಲ ಪಡೆಯಲು ರೈತರಿಗೆ ಕ್ಲಿಷ್ಟಕರವಾಗಿದೆ.

ಹಾಲಿ ವಾರಸುದಾರರಿಗೆ ಅರ್ಜಿ ಸಲ್ಲಿಸಿದ ತಕ್ಷಣವೇ ದಾಖಲೆ ನೀಡಲು ಪೌತಿಖಾತೆಗೆ ತಿದ್ದುಪಡಿ ತರಲಾಗುತ್ತಿದೆ ಎಂದು ಹೇಳಿದರು. ಇಡೀ ರಾಜ್ಯಾದ್ಯಂತ ಜುಲೈ 16 ರಿಂದ ಪೌತಿ ಖಾತೆ ವರ್ಗಾವಣೆಗೆ ಚಾಲನೆ ನೀಡುವುದರಿಂದ ಲಕ್ಷಾಂತರ ರೈತರಿಗೆ ಇದರ ಅನುಕೂಲವಾಗಲಿದೆ.



ಖಾತೆ ಪಡೆಯಲು ಅರ್ಹರಿರುವವರು ಗ್ರಾಮ ಸಭೆಗಳಲ್ಲೇ ಅರ್ಜಿ ಸಲ್ಲಿಸಿ, ದಾಖಲೆಗಳನ್ನು ಒದಗಿಸಿ, ಖಾತೆಯನ್ನು ತಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳಬಹುದು. ಪೌತಿಖಾತೆ ವರ್ಗಾವಣೆ ಮಾಡುವ ಅಧಿಕಾರವನ್ನು ಇನ್ನು ಮುಂದೆ ಅಸಿಸ್ಟೆಂಟ್ ಕಮಿಷನರ್ ಅವರಿಗೆ ನೀಡಲಾಗುವುದು. ಮಾಸಿಕ ನಡೆಯುವ ಗ್ರಾಮ ವಾಸ್ತವ್ಯ ಸಭೆಗಳಲ್ಲೇ ಜಿಲ್ಲಾಧಿಕಾರಿಗಳು ಖಾತೆ ವಿತರಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳುವಂತೆಯು ಸೂಚಿಸಲಾಗಿದೆ ಎಂದರು.

ರಾಜ್ಯದಲ್ಲಿ ಲಕ್ಷಾಂತರ ಪೌತಿ ಖಾತೆಗಳಿದ್ದು,ಇವು ಕಾಲಾನುಕಾಲಕ್ಕೆ ವಾರಸುದಾರರಿಗೆ ವರ್ಗಾವಣೆಯಾಗದೆ ತೊಂದರೆಯಾಗುತ್ತಿದೆ ಎಂದರು.

ಗ್ರಾಮ ವಾಸ್ತವ್ಯಕ್ಕೆ ಮುಂಚೆ ಗ್ರಾಮವನ್ನು ಘಟಕವಾಗಿ ಪರಿಗಣಿಸಲಾಗುತ್ತಿತ್ತು.ಆನಂತರ ಏಳೆಂಟು ಗ್ರಾಮಗಳನ್ನು ಹೊಂದಿರುವ ಗ್ರಾಮಪಂಚಾಯ್ತಿಗಳನ್ನು ಘಟಕವಾಗಿ ಪರಿಗಣಿಸಲಾಯಿತು.ಈಗ ತಾಲೂಕನ್ನೇ ಒಂದು ಘಟಕವಾಗಿ ಪರಿಗಣಿಸಲಾಗಿದ್ದು ಪೌತಿ ಖಾತೆ ನೀಡುವ ಕೆಲಸದಿಂದ ರೈತರಿಗೆ ದೊಡ್ಡ ಮಟ್ಟದ ಅನುಕೂಲವಾಗಲಿದೆ ಎಂದರು. ಗ್ರಾಮಸಭೆಯಲ್ಲಿ ಇಡೀ ಊರಿನವರೇ ಭಾಗವಹಿಸಿರುತ್ತಾರೆ. ಈ ಸಮಯದಲ್ಲಿ ಮೃತರ ಹೆಸರಿನಲ್ಲಿರುವ ಪೌತಿ ಖಾತೆಗಳನ್ನು ವರ್ಗಾಯಿಸುವಾಗ ಅವರ ಮಕ್ಕಳು, ಸೊಸೆಯರು,ಮೊಮ್ಮಕ್ಕಳ ವಿವರವನ್ನು ಸ್ಥಳೀಯರಿಂದ ಖಚಿತಪಡಿಸಿಕೊಳ್ಳಲು ಅವಕಾಶವಿದ್ದು,ಇದರಿಂದ ಹಾಲಿ ವಾರಸುದಾರರಿಗೆ ಖಾತೆ ವರ್ಗಾಯಿಸುವ ಕೆಲಸ ಸುಗಮವಾಗಲಿದೆ ಎಂದು ವಿವರಿಸಿದರು.

ಮೃತರ ಹೆಸರಿನಲ್ಲಿ ಖಾತೆಗಳಿದ್ದಾಗ ಅದನ್ನು ಹಾಲಿ ವಾರಸುದಾರರಿಗೆ ವರ್ಗಾಯಿಸುವ ಕೆಲಸ ವಿಪರೀತ ವಿಳಂಬವಾಗುತ್ತಿದ್ದು,ಮೃತರ ಕುಟುಂಬದವರು ಯಾರು ಎಂದು ಖಚಿತಪಡಿಸಿಕೊಳ್ಳಲು ಮಹಜರು ನಡೆಸುವುದೂ ಸೇರಿದಂತೆ ಹಲವು ಶಿಷ್ಟಾಚಾರಗಳನ್ನು ಪಾಲಿಸಲಾಗುತ್ತಿದ್ದು ಇದರಿಂದಾಗಿ ಪೌತಿ ಖಾತೆಗಳನ್ನು ಇತ್ಯರ್ಥಪಡಿಸಲು ವರ್ಷಗಟ್ಟಲೆ ಸಮಯ ತಗಲುತ್ತಿದೆ ಎಂದರು.

ಪೌತಿ ಖಾತೆಗಳನ್ನು ಇತ್ಯರ್ಥ ಮಾಡುವಾಗ ವಂಶವೃಕ್ಷವನ್ನು ಸರಿಯಾಗಿ ನೀಡಲಾಗುತ್ತಿಲ್ಲ.ಮೃತರ ಮಕ್ಕಳು, ಮೊಮ್ಮಕ್ಕಳು, ಇನ್ನಿತರರು ಬೇರೆ ಸ್ಥಳದಲ್ಲಿದ್ದರೆ ಅವರ ಹೆಸರನ್ನೇ ಕೈ ಬಿಡುವ ಕೆಲಸವಾಗುತ್ತಿದೆ ಎಂದು ಹೇಳಿದರು.

ಹಲವು ಪ್ರಕರಣಗಳಲ್ಲಿ ಹೆಣ್ಣು ಮಕ್ಕಳ ಹೆಸರನ್ನೇ ಕೈ ಬಿಡುವ ಕೆಲಸವಾಗುತ್ತಿದ್ದು ಇದರಿಂದ ರಾಜ್ಯದ ಎಲ್ಲೆಡೆ ಅಪಸ್ವರ ಕೇಳುತ್ತಲೇ ಇದೆ.ಹೀಗಾಗಿ ಪೌತಿ ಖಾತೆ ವರ್ಗಾಯಿಸುವ ಕೆಲಸ ಸ್ಥಳದಲ್ಲೇ ಇತ್ಯರ್ಥವಾದರೆ ಈ ಅಪಸ್ವರ ತಪ್ಪಿದಂತಾಗುತ್ತದೆ ಎಂದರು.

ಇಡಿ ವಿಚಾರಣೆಗೆ ಮತ್ತೆ ಸಮಯಾವಕಾಶ ಕೇಳಿದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಸಂಬಂಧಿಸಿದ ಆಪಾದಿತ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ವಿಚಾರಣೆಗಾಗಿ ಜಾರಿ ನಿರ್ದೇಶನಾಲಯದ ಮುಂದೆ ಹಾಜರಾಗಲು ಕಾಂಗ್ರೆಸ್ ಮುಖ್ಯಸ್ಥೆ ಸೋನಿಯಾ ಗಾಂಧಿ ಅವರು ಹೆಚ್ಚಿನ ಸಮಯಾವಕಾಶ ಕೋರಿದ್ದಾರೆ.




ಜೂನ್ 23 ರಂದು ವಿಚಾರಣೆಗೆ ಹಾಜರಾಗುವಂತೆ ಇಡಿ ನೋಟಿಸ್ ನೀಡಿತ್ತು. ಇದೀಗ ಇನ್ನೂ ಹೆಚ್ಚಿನ ಸಮಯಾವಕಾಶಕ್ಕಾಗಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮನವಿ ಮಾಡಿದ್ದಾರೆನ್ನಲಾಗಿದೆ. ಸೋನಿಯಾ ಗಾಂಧಿಯವರಿಗೆ ಕೋವಿಡ್ ದೃಢಪಟ್ಟ ನಂತರ ಸಂಬಂಧಿತ ಆರೋಗ್ಯ ಸಮಸ್ಯೆಗಳಿಗಾಗಿ ಆಸ್ಪತ್ರೆಗೆ ದಾಖಲಾಗಿದ್ದರು. ಒಂದು ವಾರಕ್ಕೂ ಹೆಚ್ಚು ಕಾಲ ಆಸ್ಪತ್ರೆಯಲ್ಲಿದ್ದ ಅವರನ್ನು ಎರಡು ದಿನಗಳ ಹಿಂದೆ ಡಿಸ್ಚಾರ್ಜ್ ಮಾಡಲಾಗಿದೆ.

ಜೂನ್ 2ರಂದು ಸೋನಿಯಾ ಗಾಂಧಿಯವರಿಗೆ ಕೊರೊನಾ ಪಾಸಿಟಿವ್ ದೃಢಪಟ್ಟಿತ್ತು. ಜೂನ್ 8 ರಂದು ಇಡಿ ಮುಂದೆ ಹಾಜರಾಗಬೇಕಿದ್ದ ಅವರು ವಿಚಾರಣೆಗೆ ಹಾಜರಾಗಲು ಜಾರಿ ನಿರ್ದೇಶನಾಲಯದಿಂದ (ED) ಹೆಚ್ಚಿನ ಸಮಯವನ್ನು ಕೋರಿದ್ದರು. ಬಳಿಕ ಜೂನ್ 12 ರಂದು ಉಸಿರಾಟದ ತೊಂದರೆಯಿಂದ ಅವರನ್ನು ಸರ್ ಗಂಗಾರಾಮ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶಿಲೀಂದ್ರ ಸೋಂಕಿಗೆ ಚಿಕಿತ್ಸೆ ಪಡೆದ ನಂತರ 2 ದಿನದ ಹಿಂದೆ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ.

2024ರ ಲೋಕಸಭೆ ಚುನಾವಣೆ ನಂತರ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಲಿದೆ

ಬೆಳಗಾವಿ: 2024ರ ಲೋಕಸಭೆ ಚುನಾವಣೆ ಬಳಿಕ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಲಿದೆ ಎಂದು ಆಹಾರ ಮತ್ತು ಅರಣ್ಯ ಸಚಿವ ಉಮೇಶ್ ಕತ್ತಿ ಹೇಳಿಕೆ ನೀಡಿದ್ದಾರೆ.



ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗುವುದು ನಿಶ್ಚಿತ. 2024ರ ಲೋಕಸಭಾ ಚುನಾವಣೆ ನಂತರ ಕರ್ನಾಟಕ 2 ರಾಜ್ಯವಾಗಲಿದೆ. ದೇಶದಲ್ಲಿ 50 ಹೊಸ ರಾಜ್ಯಗಳಾಗಲಿದ್ದು, ಈ ಕುರಿತು ಚರ್ಚೆ ಈಗಾಗಲೇ ನಡೆಯುತ್ತಿದೆ ಎಂದಿದ್ದಾರೆ.

ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗುವುದು ಖಚಿತ. ನಾವು ನೀವು ಸೇರಿ ಮಾಡೋಣ. ಮಹಾರಾಷ್ಟ್ರದಲ್ಲಿ 3, ಉತ್ತರ ಪ್ರದೇಶದಲ್ಲಿ 4, ಕರ್ನಾಟಕದಲ್ಲಿ 2 ರಾಜ್ಯಗಳಾಗಲಿವೆ. ಉತ್ತರ ಕರ್ನಾಟಕ ರಾಜ್ಯವಾಗಲೇಬೇಕು ಎಂದು ಹೇಳಿದರು.

ಬೆಂಗಳೂರಲ್ಲಿ ಕುಡಿಯಲು ನೀರಿಲ್ಲ. ಬೆಂಗಳೂರು ಟ್ರಾಫಿಕ್ ಜಾಮ್ ಹೇಳತೀರದು. 10 ಕಿಮೀ ಹೋಗಲು 1 ತಾಸು ಬೇಕು. ನನ್ನ ಮನೆಯಿಂದ ವಿಧಾನಸೌಧಕ್ಕೆ ಹೋಗಲು ಒಂದೂವರೆ ಗಂಟೆ ಬೇಕು. ನಡೆದುಕೊಂಡು ಹೋದರೆ ಅದಕ್ಕಿಂತ ಬೇಗ ಹೋಗಬಹುದು. ಸದ್ಯ ಬೆಳಗಾವಿಯಲ್ಲಿ ವಿಧಾನಸೌಧ ಆಗಿದೆ. ಹುಬ್ಬಳ್ಳಿ–ಧಾರವಾಡದಲ್ಲಿ ಹೈಕೋರ್ಟ್ ಆಗಿದೆ. ಕಿತ್ತೂರಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸುವ ಚರ್ಚೆ ನಡೆದಿದೆ. ಹಾಗಾಗಿ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಲು ಎಲ್ಲ ಸೌಲಭ್ಯಗಳಿವೆ ಎಂದು ತಿಳಿಸಿದ್ದಾರೆ.

ಅಮೆರಿಕಾದಲ್ಲಿ ತೆಲಂಗಾಣದ ಸಾಫ್ಟ್‌ವೇರ್ ಉದ್ಯೋಗಿಗೆ ಗುಂಡಿಕ್ಕಿ ಹತ್ಯೆ



ಹೈದರಾಬಾದ್: ತೆಲಂಗಾಣದ ನಲ್ಗೊಂಡ ಜಿಲ್ಲೆಯ ಸಾಫ್ಟ್‌ವೇರ್ ಉದ್ಯೋಗಿ ಸಾಯಿ ಚರಣ್ ನಕ್ಕ (25) ಅವರನ್ನು ಭಾನುವಾರ ಸಂಜೆ ಅಮೆರಿಕಾದ ಮೇರಿಲ್ಯಾಂಡ್ ರಾಜ್ಯದಲ್ಲಿ ಗುಂಡಿಕ್ಕಿ ಹತ್ಯೆ ಮಾಡಲಾಗಿದೆ. ಅಮೆರಿಕದ ಮೇರಿಲ್ಯಾಂಡ್‌ನ ಕ್ಯಾಟನ್ಸ್‌ವಿಲ್ಲೆ ಬಳಿ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಸಾಯಿ ಚರಣ್ ಅವರನ್ನು ಕಪ್ಪು ವ್ಯಕ್ತಿಯೊಬ್ಬ ಗುಂಡಿಕ್ಕಿ ಹತ್ಯೆ ಮಾಡಿದ್ದಾನೆ. ತನ್ನ ಸ್ನೇಹಿತನನ್ನು ವಿಮಾನ ನಿಲ್ದಾಣದಲ್ಲಿ ಇಳಿಸಿ ಹಿಂತಿರುಗುತ್ತಿದ್ದ ವೇಳೆ ಘಟನೆ ನಡೆದಿದೆ. ಕೂಡಲೇ ಅವರನ್ನು ಮೇರಿಲ್ಯಾಂಡ್ ವಿಶ್ವವಿದ್ಯಾಲಯದ ಆರ್. ಆಡಮ್ಸ್ ಕೌಲಿ ಶಾಕ್ ಟ್ರಾಮಾ ಸೆಂಟರ್‌ಗೆ ಸ್ಥಳಾಂತರಿಸಲಾಯಿತು. ಆದರೆ ಸ್ವಲ್ಪ ಸಮಯದ ನಂತರ ಸಾವನ್ನಪ್ಪಿದ್ದಾರೆ ಎಂದು ಘೋಷಿಸಲಾಯಿತು. ವೈದ್ಯರು ಅವರ ತಲೆಯ ಮೇಲೆ ಗುಂಡೇಟಿನಿಂದ ಗಾಯವಾಗಿತ್ತು. ನಲ್ಗೊಂಡದ ನಿವೃತ್ತ ಶಿಕ್ಷಕ ನರಸಿಂಹ ಅವರ ಪುತ್ರ ಚರಣ್ ಕಳೆದ 2 ವರ್ಷಗಳಿಂದ ಬಾಲ್ಟಿಮೋರ್ ನಗರದ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು.

ವರಿಷ್ಠರ ಬುಲಾವ್: ಇಂದು ದೆಹಲಿಗೆ ಸಿಎಂ

ಬೆಂಗಳೂರು, ಜೂ.22(ಕೆಎಂಶಿ)– ಪ್ರಧಾನಿ ನರೇಂದ್ರ ಮೋದಿ ಎರಡು ದಿನಗಳ ರಾಜ್ಯ ಪ್ರವಾಸ ಮುಗಿಸಿ, ದೆಹಲಿಗೆ ಹಿಂತಿರುಗಿದ ಬೆನ್ನಲ್ಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ತುರ್ತಾಗಿ ದೆಹಲಿಗೆ ಬರುವಂತೆ ವರಿಷ್ಠರು ಸೂಚಿಸಿದ್ದಾರೆ.



ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರು ನಾಳೆ ದೆಹಲಿಗೆ ತೆರಳುತ್ತಿದ್ದಾರೆ. ವರಿಷ್ಠರ ಸೂಚನೆ ರಾಜ್ಯ ಬಿಜೆಪಿಯಲ್ಲಿ ನಾನಾ ಊಹಾಪೋಹಗಳಿಗೆ ಎಡೆಮಾಡಿದೆ.

ವಿಧಾನಸಭೆಯಿಂದ ರಾಜ್ಯಸಭೆ ಹಾಗೂ ಪರಿಷತ್ ದ್ವೈವಾರ್ಷಿಕ ಚುನಾವಣೆಯ ನಂತರ ಪಕ್ಷ ಮತ್ತು ಆಡಳಿತದಲ್ಲಿ ಕೆಲ ಬದಲಾವಣೆಯಾಗುವ ಮಾತುಗಳು ಕೇಳಿಬಂದಿತ್ತು. ಇದೀಗ ಮುಖ್ಯಮಂತ್ರಿಯವರನ್ನು ಹಠಾತ್ ಆಗಿ ದೆಹಲಿಗೆ ಕರೆಸಿಕೊಳ್ಳುತ್ತಿರುವುದು ಮತ್ತೆ ಚರ್ಚೆಗೆ ಗ್ರಾಸವಾಗಿದೆ.

ದೆಹಲಿಗೆ ಹೋಗುತ್ತಿರುವ ಬಗ್ಗೆ ಮುಖ್ಯಮಂತ್ರಿಯವರ ಕಾರ್ಯಾಲಯ ತನ್ನದೇ ರೀತಿಯಲ್ಲಿ ಸಮರ್ಥನೆ ಮಾಡಿಕೊಳ್ಳುತ್ತಿದೆ. ರಾಷ್ಟ್ರಪತಿ ಚುನಾವಣೆಗೆ ಎಡಿಎ ಅಭ್ಯರ್ಥಿಯಾಗಿ ಕಣಕ್ಕಿಳಿಯುತ್ತಿರುವ ದ್ರೌಪದಿ ಮುರ್ಮು ನಾಮಪತ್ರಕ್ಕೆ ಸೂಚಕರಾಗಿ ಸಹಿ ಹಾಕಲು ಬಿಜೆಪಿ ಆಡಳಿತದಲ್ಲಿರುವ ಎಲ್ಲ ಮುಖ್ಯಮಂತ್ರಿಗಳನ್ನು ಆಹ್ವಾನಿಸಲಾಗಿದೆ ಎನ್ನುತ್ತಾರೆ.

ಅವರ ಕಚೇರಿಯ ಮತ್ತೊಂದು ಮೂಲದ ಪ್ರಕಾರ ಹಾಲಿ ಮಂತ್ರಿ ಮಂಡಲದಲ್ಲಿ ಕೆಲವು ಸಚಿವರ ಖಾತೆಗಳ ಅದಲು–ಬದಲಿಗೆ ಒಪ್ಪಿಗೆ ಪಡೆಯಲು ದೆಹಲಿಗೆ ತೆರಳುತ್ತಿದ್ದಾರೆ ಎಂದು ಹೇಳಲಾಗಿದೆ. ಆದರೆ ಅವರ ವಿರೋಧಿ ವಲಯದಲ್ಲಿ ಮುಂಬರುವ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ನಾಯಕತ್ವದಲ್ಲಿ ಬದಲಾವಣೆ ಸಾಧ್ಯತೆ ಇದೆ ಎನ್ನುತ್ತಾರೆ. ಇದ್ಯಾವುದಕ್ಕೂ ತಲೆಕೆಡಿಸಿಕೊಳ್ಳದ ಮುಖ್ಯಮಂತ್ರಿಯವರು ಇಂದು ತಮ್ಮನ್ನು ಭೇಟಿ ಮಾಡಿದ ಶಾಸಕರು ಹಾಗೂ ಆಯ್ದ ಮಾಧ್ಯಮದವರ ಜೊತೆ ನನ್ನ ನೇತೃತ್ವದಲ್ಲೇ ಮುಂದಿನ ಚುನಾವಣೆ ನಡೆಯಲಿದೆ ಎಂದು ತಿಳಿಸಿದ್ದಾರೆ.

ತ.ನಾಡು ಸಂಸದರಿಂದ ಕೇಂದ್ರ ಜಲಶಕ್ತಿ ಸಚಿವರ ಭೇಟಿ

ನವದೆಹಲಿ, ಜೂ.22–ತಮಿಳುನಾಡು ಸಂಸದರ ನಿಯೋಗ ಇಂದು ದೆಹಲಿಯಲ್ಲಿ ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಪ್ರಸಾದ್ ಶೇಖಾವತ್ ಅವರನ್ನು ಭೇಟಿ ಮಾಡಿ, ಕಾವೇರಿ ನೀರಾವರಿ ನಿರ್ವಹಣಾ ಸಭೆಯನ್ನು ಮೇಕೆದಾಟು ಅಣೆಕಟ್ಟು ವಿಚಾರವನ್ನು ಕೈಗೆತ್ತುಕೊಳ್ಳಬಾರದು ಎಂದು ಮನವಿ ಮಾಡಿತು. ಕಾವೇರಿ ನೀರಾವರಿ ನಿರ್ವಹಣಾ ಸಭೆಯಲ್ಲಿ ಮೇಕೆದಾಟು ವಿಚಾರ ಪ್ರಸ್ತಾಪವಾದರೆ ಅದು ಕರ್ನಾಟಕದ ಪರವಾಗಿ ಇರಬಹುದು ಎಂಬ ಆತಂಕದಿಂದ ತಮಿಳುನಾಡು ಸಂಸದರ ನಿಯೋಗ ಜಲಶಕ್ತಿ ಸಚಿವರಿಗೆ ಈ ಮನವಿ ಸಲ್ಲಿಸಿದೆ.

ಸುಗಮ ಸಂಗೀತ ಕ್ಷೇತ್ರಕ್ಕೆ ಸಿ.ಅಶ್ವತ್, ಕಾಳಿಂಗರಾಯರ ಕೊಡುಗೆ ಅಪಾರ

ನಿವೃತ್ತ ಐಎಎಸ್ ಅಧಿಕಾರಿ ಟಿ.ತಿಮ್ಮೇಗೌಡ ಅಭಿಮತ

ಮೈಸೂರು, ಜೂ.22(ಎಸ್‌ಪಿಎನ್)– ಸುಗಮ ಸಂಗೀತ ಕ್ಷೇತ್ರಕ್ಕೆ ಹಿರಿಯ ಗಾಯಕ ಸಿ.ಅಶ್ವತ್, ಕಾಳಿಂಗರಾಯರ ಕೊಡುಗೆ ಅಪಾರ ಎಂದು ಕೃಷಿಕ್ ಸರ್ವೋದಯ ಫೌಂಡೇಶನ್ ಮೈಸೂರು ಘಟಕದ ಅಧ್ಯಕ್ಷ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಟಿ.ತಿಮ್ಮೇಗೌಡ ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರ 2ನೇ ಹಂತದಲ್ಲಿರುವ ಕೃಷಿಕ್ ಸರ್ವೋದಯ ಫೌಂಡೇಶನ್ ಆವರಣದಲ್ಲಿ ಫೌಂಡೇಶನ್ ವತಿಯಿಂದ ಏರ್ಪಡಿಸಿದ್ದ 'ವೈ.ಕೆ.ಮುದ್ದುಕೃಷ್ಣ–75 ಸಂಭ್ರಮಾಚರಣೆ ಮತ್ತು 'ಹಾಡು ಹಿಡಿದ ಜಾಡು' ಆತ್ಮ ಕಥನ ಕೃತಿ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಡಾ.ನಾ.ದಾಮೋದರ ಶೆಟ್ಟಿ ಸಂಪಾದಕತ್ವದಲ್ಲಿ ಶಮ ನಂದಿಬೆಟ್ಟ ನಿರೂಪಣೆಯಲ್ಲಿ ವೈ.ಕೆ.ಮುದ್ದುಕೃಷ್ಣರವರ ಆತ್ಮ ಕಥನದ 'ಹಾಡು ಹಿಡಿದ ಜಾಡು' ಕೃತಿ ಅದ್ಭುತವಾಗಿ ಮೂಡಿಬಂದಿದೆ. ಈ ಕೃತಿಯನ್ನು ಜಾನಪದ ಗಾರುಡಿಗ ಡಾ.ಎಸ್.ಕೆ.ಕರೀಂಖಾನ್, ತಂದೆ ಕೃಷ್ಣೇಗೌಡ, ತಾಯಿ ಕೆಂಚಮ್ಮ, ಅಣ್ಣ ವೈ.ಕೆ.ಪುಟ್ಟಸೋಮೇಗೌಡ, ಅತ್ತಿಗೆ ಲಲಿತಾ ಪಿ. ಗೌಡ ಹಾಗೂ ಮಕ್ಕಳಾದ ಗ್ರೀಷ್ಮಗೌಡ, ವರ್ಷಗೌಡ ಅವರಿಗೆ ಅರ್ಪಿಸಿದ್ದಾರೆ ಎಂದರು.



ಮೈಸೂರು ವಿಜಯನಗರ 2ನೇ ಹಂತದಲ್ಲಿರುವ ಕೃಷಿಕ್ ಸರ್ವೋದಯ ಫೌಂಡೇಶನ್ ಆವರಣದಲ್ಲಿ ಫೌಂಡೇಶನ್ ವತಿಯಿಂದ ಏರ್ಪಡಿಸಿದ್ದ 'ವೈ.ಕೆ.ಮುದ್ದುಕೃಷ್ಣ–75 ಸಂಭ್ರಮಾಚರಣೆ ಮತ್ತು 'ಹಾಡು ಹಿಡಿದ ಜಾಡು' ಆತ್ಮ ಕಥನ ಕೃತಿ ಬಿಡುಗಡೆ ಸಮಾರಂಭದಲ್ಲಿ ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಅವರು 'ಹಾಡು ಹಿಡಿದ ಜಾಡು' ಕೃತಿಯನ್ನು ಬಿಡುಗಡೆಗೊಳಿಸಿದರು.

2003ರಲ್ಲಿ ಡಾ.ಜಿಎಸ್‌ಎಸ್ ಅವರ ಅಧ್ಯಕ್ಷತೆಯಲ್ಲಿ ಜರುಗಿದ 'ಕರ್ನಾಟಕ ಸುಗಮ ಸಂಗೀತ ಪರಿಷತ್ತು' ಸಮ್ಮೇಳನದ ಮೂಲಕ ಯುವ ಕಲಾವಿದರನ್ನು ಬೆಳೆಸಿದ ಕೀರ್ತಿ ಮುದ್ದುಕೃಷ್ಣ ಅವರಿಗೆ ಸಲ್ಲುತ್ತದೆ. 1979ರಲ್ಲಿ ರಂಗಭೂಮಿ ಏಳಿಗೆಗಾಗಿ 'ಯುವರಂಗ ವೇದಿಕೆ' ಸ್ಥಾಪಿಸಿದ್ದಾರಲ್ಲದೆ, ಸ್ವತಃ ತಾವೇ 70ಕ್ಕೂ ಹೆಚ್ಚು ನಾಟಕಗಳಲ್ಲಿ ಹಾಗೂ ಕಿರುತೆರೆಯಲ್ಲೂ ಅಭಿನಯಿಸಿ ತಮ್ಮ ಅಭಿನಯ ಕ್ಷೇತ್ರದಲ್ಲೂ ಹೆಸರು ಮಾಡಿದ್ದಾರೆ. 1993ರಲ್ಲಿ 'ಧ್ವನಿ' ಸುಗಮ ಸಂಗೀತ ಸಂಸ್ಥೆ ಸ್ಥಾಪಿಸಿ, ಈ ವೇದಿಕೆ ಮೂಲಕ ಹಿರಿಯ ಕಲಾವಿದರ ತಂಡ ಕಟ್ಟಿಕೊಂಡು ದೇಶ–ವಿದೇಶಗಳಲ್ಲೂ ಸುಗಮ ಸಂಗೀತ ಗಾಯನ ನೀಡಿದ ಕೀರ್ತಿ ಮುದ್ದುಕೃಷ್ಣ ಅವರಿಗೆ ಸಲ್ಲುತ್ತದೆ ಎಂದರು.

ವೈ.ಕೆ.ಮುದ್ದುಕೃಷ್ಣ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾಗಿದ್ದಾಗ 'ಕನ್ನಡ ಭವನ' ನಿರ್ಮಾಣಕ್ಕೆ ಒತ್ತು, ವಿಶ್ವವಿಖ್ಯಾತ 'ಹಂಪಿ ಉತ್ಸವ', 'ಕದಂಬೋತ್ಸವ', ರಾಜ್ಯಾದ್ಯಂತ ಜಿಲ್ಲಾ ಉತ್ಸವಗಳ ರೂವಾರಿಗಳಾಗಿದ್ದಾರೆ. 1996ರಲ್ಲಿ ಬೆಂಗಳೂರಿನಲ್ಲಿ ಜರುಗಿದ 4ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಸುಮಾರು 8 ಸಾವಿರ ವಿವಿಧ ಪ್ರಕಾರದ ಕಲಾವಿದರನ್ನು ಸಂಘಟಿಸಿ, ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ, 1999ರಲ್ಲಿ 'ಧ್ವನಿ' ಸಂಸ್ಥೆ ಮೂಲಕ ಹಿರಿಯ ಗಾಯಕ ಸಿ.ಅಶ್ವತ್ ಜೊತೆಗೂಡಿ ರಾಷ್ಟ್ರಕವಿ ಕುವೆಂಪುರವರ 'ಮನುಜ ಮತ– ವಿಶ್ವ ಪಥ' ಕಾರ್ಯಕ್ರಮ ರುವಾರಿಯಾಗಿದ್ದಾರೆ. ಅಲ್ಲದೆ, ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಉಪ ಆಯುಕ್ತರಾಗಿದ್ದಾಗ 161 ಉದ್ಯಾನಗಳನ್ನು ಅಭಿವೃದ್ಧಿ ಪಡಿಸಿದ್ದ ನೆನಪಿಗಾಗಿ 'ಹಸಿರು ಹೊದಿಕೆಯ ಹರಿಕಾರ' ಎಂಬ ಬಿರುದಿಗೆ ಪಾತ್ರರಾಗಿದ್ದಾರೆ ಎಂದರು.

ಈ ವೇಳೆ ಜಾನಪದ ವಿದ್ವಾಂಸ ಡಾ.ಪಿ.ಕೆ. ರಾಜಶೇಖರ್ ಅವರು 'ಹಾಡು ಹಿಡಿದ ಜಾಡು' ಕೃತಿಯನ್ನು ಬಿಡುಗಡೆಗೊಳಿಸಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಕೃತಿ ಕುರಿತು ಡಾ.ನಾ.ದಾಮೋದರ್ ಶೆಟ್ಟಿ, ಕೃಷಿಕ್ ಸರ್ವೋದಯ ಫೌಂಡೇಶನ್ ಟ್ರಸ್ಟಿ ಕೆ.ಎಂ.ಚಂದ್ರೇಗೌಡ, ಉಪಾಧ್ಯಕ್ಷ ಎನ್.ನಂಜೇಗೌಡ, ಬಿ.ಕೆ.ಶಿವಣ್ಣ, ಎಸ್.ವಿ.ಗೌಡಪ್ಪ, ಜಂಟಿ ಕಾರ್ಯದರ್ಶಿ ವೈ.ಕೆ.ಕೆಂಚೇಗೌಡ ಇತರರು ಉಪಸ್ಥಿತರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಈ ಬಾರಿ ಮಾಮೂಲಿಯಂತೆ

ಚಾ.ಬೆಟ್ಟದಲ್ಲಿ ಆಷಾಢ ಶುಕ್ರವಾರದ ಪೂಜೆ

- ಎರಡು ಡೋಸ್ ಲಸಿಕೆ ಪಡೆಯದವರು 72 ಗಂಟೆ ಹಿಂದಿನ ಕೊರೊನಾ ನೆಗೆಟಿವ್ ರಿಪೋರ್ಟ್ ತೋರಿಸುವುದು ಕಡ್ಡಾಯ
- ಜು.1, 8, 15, 22ರಂದು ಆಷಾಢ ಶುಕ್ರವಾರ; ದೇವಿಗೆ ವಿಶೇಷ ಪೂಜೆ
- ಬೆಟ್ಟಕ್ಕೆ ಬಸ್ ವ್ಯವಸ್ಥೆ; ಖಾಸಗಿ ವಾಹನಗಳಿಗೆ ನಿರ್ಬಂಧ ವಿಧಿಸಲು ತೀರ್ಮಾನ

ಮೈಸೂರು, ಜೂ. 22(ಆರ್‌ಕೆ)– ಕೊರೊನಾ ಸೋಂಕಿನಿಂದಾಗಿ ಕಳೆದ ಎರಡು ವರ್ಷ ನಿರ್ಬಂಧಿತವಾಗಿ, ಸಾಂಪ್ರದಾಯಿಕವಾಗಷ್ಟೇ ನಡೆದಿದ್ದ ಆಷಾಢ ಶುಕ್ರವಾರ ವಿಶೇಷ ಪೂಜಾ ಕೈಂಕರ್ಯವನ್ನು ಈ ಬಾರಿ ಮಾಮೂಲಿನಂತೆ ನಡೆಸಲು ಜಿಲ್ಲಾಡಳಿತ ನಿರ್ಧರಿಸಿದೆ.

ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಬುಧವಾರ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಈ ಬಾರಿ ಚಾಮುಂಡೇಶ್ವರಿಗೆ ಆಷಾಢ ಮಾಸದ ಶುಕ್ರವಾರಗಳಂದು ಅದ್ಧೂರಿಯಾಗಿ ವಿಶೇಷ ಪೂಜೆ ಸಲ್ಲಿಸಿ, ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಧಾರ್ಮಿಕ ಕೈಂಕರ್ಯದಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಬೇಕೆಂದು ತಿಳಿಸಿದರು.



ಎಲ್ಲಾ ಆಷಾಢ ಶುಕ್ರವಾರಗಳಂದು ಚಾಮುಂಡೇಶ್ವರಿ ದೇವಸ್ಥಾನದಲ್ಲಿ ವಿಶೇಷ ಅಲಂಕಾರ ಮಾಡಿ ಎಂದಿನಂತೆ ಪೂಜಾ ಕೈಂಕರ್ಯ ನಡೆಸಬೇಕು. ಭಕ್ತಾದಿಗಳಿಗೆ ತಾಯಿಯ ದರ್ಶನ ಪಡೆಯಲು ಅವಕಾಶ ಕಲ್ಪಿಸಬೇಕು. ಅದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕಾಗಿದೆ ಎಂದು ಹೇಳಿದರು.

ಈ ಬಗ್ಗೆ ಜೂನ್ 25ರಂದು ಜನಪ್ರತಿನಿಧಿಗಳು, ಅಧಿಕಾರಿಗಳೊಂದಿಗೆ ಮತ್ತೊಮ್ಮೆ ಸಭೆ ನಡೆಸಿ ಅಂತಿಮ ರೂಪು–ರೇಷೆ ನಿರ್ಧರಿಸಿ, ಭಕ್ತಾದಿಗಳಿಗೆ ಮಾಹಿತಿ ನೀಡುತ್ತೇವೆ ಎಂದು ಸಚಿವ ಸೋಮಶೇಖರ್ ಗೋಷ್ಠಿಯಲ್ಲಿ ತಿಳಿಸಿದರು. ಪ್ರತೀ ವರ್ಷದಂತೆ ಈ ಬಾರಿಯೂ ಲಲಿತ ಮಹಲ್ ಹೆಲಿಪ್ಯಾಡ್‌ನಿಂದ ಕೆಎಸ್‌ಆರ್‌ಟಿಸಿ ಸಿಟಿ ಬಸ್‌ಗಳಲ್ಲಿ ಚಾಮುಂಡಿಬೆಟ್ಟಕ್ಕೆ ಭಕ್ತರನ್ನು ಕರೆದೊಯ್ಯಲು ವ್ಯವಸ್ಥೆ ಕಲ್ಪಿಸಲಾಗುತ್ತದೆ. ಶುಕ್ರವಾರಗಳಂದು ಸಾರ್ವಜನಿಕರಿಗೆ ತಮ್ಮ ವಾಹನಗಳಲ್ಲಿ ಬೆಟ್ಟಕ್ಕೆ ಪ್ರವೇಶ ನಿರ್ಬಂಧಿಸಲಾಗುವುದು ಎಂದರು.

ಆದರೆ ಚಾಮುಂಡಿಬೆಟ್ಟಕ್ಕೆ ಬರುವವರು ಎರಡು ಡೋಸ್ ಲಸಿಕೆಯನ್ನು ಪಡೆದಿರಬೇಕು ಅಥವಾ 72 ಗಂಟೆ ಹಿಂದಿನ ಕೊರೊನಾ ನೆಗೆಟಿವ್ ರಿಪೋರ್ಟ್ ತೋರಿಸುವುದನ್ನು ಕಡ್ಡಾಯಗೊಳಿಸಲಾಗುವುದು. ಈ ಕುರಿತಂತೆ ಜೂನ್ 25ರಂದು ಸಭೆ ನಡೆಸಿ ಆಷಾಢ ಶುಕ್ರವಾರ ವೇಳಾಪಟ್ಟಿ, ಬಸ್ಸುಗಳ ಸೌಲಭ್ಯ, ಖಾಸಗಿ ವಾಹನಗಳ ನಿಲುಗಡೆ ಸೇರಿದಂತೆ ಅಗತ್ಯ ಮಾಹಿತಿಗಳನ್ನು ಜನಸಾಮಾನ್ಯರಿಗೆ ನೀಡಲಾಗುತ್ತದೆ ಎಂದು ಸಚಿವರು ನುಡಿದರು.


ಸಂಸದ ಪ್ರತಾಪ್ ಸಿಂಹ, ಶಾಸಕ ಎಸ್.ಎ. ರಾಮದಾಸ್, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಎಡಿಸಿ ಡಾ.ಬಿ.ಎಸ್. ಮಂಜುನಾಥಸ್ವಾಮಿ, ಜಿಪಂ ಸಿಇಓ ಬಿ.ಆರ್. ಪೂರ್ಣಿಮಾ, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಡಿಸಿಪಿಗಳಾದ ಎಂ.ಎಸ್. ಗೀತಾ ಪ್ರಸನ್ನ, ಪ್ರದೀಪ್ ಗುಂಟಿ ಸೇರಿದಂತೆ ಇತರ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು. ಜುಲೈ 1, 8, 15 ಹಾಗೂ 22ರಂದು ಆಷಾಢ ಶುಕ್ರವಾರದ ಪೂಜೆ ನಡೆಯಲಿದ್ದು, ಜುಲೈ 20ರಂದು ಅಧಿದೇವತೆ ತಾಯಿ ಚಾಮುಂಡೇಶ್ವರಿ ದೇವಿಯ ವರ್ಧಂತಿ ಉತ್ಸವ ನೆರವೇರಲಿದೆ. ಸಹಸ್ರಾರು ಭಕ್ತಾದಿಗಳು ಚಾಮುಂಡಿಬೆಟ್ಟಕ್ಕೆ ತೆರಳಿ, ದೇವಿ ದರ್ಶನ ಪಡೆಯಲಿದ್ದಾರೆ.

ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯಲ್ಲಿ

ಅತ್ಯಾಧುನಿಕ ಸುರಕ್ಷತಾ ವ್ಯವಸ್ಥೆ

ಸಂಚರಿಸುವ ವಾಹನ ಸವಾರರ ಸುರಕ್ಷತೆಗೆ ಹೈಟೆಕ್ ಸ್ಪರ್ಶ

● ರಿಯಲ್-ಟೈಂ ಡೇಟಾ ರಿಲೇ ನಿರ್ವಹಿಸಲು ಎಲ್‌ಇಡಿ ಸ್ಕ್ರೀನ್‌ಗಳೊಂದಿಗೆ 24X7 ಸೆಂಟ್ರಲ್ ಕಮಾಂಡ್ ಸೆಂಟರ್ ಸ್ಥಾಪನೆ ● ಅಪಘಾತವಾದಾಗ ತಕ್ಷಣ ಸ್ಪಂದನೆ, ಲೇನ್ ಡಿಸಿಪ್ಲಿನ್ ಪಾಲನೆಗೂ ಕ್ರಮ, ತನಿಖೆಗೆ ಅಗತ್ಯ ಸಾಕ್ಷ್ಯಕ್ಕೆ ಆದ್ಯತೆ



ಮೈಸೂರು, ಜೂ. 22(ಆರ್‌ಕೆ)– ಅಪಘಾತಗಳ ತಪ್ಪಿಸಿ, ವಾಹನ ಸವಾರರ ಸುರಕ್ಷತೆಗಾಗಿ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯಲ್ಲಿ ಎಎಂಆರ್ ಸೆನ್ಸಾರ್ ಆಧಾರಿತ ಇಂಟೆಲಿಜೆಂಟ್ ಟ್ರಾನ್ಸ್‌ಪೋರ್ಟ್ ಸಿಸ್ಟಂ (ITS) ಅಳವಡಿಸಲು ಪೋರ್ಟ್ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (NHAI) ಮುಂದಾಗಿದೆ.

ಲೇನ್ ಡಿಸಿಪ್ಲಿನ್ ಹೆಚ್ಚಿಸುವ ಮೂಲಕ ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳ ಮೇಲೆ ನಿಗಾ ಇರಿಸಲು ಅತ್ಯಾಧುನಿಕ ತಂತ್ರಜ್ಞಾನ ಬಳಸಲು ಸಿದ್ಧತೆ ನಡೆಸಿರುವ ಪ್ರಾಧಿಕಾರವು, ಸಂಚಾರಕ್ಕೆ ಮುಕ್ತಗೊಳಿಸುವುದರೊಳಗಾಗಿ ಎಲ್ಲಾ ಅಗತ್ಯ ಸುರಕ್ಷತಾ ಉಪಕರಣಗಳನ್ನು ಅಳವಡಿಸುವ ಯೋಜನೆ ಜಾರಿಗೊಳಿಸಲು ತಯಾರಿ ನಡೆಸುತ್ತಿದೆ.

10 ಪಥದ ಎಕ್ಸ್‌ಪ್ರೆಸ್ ಹೈವೇಯಲ್ಲಿ ಪ್ರತೀ 2 ಕಿ.ಮೀ. ಗೊಂದರಂತೆ ಅನಿಸೋಟ್ರೊಪಿಕ್ ಮ್ಯಾಗ್ನೆಟೋರೆಸಿಸ್ಟಿವ್ (AMR) ಸೆನ್ಸಾರ್ ಆಧಾರಿತ ಐಟಿಎಸ್ (Intelligent Transport System) ಅಳವಡಿಸಲಿದ್ದು, ಸಂಚರಿಸುವ ವಾಹನಗಳ ರಿಯಲ್ ಟೈಂ ಡೇಟಾ ಸಂಗ್ರಹಿಸಲಾಗುವುದು. ಅದರಿಂದ ಆ ಮಾರ್ಗದಲ್ಲಿ ಸಂಚರಿಸುವ ವಾಹನಗಳು ಲೇನ್ ಡಿಸಿಪ್ಲಿನ್ ಪಾಲನೆ ಮಾಡುತ್ತವೆಯೇ, ವೇಗ, ಚಲನವಲನದ ಮೇಲೆ ನಿಗಾ ಇರಿಸಿ ಮಾಹಿತಿ ರವಾನಿಸಲು ಸಹಕಾರಿಯಾಗಲಿದೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರದ ನಿರ್ದೇಶಕ ಬಿ.ಟಿ. ಶ್ರೀಧರ, ಮೈಸೂರು–ಬೆಂಗಳೂರು ನಡುವೆ ನಿರ್ಮಾಣವಾಗುತ್ತಿರುವ ಎಕ್ಸ್‌ಪ್ರೆಸ್ ವೇ ಉದ್ದಕ್ಕೂ ಅತ್ಯಾಧುನಿಕ ತಂತ್ರಜ್ಞಾನದ ಉಪಕರಣಗಳನ್ನು ಅಳವಡಿಸಿ ಸಂಚರಿಸುವ ವಾಹನಗಳ ಸುರಕ್ಷತೆಗಾಗಿ ಅಗತ್ಯ ಕ್ರಮ ಕೈಗೊಳ್ಳಲು ಹೆಚ್ಚುವರಿ ಕಾಮಗಾರಿಗಳಲ್ಲಿ ಪ್ರಸ್ತಾವನೆ ಸೇರಿಸಲಾಗಿದೆ ಎಂದರು.

ಪ್ರತೀ ಎರಡು ಕಿ.ಮೀ.ಗೊಂದರಂತೆ ಸೆನ್ಸಾರ್‌ಗಳು, ಕ್ಯಾಮರಾಗಳು ಮತ್ತು ನೈಟ್ ವಿಷನ್ ಗಾಡ್ಗೆಟ್‌ಗಳನ್ನು ಅಳವಡಿಸಲು ಚಿಂತನೆ ನಡೆಸಲಾಗಿದ್ದು, ಯೋಜನೆ ಅನುಮೋದನೆಯಾದಲ್ಲಿ ಸಾರ್ವಜನಿಕರಿಗೆ ಮುಕ್ತಗೊಳಿಸುವುದರೊಳಗಾಗಿ ಈ ಸೌಲಭ್ಯವನ್ನು ಒದಗಿಸಲು ಪ್ರಕ್ರಿಯೆ ನಡೆಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಸಂಚಾರ ನಿಯಮ ಉಲ್ಲಂಘನೆ, ಲೇನ್ ಡಿಸಿಪ್ಲಿನ್ ಮೇಂಟೇನ್ ಮಾಡದಿರುವುದು, ಅಪಘಾತಗಳಿಗೆ ಕಾರಣವಾಗುವುದನ್ನು ಗಮನಿಸಿ ಅಂತಹ ವಾಹನಗಳ ಮಾಹಿತಿ ದಾಖಲಿಸಿ ಸೂಕ್ತ ತಿಳುವಳಿಕೆ ನೀಡಲು ಈ ತಂತ್ರಜ್ಞಾನ ಸಹಕಾರಿಯಾಗುವುದು. 118 ಸಂಚರಿಸುವ ಪ್ರತೀ ವಾಹನಗಳ ಚಾಲನೆಯನ್ನು ಸೆಂಟ್ರಲ್ ಕಂಟ್ರೋಲ್ ಯೂನಿಟ್‌ನಲ್ಲಿ ಮಾನಿಟರ್ ಮಾಡಲಾಗುವುದು ಎಂದು ತಿಳಿಸಿದರು.


ಅಪಘಾತ ಸಂಭವಿಸಿದರೆ ತಕ್ಷಣ ಸ್ಥಳಕ್ಕೆ ತೆರಳಲು, ಅಪಘಾತ ಪ್ರಕರಣಗಳ ತನಿಖೆಗೆ ಅಗತ್ಯ ಸಾಕ್ಷ್ಯ ಸಂಗ್ರಹಿಸಲು ಸೆಂಟ್ರಲ್ ಕಮಾಂಡ್ ಸೆಂಟರ್‌ನಲ್ಲಿ ಸೌಲಭ್ಯ ಕಲ್ಪಿಸಲಾಗುವುದು. ಇದರಿಂದ ಅಪಘಾತಗಳನ್ನು ತಪ್ಪಿಸುವ ಜೊತೆಗೆ ವಾಹನ ಸವಾರರು ಸುರಕ್ಷಿತವಾಗಿ ಪ್ರಯಾಣಿಸಬಹುದಾಗಿದೆ ಎಂದು ಅವರು ತಿಳಿಸಿದರು.

ದಶಪಥ ಎಕ್ಸ್‌ಪ್ರೆಸ್ ಹೈವೇ ಕಾಮಗಾರಿ ತ್ವರಿತಗತಿಯಲ್ಲಿ ನಡೆಯುತ್ತಿದ್ದು, ನಿಗದಿತ ಅವಧಿಯೊಳಗಾಗಿ ಪೂರ್ಣಗೊಳ್ಳಲಿದೆ. ಅದೇ ರೀತಿ ಟೋಲ್ ಪ್ಲಾಜಾ ನಿರ್ಮಾಣ ಕೆಲಸವೂ ಬಹುತೇಕ ಪೂರ್ಣಗೊಂಡಿದ್ದು, ಹೆದ್ದಾರಿ ಉದ್ಘಾಟನೆ ದಿನದಿಂದಲೇ ಟೋಲ್ ಸಂಗ್ರಹಕ್ಕೆ ಸಿದ್ಧತೆ ನಡೆಯುತ್ತಿದೆ.

ತರಾತುರಿಯಲ್ಲಿ ಪ್ರಧಾನಿ ಮುಂದೆ ದೀಪ ಬೆಳಗಿಸುವ ಧಾವಂತ!

ಚಾಮುಂಡಿಬೆಟ್ಟದಲ್ಲಿ ಬೇಕಾಬಿಟ್ಟಿ ವಿದ್ಯುತ್ ಕಂಬ ಅಳವಡಿಕೆ: ಅನಾಹುತಕ್ಕೆ ಆಹ್ವಾನ






ಮೋಹನ್ ಕಾಯಕ

ಮೈಸೂರು, ಜೂ.22– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಭೇಟಿ ಹಿನ್ನೆಲೆಯಲ್ಲಿ ಮೈಸೂರಿನ ಐತಿಹಾಸಿಕ ಧಾರ್ಮಿಕ ಯಾತ್ರಾಸ್ಥಳವಾಗಿರುವ ಚಾಮುಂಡಿಬೆಟ್ಟದ ರಸ್ತೆಯುದ್ದಕ್ಕೂ ವಿದ್ಯುತ್ ದೀಪಗಳನ್ನು ಅಳವಡಿಸುವ ಸಲುವಾಗಿ ಮನಸ್ಸಿಗೆ ಬಂದಂತೆ ತರಾತುರಿಯಲ್ಲಿ ಕಂಬಗಳನ್ನು ಅಳವಡಿಸಲಾಗಿದೆ. ತರಾತುರಿಯ ಈ ಕಾರ್ಯ ಬೆಟ್ಟದಲ್ಲಿ ಮತ್ತೊಂದು ಅವಾಂತರಕ್ಕೆ ಸಾಕ್ಷಿಯಾಗಿದೆ ಎಂದು ಮೈಸೂರಿನ ಪ್ರಜ್ಞಾವಂತ ನಾಗರಿಕರು, ಪ್ರವಾಸಿಗರು, ಭಕ್ತರು ಆಕ್ರೋಶ ವ್ಯಕ್ತಪಡಿಸಿದ್ದು, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಚಾಮುಂಡಿಬೆಟ್ಟದ ತಪ್ಪಲು(ಮುಖ್ಯ ರಸ್ತೆಯ ಆರ್ಚ್ ಸಮೀಪ) ತಾವರೆಕಟ್ಟೆಯಿಂದ ಬೆಟ್ಟದ ಮಹಿಷಾಸುರ ಪ್ರತಿಮೆವರೆಗೂ ಹೊಸದಾಗಿ ನೂರಾರು ಕಾಂಕ್ರೀಟ್ ವಿದ್ಯುತ್ ಕಂಬಗಳನ್ನು ಅವೈಜ್ಞಾನಿಕವಾಗಿ ನೆಡಲಾಗಿದೆ. ಟ್ರಾಕ್ಟರ್‌ನಲ್ಲಿ ಡ್ರಿಲ್ಲಿಂಗ್ ಯಂತ್ರದ ಮೂಲಕ ಬೋರ್‌ವೆಲ್ ಮಾದರಿಯಲ್ಲಿ ನೆಲ ಕೊರೆದು ವಿದ್ಯುತ್ ಕಂಬಗಳನ್ನು ನಿಲ್ಲಿಸಲಾಗಿದೆ. ಆದರೆ ಗುಂಡಿಯೊಳಗೆ ಕಾಂಕ್ರೀಟ್ ತುಂಬಿ ತಳಭಾಗವನ್ನು ಭದ್ರಪಡಿಸುವ ಕೆಲಸ ಮಾಡಿಲ್ಲ. ಇದರಿಂದಾಗಿ ಬಹುತೇಕ ವಿದ್ಯುತ್ ಕಂಬಗಳು ಅತ್ತಿತ್ತ ವಾಲಿದ್ದು, ಯಾವಾಗ ಬೇಕಾದರೂ ನೆಲಕ್ಕುರುಳುವ ಆತಂಕ ಸೃಷ್ಟಿಸಿವೆ.



ಯಾವುದೇ ರೀತಿಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳದೆ, ಮುಂದಾಗಬಹುದಾದ ಅನಾಹುತಗಳ ಬಗ್ಗೆಯೂ ಅರಿವಿಲ್ಲದಂತೆ ಏಕಾಏಕಿ ವಿದ್ಯುತ್ ಕಂಬಗಳನ್ನು ನೆಟ್ಟು ದೀಪಗಳನ್ನು ಅಳವಡಿಸಿರುವುದು ಬೆಟ್ಟದ ಮೇಲೆ ಏನು ಬೇಕಾದರೂ ಮಾಡಬಹುದೇ ಎಂಬ ದುಗುಡ ಸೃಷ್ಟಿಯಾಗುವಂತೆ ಮಾಡಿದೆ. ಬಹುತೇಕ ತಿರುವುಗಳಿಂದಲೇ ಕೂಡಿರುವ ಬೆಟ್ಟದ ರಸ್ತೆ ಅಂಚಲ್ಲಿ ಮನಬಂದಂತೆ ಗುಂಡಿಗಳನ್ನು ಕೊರೆದು ಕಂಬಗಳನ್ನು ನಿಲ್ಲಿಸಲಾಗಿದೆ. ವಾಹನ ಸವಾರರು ಸ್ವಲ್ಪ ಆಯಾ ತಪ್ಪಿದರೂ ಅನಾಹುತ ಗ್ಯಾರಂಟಿ.



ಕುಸಿಯುವ ಆತಂಕ: ರಸ್ತೆಬದಿಯ ಇಳಿಜಾರು ಜಾಗದಲ್ಲಿ ಹೆಚ್ಚಾಗಿ ವಿದ್ಯುತ್ ಕಂಬಗಳನ್ನು ನಿಲ್ಲಿಸಲಾಗಿದೆ. ಅಲ್ಲದೆ ತಡೆಗೋಡೆ ಮೇಲೆ, ಅದಕ್ಕೆ ಹೊಂದಿಕೊಂಡಂತೆ ಹಾಗೂ ತಡೆಗೋಡೆಯಾಚೆಗೂ ಕಂಬಗಳನ್ನು ನೆಡಲಾಗಿದ್ದು, ಯಾವಾಗ ಬೇಕಾದರೂ ಕುಸಿದು ಬೀಳುವ ಸಾಧ್ಯತೆ ಹೆಚ್ಚಾಗಿದೆ. ಈಗಾಗಲೇ ಹಲವು ಬಾರಿ ಚಾಮುಂಡಿಬೆಟ್ಟದ ಮೇಲಿನ ರಸ್ತೆಗಳು ಕುಸಿದು ಬಿದ್ದಿದ್ದು, ಭಯದಲ್ಲಿಯೇ ಸಂಚರಿಸುವಂತಾಗಿದೆ. ಇದರ ನಡುವೆಯೇ ನೂರಾರು ಗುಂಡಿಗಳನ್ನು ಕೊರೆಸಿ ಮಣ್ಣನ್ನು ಸಡಿಲಗೊಳಿಸುವ ಮೂಲಕ ಮತ್ತಷ್ಟು ಕುಸಿಯುವಂತೆ ಮಾಡಿದ್ದಾರೆ ಎಂದು ಕಿಡಿಕಾರಿದ್ದಾರೆ.

ಚಾಮುಂಡಿಬೆಟ್ಟದ ಮೇಲೆ ಸ್ವಪ್ರತಿಷ್ಠೆ ಮೆರೆದಿದ್ದಾರೆ....

"ಮೈಸೂರಿನ ಸುಪ್ರಸಿದ್ಧ ಧಾರ್ಮಿಕ ಕೇಂದ್ರವಾಗಿರುವ ಚಾಮುಂಡಿಬೆಟ್ಟದ ರಸ್ತೆಬದಿಯಲ್ಲಿ ಅವೈಜ್ಞಾನಿಕ ಹಾಗೂ ಬೇಜವಾಬ್ದಾರಿಯಿಂದ ವಿದ್ಯುತ್ ಕಂಬಗಳನ್ನು ಅಳವಡಿಸುವ ಮೂಲಕ ಸ್ಥಳೀಯ ಜನಪ್ರತಿನಿಧಿಗಳು, ಸಂಬಂಧಪಟ್ಟ ಅಧಿಕಾರಿಗಳು ಸ್ವಪ್ರತಿಷ್ಠೆ ತೋರಿದ್ದಾರೆ. ಸುಂದರ ವಾತಾವರಣವುಳ್ಳ ಪವಿತ್ರ ಯಾತ್ರಾ ಸ್ಥಳವನ್ನು ಅಭಿವೃದ್ಧಿ ಹೆಸರಿನಲ್ಲಿ ಹಾಳು ಮಾಡುತ್ತಿದ್ದಾರೆ. ಬದ್ಧತೆಯಿಲ್ಲದ ಜನಪ್ರತಿನಿಧಿಗಳ ನಡೆಯಿಂದ ಮುಂದೆ ದೊಡ್ಡ ಪ್ರಮಾಣದ ಅನಾಹುತಗಳನ್ನು ಎದುರಿಸಬೇಕಾಗುತ್ತದೆ. – **ಮೈಸೂರಿನ ಪ್ರಜ್ಞಾವಂತ ನಾಗರಿಕರು**

ಧಾರ್ಮಿಕ ಯಾತ್ರಾಸ್ಥಳಕ್ಕೆ ಕಂಟಕ: ಮೈಸೂರಿನ ಪ್ರಸಿದ್ಧ ಧಾರ್ಮಿಕ ಯಾತ್ರಾ ಸ್ಥಳವಾದ ಚಾಮುಂಡಿಬೆಟ್ಟಕ್ಕೆ ಕಂಟಕ ಎದುರಾಗಿದೆ. ಪ್ರಧಾನಿ ಮೋದಿ ಭೇಟಿ ಹೆಸರಿನಲ್ಲಿ ಲಕ್ಷಾಂತರ ಭಕ್ತರು ಭೇಟಿ ನೀಡುವ ಸ್ಥಳದಲ್ಲಿ ಭಯ ಸೃಷ್ಟಿ ಮಾಡಿದ್ದಾರೆ. ಮಳೆಗಾಲದಲ್ಲಿ ಅಲ್ಲಲ್ಲಿ ಕುಸಿದು ಬೀಳುತ್ತಿದ್ದ ಚಾಮುಂಡಿಬೆಟ್ಟ ಇನ್ನು ಮುಂದೆ ರಸ್ತೆಯುದ್ದಕ್ಕೂ ಅಧಿಕ ಕಡೆ ಕುಸಿಯುವಂತೆ ಮಾಡಿದ್ದಾರೆ. ಕಂಬ ನೆಡಲು ಡ್ರಿಲ್ಲಿಂಗ್ ಯಂತ್ರ ಬಳಸುವುದರಿಂದ ಬೆಟ್ಟದ ಭೂಭಾಗದಲ್ಲಿ ಕಂಪನ ಉಂಟಾಗಿ ಮಣ್ಣು ಸಡಿಲಗೊಳ್ಳುವ ಸಾಧ್ಯತೆಯಿದೆ. ಈಗಾಗಲೇ ಬೆಟ್ಟದ ನಂದಿ ರಸ್ತೆಯಲ್ಲಾಗಿರುವ ಭೂ ಕುಸಿತದಿಂದ ಇನ್ನು ಪಾಠ ಕಲಿಯದೆ ಮತ್ತೆ ಡ್ರಿಲ್ಲಿಂಗ್ ಯಂತ್ರ ಬಳಸುವುದು ಎಷ್ಟು ಸರಿ? ಎಂದು ಪ್ರಶ್ನಿಸಿದ್ದಾರೆ.

ಪ್ರಾಣಿ–ಪಕ್ಷಿ ಸಂಕುಲಕ್ಕೆ ಕಂಟಕ: ಸಂರಕ್ಷಿತ ಅರಣ್ಯಪ್ರದೇಶವೂ ಆಗಿರುವ ಚಾಮುಂಡಿಬೆಟ್ಟದಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಿ, ರಸ್ತೆಯುದ್ದಕ್ಕೂ ದೀಪಗಳನ್ನು ಅಳವಡಿಸಿರುವುದರಿಂದ ಪ್ರಾಣಿ–ಪಕ್ಷಿ ಸಂಕುಲಕ್ಕೆ ತೊಂದರೆ ಉಂಟಾಗಲಿದೆ. ನೈಸರ್ಗಿಕ ಸಹಜ ವಾತಾವರಣವಿರುವ ಬೆಟ್ಟದಲ್ಲಿ ಪಕ್ಷಿ, ಪ್ರಾಣಿ ಸಂಕುಲ ಬೀದಿದೀಪದಿಂದ ಘಾಸಿಗೊಳ್ಳುತ್ತದೆ. ಹಲವು ದಶಕಗಳಿಂದ ಇದ್ದ ವ್ಯವಸ್ಥೆಯೇ ಮುಂದುವರೆಸಬೇಕು. ಅದರಲ್ಲೂ ಹೆಚ್ಚು ಬೆಳಕು ಚೆಲ್ಲುವ ಎಲ್‌ಇಡಿ ಬಲ್ಬ್ ಅಳವಡಿಸುತ್ತಿರುವುದು ನೈಸರ್ಗಿಕ ಪರಿಸರದ ಮೇಲೆ ದುಷ್ಪರಿಣಾಮ ಬೀರಲಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಚಾಮುಂಡಿಬೆಟ್ಟದ ದೇವಸ್ಥಾನದ

ಆಜುಬಾಜಲ್ಲೇ ಅಪಾಯವಿದೆ!



ಮೈಸೂರು, ಜೂ.22(ಎಸ್‌ಬಿಡಿ)– ಪ್ರಧಾನಿ ಮೋದಿ ಭೇಟಿ ಹಿನ್ನೆಲೆಯಲ್ಲಿ ಮೈಸೂರಿನ ಚಾಮುಂಡಿಬೆಟ್ಟದ ಮುಖ್ಯರಸ್ತೆಯಲ್ಲಿ ವಿದ್ಯುತ್ ದೀಪ ಅಳವಡಿಕೆ, ಸ್ವಚ್ಛತೆ ನಿರ್ವಹಣೆ ಜೊತೆಗೆ ಭಾರೀ ಬಂದೋಬಸ್ತ್ ಮಾಡಲಾಗಿತ್ತು. ಒಂದು ಲೋಪವೂ ಆಗದಂತೆ ಅನೇಕ ದಿನಗಳ ಮುಂಚಿನಿಂದಲೇ ತೀವ್ರ ಕಟ್ಟೆಚ್ಚರ ವಹಿಸಲಾಗಿತ್ತು. ಆದರೆ ಭಕ್ತರಿಗೆ ಅಪಾಯಕಾರಿಯಾಗಿರುವ ಸ್ಥಳದತ್ತ ಯಾರೂ ಗಮನಹರಿಸಿಲ್ಲ.

ಚಾಮುಂಡಿಬೆಟ್ಟದ ಶ್ರೀ ಲಕ್ಷ್ಮಿನಾರಾಯಣ ಸ್ವಾಮಿ ದೇವಸ್ಥಾನದ ಬಳಿ ತಡೆಗೋಡೆ ನೆಲಕ್ಕುರುಳುವ ಸ್ಥಿತಿಯಲ್ಲಿದ್ದು, ತುರ್ತು ದುರಸ್ತಿಯಾಗದಿದ್ದರೆ ಅಪಾಯ ಸಂಭವಿಸುವ ಸಾಧ್ಯತೆಯಿದ್ದರೂ ಸಂಬಂಧಪಟ್ಟವರು ನಿರ್ಲಕ್ಷ್ಯ ವಹಿಸಿದ್ದಾರೆ.

ಚಾಮುಂಡಿಬೆಟ್ಟಕ್ಕೆ ಬರುವ ಭಕ್ತರು ಮೊದಲಿಗೆ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದು ನಂತರ ಶ್ರೀ ಮಹಾಬಲೇಶ್ವರಸ್ವಾಮಿ ಹಾಗೂ ಶ್ರೀ ಲಕ್ಷ್ಮಿನಾರಾಯಣ ಸ್ವಾಮಿ ದೇವಾಲಯಗಳಿಗೆ ತೆರಳಿ ನಮಿಸುವುದು ವಾಡಿಕೆ. ಶ್ರೀ ಲಕ್ಷ್ಮಿನಾರಾಯಣ ಸ್ವಾಮಿ ದೇವಾಲಯ ಎತ್ತರದ ಸ್ಥಳದಲ್ಲಿರುವ ಕಾರಣ, ರಸ್ತೆ ಭಾಗಕ್ಕೆ ದಪ್ಪದಾದ ತಡೆಗೋಡೆ ನಿರ್ಮಿಸಿ, ಪುಟ್ಟ ಹಾದಿ ನಿರ್ಮಿಸಲಾಗಿದೆ. ಮತ್ತೊಂದು ಭಾಗದಲ್ಲಿ ರಸ್ತೆಗಿಳಿಯಲು ಮೆಟ್ಟಿಲುಗಳ ವ್ಯವಸ್ಥೆಯಿದೆ. ಆದರೆ ತಡೆಗೋಡೆ ಬಹುತೇಕ ವಾಲಿದ್ದು, ಯಾವಾಗಲಾದರೂ ನೆಲಕ್ಕುರುಳಬಹುದು.

ಅಪಾಯ ಸ್ಥಿತಿ: ರಸ್ತೆ ಭಾಗಕ್ಕೆ ಐದಾರು ಅಡಿ ಎತ್ತರದ ದಪ್ಪ ತಡೆಗೋಡೆ ನಿರ್ಮಿಸಲಾಗಿದ್ದು, ದೇವಾಲಯ ಸಂಪರ್ಕಿಸುವ ಸಣ್ಣ ಮಾರ್ಗದ ಕಡೆಗೆ ಮೂರ್‍ನಾಲ್ಕು ಅಡಿ ಎತ್ತರವಾಗಿದೆ. ಈ ಗೋಡೆಯ ಮೇಲೆ ಏಳೆಂಟು ಇಂಚು ದಪ್ಪ ಹಾಗೂ 20 ಇಂಚಿಗೂ ಅಧಿಕ ಅಗಲವಾದ ಬೃಹತ್ ಕಲ್ಲುಚಪ್ಪಡಿ ಅಳವಡಿಸಲಾಗಿದೆ. ತಡೆಗೋಡೆಯುದ್ದಕ್ಕೂ ಎರಡು ಭಾಗದಲ್ಲಿ ಬಿರುಕು ಬಿಟ್ಟಿರುವುದಲ್ಲದೆ ಅದು ದೇವಾಲಯ ಮಾರ್ಗದತ್ತ ವಾಲಿದೆ. ಚಪ್ಪಡಿಗಳು ಇಳಿಜಾರಾಗಿ ಬಾಗಿವೆ. ಗೋಡೆ ಮತ್ತಷ್ಟು ವಾಲಿದರೆ ಚಪ್ಪಡಿಗಳು ನೆಲಕ್ಕುರುಳುತ್ತವೆ. ಆ ವೇಳೆ ಜನ ಇದ್ದರೆ ಅವರ ಕಾಲುಗಳು ಚಪ್ಪಡಿಯಿಂದ ನಜ್ಜುಗುಜ್ಜಾಗಿ ಭಾರೀ ಹಾನಿಯಾಗಬಹುದು. ಮಕ್ಕಳೇನಾದರೂ ಚಪ್ಪಡಿ ಅಡಿ ಸಿಲುಕಿದರೆ ಪ್ರಾಣಾಪಾಯ ಸಂಭವಿಸುವುದು ಖಚಿತ.

ತಕ್ಷಣ ಕ್ರಮವಾಗಬೇಕು: ವಾರಾಂತ್ಯ ಹಾಗೂ ವಿಶೇಷ ದಿನಗಳಲ್ಲಿ ಚಾಮುಂಡಿಬೆಟ್ಟದಲ್ಲಿ ಭಕ್ತಸಾಗರ ಕಾಣಬಹುದು. ತಾಸುಗಟ್ಟಲೆ ಸರತಿಯಲ್ಲಿ ಸಾಗಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆಯುತ್ತಾರೆ. ನಂತರ ಶ್ರೀ ಮಹಾಬಲೇಶ್ವರ ಸ್ವಾಮಿ ಹಾಗೂ ಶ್ರೀ ಲಕ್ಷ್ಮಿನಾರಾಯಣ ಸ್ವಾಮಿ ದೇವಾಲಯಗಳಿಗೆ ತೆರಳುತ್ತಾರೆ.

ಜನದಟ್ಟಣೆ ಇರುವಾಗ ತಡೆಗೋಡೆ ಕುಸಿದು ಚಪ್ಪಡಿಗಳು ಭಕ್ತರ ಮೇಲೆ ಬಿದ್ದರೆ ಏನು ಗತಿ. ಆಷಾಢ ಮಾಸಕ್ಕೆ ದಿನ ಗಣನೆ ಆರಂಭವಾಗಿದ್ದು ಆಷಾಢ ಶುಕ್ರವಾರಗಳಲ್ಲಂತೂ ಭಕ್ತರ ದಂಡೇ ಹರಿದುಬರುತ್ತದೆ ಆಗ ನೂಕು ನುಗ್ಗಲು ಹೆಚ್ಚಾಗಿ ರುತ್ತದೆ. ಹಾಗಾಗಿ ಗೋಡೆ ದುರಸ್ತಿ ತಕ್ಷಣವೇ ಆಗಬೇಕಿದೆ.




ಮಕ್ಕಳ ಆಟದ ಸ್ಥಳ: ಚಾಮುಂಡಿಬೆಟ್ಟದ ಮಕ್ಕಳು ನಿತ್ಯ ಆಟವಾಡುವ ಸ್ಥಳವಿದು. ರಸ್ತೆಯ ಒಂದು ಭಾಗದಲ್ಲಿರುವ ಪಾರ್ಕ್‌ನಲ್ಲಿ ಆಟವಾಡುವುದರ ಜೊತೆಗೆ ಮತ್ತೊಂದು ಭಾಗದ ಈ ತಡೆಗೋಡೆ ಮೇಲೆ ಹತ್ತಿ ಕುಣಿದಾಡುತ್ತಿರುತ್ತಾರೆ. ಗೋಡೆಗೆ ಹೊಂದಿಕೊಂಡಂತೆ ಇರುವ ಮರದ ಕೊಂಬೆಗಳನ್ನು ಎಟಕಿಸಿ, ಎಲೆ ಕೀಳಲು ಯತ್ನಿಸುವುದು ಕಂಡುಬರುತ್ತದೆ. ಮಕ್ಕಳು ಆಟವಾಡುವಾಗ ಏನಾದರೂ ಚಪ್ಪಡಿಗಳು ನೆಲಕ್ಕುರುಳಿದರೆ ಯಾರು ಹೊಣೆ? ವ್ಯವಸ್ಥೆಯ ನಿರ್ಲಕ್ಷ್ಯಕ್ಕೆ ಅಮಾಯಕ ಜೀವಗಳು ಬಲಿಯಾಗಬೇಕೆ?. ಈ ಬಗ್ಗೆ ಗಮನಹರಿಸಿ, ತುರ್ತು ದುರಸ್ತಿ ಕೈಗೊಳ್ಳಬೇಕಿದೆ. ತಕ್ಷಣಕ್ಕೆ ಬ್ಯಾರಿಕೇಡ್ ಅಳವಡಿಸಿ ಗೋಡೆ ಬಳಿ ಜನ ಓಡಾಡದಂತೆ ಕ್ರಮ ವಹಿಸಬೇಕಿದೆ.

ಮೈಸೂರಲ್ಲಿ ನಾಡಪ್ರಭು ಕೆಂಪೇಗೌಡ ರಥಕ್ಕೆ ಚಾಲನೆ

ಜಯಂತಿ ಕಾರ್ಯಕ್ರಮ ಪ್ರಚಾರ ಆರಂಭ

ಮೈಸೂರು,ಜೂ.22(ಎಂಟಿವೈ)– ನಾಡಪ್ರಭು ಕೆಂಪೇಗೌಡ ಜಯಂತಿ ಅಂಗವಾಗಿ ಜಿಲ್ಲೆಯಾದ್ಯಂತ ಪ್ರಚಾರ ಮಾಡಲು ಸಿದ್ಧಪಡಿಸಿರುವ ಕೆಂಪೇಗೌಡ ಪ್ರಚಾರ ರಥಕ್ಕೆ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಚಾಲನೆ ನೀಡಿದರು.

ಮೈಸೂರು ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗ ಒಕ್ಕಲಿಗರ ಸಂಘಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರಚಾರ ರಥಕ್ಕೆ ಚಾಲನೆ ನೀಡಲಾಯಿತು. ಇದೇ ವೇಳೆ ಶ್ರೀ ಸೋಮನಾಥ ಸ್ವಾಮೀಜಿ ಮಾತನಾಡಿ, ನಾಡು ಕಟ್ಟುವಲ್ಲಿ ಕೆಂಪೇಗೌಡರ ಶ್ರಮ ಹಾಗೂ ಕೊಡುಗೆ ಅಪಾರ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಕೆಂಪೇಗೌಡರ ಸೇವೆಯನ್ನು ಮನವರಿಕೆ ಮಾಡಿಕೊಳ್ಳಬೇಕು. ಅದರಲ್ಲೂ ಬೆಂಗಳೂರು ನಗರದ ನಿರ್ಮಾತೃ ಕೆಂಪೇಗೌಡರನ್ನು ಬೆಂಗಳೂರಿಗರು ಸ್ಮರಿಸಿಕೊಳ್ಳಬೇಕು. ಸುಸಜ್ಜಿತ ನಗರವನ್ನು ನೀಡಿರುವ ಕೀರ್ತಿ ಕೆಂಪೇಗೌಡರದ್ದಾಗಿದೆ. ಈ ಹಿನ್ನೆಲೆಯಲ್ಲಿ ಕೆಂಪೇಗೌಡ ಜಯಂತಿ ಕಾರ್ಯಕ್ರಮಕ್ಕೆ ಆಹ್ವಾನ ನೀಡಲು ಪ್ರಚಾರ ರಥದ ವ್ಯವಸ್ಥೆ ಮಾಡಿರುವುದು ಶ್ಲಾಘನೀಯ ಎಂದರು.



ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಕಳೆದ ಎರಡು ವರ್ಷಗಳಿಂದ ಕೋವಿಡ್ ಕಾರಣದಿಂದಾಗಿ ಕೆಂಪೇಗೌಡರ ಜಯಂತಿಯನ್ನು ಸರಳ ಹಾಗೂ ಸಾಂಪ್ರದಾಯಿಕವಾಗಿ ಆಚರಿಸಲಾಗಿತ್ತು. ಈಗ ಕೊರೊನಾ ಸೋಂಕಿನ ಪ್ರಮಾಣ ಕಡಿಮೆ ಇರುವುದರಿಂದ ಈ ಬಾರಿ ಅದ್ಧೂರಿಯಾಗಿ ಕೆಂಪೇಗೌಡರ ಜಯಂತಿ ಆಚರಿಸಲು ನಿರ್ಧರಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಮೈಸೂರು ಭಾಗದ ಒಕ್ಕಲಿಗ ಸಮುದಾಯ ಮುಖಂಡರು ಪಕ್ಷಾತೀತವಾಗಿ ಸಹಕಾರ ನೀಡುವ ಮೂಲಕ ಅರ್ಥಪೂರ್ಣ ಆಚರಣೆಗೆ ಸಹಕರಿಸಲಿದ್ದಾರೆ ಎಂದರು. ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಹೊರಟ ಪ್ರಚಾರ ರಥ, ದೇವರಾಜ ಅರಸ್ ರಸ್ತೆ ಮೂಲಕ ಹಿನಕಲ್‌ಗೆ ತೆರಳಿತು. ಅಲ್ಲಿ ಗ್ರಾಮದ ಮುಖಂಡರು ಹಾಗೂ ಯುವಕರ ಸಂಘದ ಸದಸ್ಯರು ರಥವನ್ನು ಬರಮಾಡಿಕೊಂಡರು. ಬಳಿಕ ಹೂಟಗಳ್ಳಿಗೆ ತೆರಳಿ ವಿವಿಧ ರಸ್ತೆಗಳಲ್ಲಿ ಸಂಚರಿಸಿತು. ಜೂ.27ರವರೆಗೂ ಈ ಪ್ರಚಾರ ರಥ ಜಿಲ್ಲೆಯಾದ್ಯಂತ ಸಂಚರಿಸಲಿದೆ. ಕಾರ್ಯಕ್ರಮದಲ್ಲಿ ಶಾಸಕ ಎಲ್.ನಾಗೇಂದ್ರ, ಮಾಜಿ ಶಾಸಕ ವಾಸು, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ಮೈಸೂರು ಒಕ್ಕಲಿಗ ಸಂಘದ ಅಧ್ಯಕ್ಷ ಮರಿಸ್ವಾಮಿ, ಅಖಿಲ ಕರ್ನಾಟಕ ಒಕ್ಕಲಿಗರ ಅಧ್ಯಕ್ಷ ತೇಜಸ್ ಲೋಕೇಶ್ ಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಶುಗರ್ ಕಾರ್ಖಾನೆಗೆ ಡಿಸಿ ಭೇಟಿ

ದುರಸ್ತಿ ಕಾರ್ಯ ಚುರುಕಾಗಿ ನಡೆಸಲು ಸೂಚನೆ



ಜಿಲ್ಲಾಧಿಕಾರಿ ಎಸ್.ಅಶ್ವತಿ ಮೈಶುಗರ್ ಸಕ್ಕರೆ ಕಾರ್ಖಾನೆಗೆ ಭೇಟಿ ನೀಡಿ ಪರಿಶೀಲಿಸಿದರು.

ಮಂಡ್ಯ,ಜೂ.22– ಮುಖ್ಯಮಂತ್ರಿಗಳ ನಿರ್ದೇಶನದಂತೆ ಜಿಲ್ಲೆಯಲ್ಲಿ ಮೈಶುಗರ್ ಸಕ್ಕರೆ ಕಾರ್ಖಾನೆಯನ್ನು ಜುಲೈ ಅಂತ್ಯ ಅಥವಾ ಆಗಸ್ಟ್ ಮೊದಲ ವಾರದಲ್ಲಿ ಪ್ರಾರಂಭಿಸಲು ಕಾರ್ಖಾನೆಯ ದುರಸ್ತಿ ಕೆಲಸಗಳು ಚುರುಕಾಗಿ ನಡೆಯಬೇಕಾಗಿದೆ ಎಂದು ಜಿಲ್ಲಾಧಿಕಾರಿ ಎಸ್.ಅಶ್ವತಿ ಸೂಚನೆ ನೀಡಿದರು.

ಮೈಶುಗರ್ ಸಕ್ಕರೆ ಕಾರ್ಖಾನೆಗೆ ಭೇಟಿ ನೀಡಿ ಅಧಿಕಾರಿಗಳ ಸಭೆ ನಡೆಸಿ ಕಾರ್ಖಾನೆಯ ಕೆಲಸಗಳ ಪರಿಶೀಲನೆ ನಡೆಸಿದ ನಂತರ ಅವರು ಮಾತನಾಡುತ್ತಿದ್ದರು. ಬಾಯ್ಲರ್ ಸರಿಪಡಿ ಸುವ ಕೆಲಸ ನಡೆಸಲು ಆಸಕ್ತಿ ಹೊಂದಿರುವ ಮೂರು ಸಂಸ್ಥೆಗಳಿದ್ದು, ದುರಸ್ತಿಗೆ ಬೇಕಿರುವ ವಸ್ತುಗಳನ್ನು ಅವರೊಂದಿಗೆ ಚರ್ಚಿಸಿ ಹೆಚ್ಚಿನ ನಿಗಾ ವಹಿಸಿ ಶೀಘ್ರವಾಗಿ ಕ್ರಮ ಕೈಗೊಳ್ಳು ವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈಗಾಗಲೇ ಸಕ್ಕರೆ ಕಾರ್ಖಾನೆ ಕೆಲಸಗಳಿಗೆ ಸಂಬಂಧಿಸಿದಂತೆ 3.75 ಕೋಟಿ ರೂ ಹಣ ಬಿಡುಗಡೆಯಾಗಿದೆ. 16.60 ಕೋಟಿ ರೂ. ಆರ್ಥಿಕ ಇಲಾಖೆಯಿಂದ ಬಿಡುಗಡೆ ಹಂತದಲ್ಲಿದೆ. ಗುಣಮಟ್ಟದಿಂದ ಕೆಲಸಗಳು ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳಬೇಕು ಎಂದು ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪರಿಶೀಲನೆ ವೇಳೆ ಮೈಶುಗರ್ ಕಾರ್ಖಾನೆ ವ್ಯವಸ್ಥಾಪಕ ನಿರ್ದೇಶಕ ಅಪ್ಪ ಸಾಹೇಬ್ ಪಾಟೀಲ್, ಪಾಂಡವಪುರ ಉಪ ವಿಭಾಗಾಧಿಕಾರಿ ಹಾಗೂ ಆಡಳಿತಾಧಿಕಾರಿ ಶಿವಾನಂದಮೂರ್ತಿ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

6 ಐಟಿಐ ಕಾಲೇಜುಗಳು ಮೇಲ್ದರ್ಜೆಗೆ

ಜಿಲ್ಲಾಧಿಕಾರಿ ಅಶ್ವತಿ ಭೇಟಿ, ಪರಿಶೀಲನೆ

ಮಂಡ್ಯ,ಜೂ22– ಮಂಡ್ಯ ಜಿಲ್ಲೆಯಲ್ಲಿ 6 ಐ.ಟಿ.ಐ ಕಾಲೇಜುಗಳನ್ನು ಮೇಲ್ದರ್ಜೆಗೆ ಏರಿಸಲಾಗಿದ್ದು, ಮಂಡ್ಯ ನಗರದ ಐ.ಟಿ.ಐ ಕಾಲೇಜಿನಲ್ಲಿ ಹೊಸ ಉಪಕರಣಗಳ ಕಾರ್ಯವೈಖರಿ ಕುರಿತಂತೆ ಜಿಲ್ಲಾಧಿಕಾರಿ ಎಸ್.ಅಶ್ವತಿ ಅವರು ಇಂದು ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿ ಪ್ರಾಂಶುಪಾಲರಿಂದ ಮಾಹಿತಿ ಪಡೆದುಕೊಂಡರು.

ಹೊಸ ತಂತ್ರಜ್ಞಾನದ ಬಗ್ಗೆ ತಿಳಿದುಕೊಂಡು, ವಿದ್ಯಾರ್ಥಿಗಳು ಕೌಶಲ್ಯಗಳನ್ನು ಹೆಚ್ಚಿಸಿಕೊಂಡು ಉದ್ಯೋಗ ಪಡೆದುಕೊಳ್ಳಲು ಸಹಕಾರಿಯಾಗುವ ರೀತಿ ಯಂತ್ರೋಪಕರಣಗಳನ್ನು ಟಾಟಾ ಸಂಸ್ಥೆಯಿಂದ ಒದಗಿಸಲಾಗಿದೆ. ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಇಂದಿನ ದಿನದಲ್ಲಿ ಹೆಚ್ಚು ಪ್ರಚಲಿತವಾಗುತ್ತಿರುವ ರೋಬೋಟಿಕ್ಸ್, ಮೆಕಾನಿಕಲ್ ಎಲೆಕ್ಟ್ರಿಕಲ್ ವೆಹಿಕಲ್ ಸೇರಿದಂತೆ ಒಟ್ಟು 6 ಕೋರ್ಸ್‌ಗಳಿಗೆ ಸಿದ್ಧತೆ ನಡೆದಿದ್ದು, ಯಂತ್ರೋಪಕರಣಗಳ ಸಂಪೂರ್ಣ ಅಳವಡಿಕೆ ಹಾಗೂ ಆಡಿಟ್ ಕೆಲಸಗಳು ಜುಲೈ 8 ರೊಳಗೆ ಪೂರ್ಣಗೊಳ್ಳಬೇಕು ಎಂದರು.

ವಾಹನ ಚಾಲನಾ ತರಬೇತಿ

ಮಂಡ್ಯ, ಜೂ.22– ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ 2022–23ನೇ ಸಾಲಿನಲ್ಲಿ ಮಂಡ್ಯ ಜಿಲ್ಲಾ ವ್ಯಾಪ್ತಿ ಎಸ್ಸಿ, ಎಸ್ಟಿಗೆ ಸೇರಿದ ಅರ್ಹ ಮಹಿಳಾ ಮತ್ತು ಪುರುಷ ಸಫಾಯಿ ಕರ್ಮಚಾರಿ ಅಭ್ಯರ್ಥಿಗಳಿಗೆ ಲಘು ಮತ್ತು ಭಾರೀ ವಾಹನ ಚಾಲನಾ ತರಬೇತಿ ನೀಡುವ ಮೂಲಕ ಪ್ರಾದೇಶಿಕ ಸಾರಿಗೆ ಕಚೇರಿಯಿಂದ ಚಾಲನಾ ಅನುಜ್ಞಾನ ಪತ್ರ ಕೊಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜೂ.30ರೊಳಗೆ ದೂ.08232–221157 ಮೂಲಕ ಸಂಪರ್ಕಿಸಬಹುದು.

ಪದ್ಮಶ್ರೀಗೆ ಅರ್ಜಿ ಆಹ್ವಾನ

ಮಂಡ್ಯ, ಜೂ.22– 2023ನೇ ಸಾಲಿನ ಪದ್ಮ ಶ್ರೇಣಿಯ ಪ್ರಶಸ್ತಿಗೆ ಶಿಫಾರಸು ಮಾಡಲು ಸರ್ಕಾರ ಜು.5ರವರೆಗೆ ಕಾಲಾವಕಾಶ ನಿಗದಿಪಡಿಸಿದೆ. ಈ ಸಂಬಂಧ ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಕಲೆ, ಸಮಾಜ ಕಾರ್ಯ, ಸಾರ್ವಜನಿಕ ವ್ಯವಹಾರ, ವಿಜ್ಞಾನ, ತಂತ್ರಜ್ಞಾನ, ವ್ಯಾಪಾರ ಮತ್ತು ಕೈಗಾರಿಕೆ, ವೈದ್ಯಕೀಯ, ಸಾಹಿತ್ಯ ಮತ್ತು ಶಿಕ್ಷಣ, ನಾಗರಿಕ ಸೇವೆ ಹಾಗೂ ಕ್ರೀಡೆಯಲ್ಲಿ ಸಾಧನೆ ಮಾಡಿರುವ ಮಾಹನೀಯರಿಂದ ಪದ್ಮಶ್ರೀ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇಚ್ಛಿಸುವವರು 2 ಪುಟ ವಿವರಗಳೊಂದಿಗೆ ಕನ್ನಡ ಮತ್ತು ಆಂಗ್ಲಭಾಷೆಯಲ್ಲಿ ಸಿದ್ಧಪಡಿಸಿ ಜೂ.23ರಂದು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾ ಮಂದಿರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕಚೇರಿಗೆ ಖುದ್ದಾಗಿ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ಸಂಪರ್ಕಿಸಿ:08232–223197.

ದೇಶಕ್ಕೆ ಅಗ್ನಿಪಥ್ ಅಗತ್ಯ

ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಸಮರ್ಥನೆ



ಮದ್ದೂರು,ಜೂ.22(ಮೋಹನ್‌ರಾಜ್)– ಅಗ್ನಿಪಥ್ ಸೇನಾ ತುಕಡಿ ಪ್ರಸ್ತಾವನೆ ದೇಶಕ್ಕೆ ಅತ್ಯಂತ ಅಗತ್ಯವಿದ್ದು, ಯಾವುದೇ ವಿರೋಧವಿಲ್ಲದೆ ಇದಕ್ಕೆ ಅವಕಾಶ ಕಲ್ಪಿಸಬೇಕಿದೆ ಎಂದು ಬಿಜೆಪಿ ಮುಖಂಡರೂ ಆದ ಮಾಜಿ ಮುಖ್ಯಮಂತ್ರಿಗಳು ಎಸ್.ಎಂ.ಕೃಷ್ಣ ಸಮರ್ಥಿಸಿಕೊಂಡಿದ್ದಾರೆ. ತಾಲೂಕಿನ ಸೋಮನಹಳ್ಳಿಯ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಗ್ನಿಪಥ್ ಸೇರಿದಂತೆ ಹಲವು ಉಪಯುಕ್ತ ಯೋಜನೆಗಳ ಜಾರಿ ದೇಶಕ್ಕೆ ಅಗತ್ಯವಿದೆ ಎಂದರು.

ಮುಂದುವರೆದ ದೇಶಗಳಾದ ಅಮೆರಿಕ, ಇಂಗ್ಲೆಂಡ್ ಮತ್ತಿತರೆಡೆ ಪ್ರತಿಯೊಬ್ಬ 20 ವರ್ಷದ ನಾಗರಿಕನು 2 ವರ್ಷ ಕಡ್ಡಾಯ ಸೈನಿಕ ಶಿಕ್ಷಣ ಪಡೆಯುತ್ತಿದ್ದು ಅಮೆರಿಕದಲ್ಲೂ ಅಗ್ನಿಪಥ್‌ನಂತಹ ಯೋಜನೆ ಜಾರಿಯಲ್ಲಿರುವುದಾಗಿ ತಿಳಿಸಿದ ಅವರು ಮುಂದುವರೆದ ದೇಶಗಳು ಆದರ್ಶವನ್ನು ಗುರಿಯಾಗಿಸಿಕೊಂಡು ಮುಂದುವರೆದಿದ್ದು, ನಮ್ಮ ದೇಶದಲ್ಲೂ ವಿನೂತನ ಪ್ರಸ್ತಾವನೆಯಲ್ಲಿ ಯಾವುದೇ ರಾಜಕೀಯವಿಲ್ಲ ಆದ್ದರಿಂದ ಅದನ್ನು ಕಾರ್ಯರೂಪಕ್ಕೆ ತರಲು ಅವಕಾಶ ಕೊಡಬೇಕೆಂದರು.

ಸೈನಿಕ ವೃತ್ತಿಗೆ ಸೇರಿದವರು ನಾಲ್ಕು ವರ್ಷಗಳಾದ ಮೇಲೆ ನಿವೃತ್ತಿಯಾಗಲಿದ್ದು, ಅವರು ಬೇರೆ ಕಸುಬುಗಳನ್ನು ಮಾಡಲು ಅವಕಾಶವಿರುವ ಕಾರಣ ಅಗ್ನಿಪಥ ಯೋಜನೆ ಅವಶ್ಯಕತೆಯಿದೆ. ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವುದು ಏಕೆಂಬುದು ತಮಗೆ ಅರ್ಥವಾಗುತ್ತಿಲ್ಲ ಎಂದು ಅವರು ಹೇಳಿದರು.

ತಮ್ಮ ಸಹೋದರ ಎಸ್.ಎಂ.ಶಂಕರ್ ಅವರ ಪುತ್ರ ಎಸ್.ಗುರುಚರಣ್ ಮುಂದಿನ ವಿಧಾನಸಭಾ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಎಂದೇ ಬಿಂಬಿಸಲಾಗುತ್ತಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ತಾವು ಕುಟುಂಬದ ಕಾರ್ಯಕ್ರಮಕ್ಕೆ ಆಗಮಿಸಿದ್ದು ರಾಜಕೀಯ ಮಾತನಾಡಲು ಇಚ್ಛಿಸುವುದಿಲ್ಲ. ಆತನ ರಾಜಕೀಯ ಭವಿಷ್ಯ ಕ್ಷೇತ್ರದ ಜನರು ತೀರ್ಮಾನಿಸುತ್ತಾರೆ ಎಂದರು.

ಭೂ ವರಹನಾಥಸ್ವಾಮಿ ದರ್ಶನ ಪಡೆದ ಭವಾನಿ ರೇವಣ್ಣ



ಕೆ.ಆರ್.ಪೇಟೆ,ಜೂ.22(ಶ್ರೀನಿವಾಸ್)– ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಧರ್ಮಪತ್ನಿ, ಜಿಪಂ ಮಾಜಿ ಸದಸ್ಯೆ ಶ್ರೀಮತಿ ಭವಾನಿ ರೇವಣ್ಣ ಅವರು ಬುಧವಾರ ಕೆ.ಆರ್. ಪೇಟೆ ತಾಲೂಕಿನ ಪುರಾಣ ಪ್ರಸಿದ್ಧ ಭೂ ವರಹನಾಥಸ್ವಾಮಿ ಕ್ಷೇತ್ರಕ್ಕೆ ಭೇಟಿ ನೀಡಿ ಭಗವಂತನ ದರ್ಶನ ಪಡೆದು ಲೋಕಕಲ್ಯಾಣಾರ್ಥವಾಗಿ ವಿಶೇಷ ಪೂಜೆ ಸಲ್ಲಿಸಿದರು.

ದೇಶದಲ್ಲಿಯೇ ಅಪರೂಪದ್ದಾಗಿರುವ ಶ್ರೀ ಸಾಲಿಗ್ರಾಮ ಕೃಷ್ಣಶಿಲೆಯಲ್ಲಿ ನಿರ್ಮಿಸಲಾಗಿರುವ ಶ್ರೀ ಲಕ್ಷ್ಮೀ ಸಮೇತನಾಗಿ ನೆಲೆಸಿರುವ ಶ್ರೀ ಭೂ ವರಹಾನಾಥಸ್ವಾಮಿಯ ದರ್ಶನ ಪಡೆದು ಧನ್ಯತಾಭಾವ ಪಡೆದ ಭವಾನಿ ರೇವಣ್ಣ ಅವರು ಕಳೆದ ಐದಾರು ವರ್ಷಗಳಿಂದ ಶ್ರೀ ಕ್ಷೇತ್ರಕ್ಕೆ ಆಗಮಿಸಿ ಭಗವಂತನ ದರ್ಶನ ಮಾಡಬೇಕೆಂಬ ಮನದಾಸೆಯು ಇಂದು ಈಡೇರಿದೆ. ಶ್ರೀ ಕ್ಷೇತ್ರವು ಭಕ್ತರು ಮತ್ತು ದಾನಿಗಳ ಸಹಕಾರದಿಂದಲೇ ಅದ್ಭುತವಾಗಿ ಅಭಿವೃದ್ಧಿಯಾಗುತ್ತಿರುವುದನ್ನು ತಿಳಿದು ಸಂತೋಷವಾಗಿದೆ ಎಂದರು.

ಕ್ಷೇತ್ರಕ್ಕೆ ಆಗಮಿಸುತ್ತಿರುವ ಭಕ್ತರಿಗೆ ಧರ್ಮಸ್ಥಳ ಕ್ಷೇತ್ರದಂತೆ ಉಚಿತವಾಗಿ ಪ್ರಸಾದ ನೀಡಲಾಗುತ್ತಿದೆ. ಶ್ರೀ ಕ್ಷೇತ್ರದಲ್ಲಿ 25 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮೂರು ಪ್ರಾಕಾರಗಳ ಕಲ್ಲಿನ ದೇವಾಲಯ ಹಾಗೂ 172 ಅಡಿ ಎತ್ತರದ ರಾಜಗೋಪುರವು ಇನ್ನು ಮೂರು ವರ್ಷಗಳಲ್ಲಿ ನಿರ್ಮಾಣವಾಗಿ ಲೋಕಾರ್ಪಣೆ ಮಾಡಲು ಪರಕಾಲ ಮಠದ ಸ್ವಾಮಿಗಳು ಸಂಕಲ್ಪ ಮಾಡಿ ಕೆಲಸ ಆರಂಭಿಸಿರುವುದನ್ನು ತಿಳಿದು ರೋಮಾಂಚನವಾಯಿತು ಎಂದರು. ನಮ್ಮ ಕುಟುಂಬವೂ ದೇವಾಲಯದ ಅಭಿವೃದ್ಧಿಗೆ ಶಕ್ತ್ಯಾನುಸಾರ ಧನ ಸಹಾಯ ಮಾಡುತ್ತೇವೆ. ತಿರುಮಲ ತಿರುಪತಿಯ ಮಾದರಿಯಲ್ಲಿ ಭೂ ವರಹನಾಥಸ್ವಾಮಿ ಕ್ಷೇತ್ರ ಅಭಿವೃದ್ಧಿ ಆಗುತ್ತಿದೆ. ದೇವರ ದರ್ಶನ ಮಾಡಿ ನನಗೆ ಸಾರ್ಥಕತೆ ಭಾವನೆ ಮೂಡಿದೆ ಎಂದರು.

ಈ ಸಂದರ್ಭದಲ್ಲಿ ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಎಂ.ಬಿ. ಹರೀಶ್, ಬಸ್ ಕೃಷ್ಣೇಗೌಡ, ಹೆಚ್.ಟಿ.ಮಂಜು, ಡಾಲು ರವಿ, ಬಸ್ ಸಂತೋಷ್‌ಕುಮಾರ್, ಎ.ಎಂ. ಸಂಜೀವಪ್ಪ ಕುರುಬಹಳ್ಳಿ ನಾಗೇಶ್, ಸೋಮನಹಳ್ಳಿ ಭೋಜರಾಜು, ಪೂವನಹಳ್ಳಿ ರೇವಣ್ಣ, ಬಲ್ಲೇನಹಳ್ಳಿ ನಂದೀಶ್ ಉಪಸ್ಥಿತರಿದ್ದರು.

ಹಿರಿಯರನ್ನು ಗೌರವ, ಆದರದಿಂದ ನಡೆಸಿಕೊಳ್ಳಿ

ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಶ್ರೀಧರ್ ಸಲಹೆ



ಚಾಮರಾಜನಗರ, ಜೂ.22–ಹಿರಿಯ ನಾಗರಿಕರನ್ನು ವೃದ್ಧಾಶ್ರಮಗಳಿಗೆ ದೂಡದೆ ಗೌರವ, ಆದರದಿಂದ ನಡೆಸಿಕೊಳ್ಳುವಂತೆ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ್ ಸಲಹೆ ನೀಡಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೇ ಕೆಡಿಪಿ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಪಂ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ರಾಷ್ಟ್ರೀಯ ಹಿರಿಯ ನಾಗರಿಕರ ಸಹಾಯವಾಣಿ, ಗ್ರೀನ್ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆ, ನೆಹರು ಯುವ ಕೇಂದ್ರ, ರಾಷ್ಟ್ರೀಯ ಸೇವಾ ಯೋಜನೆ, ಮಕ್ಕಳ ಸಹಾಯವಾಣಿ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಹಿರಿಯ ನಾಗರಿಕರ ನಿಂದನೆ ತಡೆ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರ ಹಿರಿಯ ನಾಗರಿಕರ ಸಂರಕ್ಷಣೆಗಾಗಿ 2007ರಲ್ಲಿ ಕಾಯ್ದೆ ಜಾರಿಗೊಳಿಸಿದ್ದರೂ ಸಹ ಹಿರಿಯರಲ್ಲಿ ಕಾಯ್ದೆಯ ಅರಿವು ಇರುವುದಿಲ್ಲ. ಹಿರಿಯ ನಾಗರಿಕರಿಗೆ ಶಾಂತಿ, ನೆಮ್ಮದಿ, ಪ್ರೀತಿ, ಗೌರವ ನೀಡಿ ರಕ್ಷಣೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಹಿಂಸೆ, ದೌರ್ಜನ್ಯ ಅತಿಕ್ರಮಣ ಮಾಡದೇ ಹಿರಿಯರಿಗೆ ವೃದ್ಧಾಪ್ಯದಲ್ಲಿ ಕಾಳಜಿ ವಹಿಸಬೇಕು. ಅವರನ್ನು ಜಾಗೃತಗೊಳಿಸಬೇಕಾದ ಅಗತ್ಯವಿದೆ. ಹಿರಿಯರು ತಮ್ಮ ಬದುಕಿನ ಅಮೂಲ್ಯ ಸಮಯ, ಹಣವನ್ನು ವ್ಯರ್ಥ ಮಾಡದೇ ಮಕ್ಕಳ ಪಾಲನೆ, ಪೋಷಣೆಗೆ ಮೀಸಲಿಟ್ಟಿರುತ್ತಾರೆ. ವೃದ್ಧಾಪ್ಯದಲ್ಲಿ ಹಿರಿಯರನ್ನು ಮಕ್ಕಳಂತೆ ಪಾಲನೆ, ಪೋಷಣೆ ಮಾಡುವುದು ಪ್ರಜ್ಞಾವಂತರಾದ ಎಲ್ಲರ ಹೊಣೆ ಎಂದರು.

ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ನಾಗೇಶ್ ಮಾತನಾಡಿ, ಮಕ್ಕಳನ್ನು ಸಾಕಿ ಸಲುಹಿ ಸಮಾಜದಲ್ಲಿ ಅವರಿಗೆ ಉತ್ತಮ ಭವಿಷ್ಯ ಕಲ್ಪಿಸುವ ಹಿರಿಯರ ಶ್ರಮ ಶ್ಲಾಘನೀಯ. ಬೆಳೆದ ಮಕ್ಕಳು ತಂದೆ ತಾಯಿಯನ್ನು ಕಡೆಗಣಿಸುತ್ತಿರುವುದು ವಿಪರ್ಯಾಸ. ಸರ್ಕಾರಗಳು ಕೂಡ ಹಿರಿಯ ನಾಗರಿಕರ ಸೌಲಭ್ಯಗಳನ್ನು ಸಮಯಕ್ಕೆ ಸರಿಯಾಗಿ ತಲುಪುವಂತೆ ಕ್ರಮ ವಹಿಸಬೇಕು ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿ ಸುರೇಶ್ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ದಾಸ್ ಮಾತನಾಡಿದರು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರದ ಚಾಮರಾಜೇಶ್ವರ ದೇವಸ್ಥಾನದಿಂದ ಜಿಲ್ಲಾಡಳಿತ ಭವನದವರೆಗೆ ಹಿರಿಯ ನಾಗರಿಕರ ನಿಂದನೆ ತಡೆ ಕುರಿತು ಏರ್ಪಡಿಸಿದ್ದ ಜಾಗೃತಿ ಜಾಥಾಗೆ ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಶ್ರೀಧರ್ ಚಾಲನೆ ನೀಡಿದರು. ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಸಂಯೋಜಕಿ ಪಾರ್ವತಿ, ಗ್ರೀನ್ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆ ಕಾರ್ಯದರ್ಶಿ ಮಹದೇವಸ್ವಾಮಿ, ನಿರ್ದೇಶಕ ಎಂ.ಪಿ.ಪ್ರಭು, ಮಕ್ಕಳ ಸಹಾಯವಾಣಿಯ ಜಿಲ್ಲಾ ಸಂಯೋಜಕಿ ಲತಾ, ಎನ್‌ವೈಕೆ ಅಧಿಕಾರಿ ಗುರುರಾಜ್ ಇತರರು ಕಾರ್ಯಕ್ರಮದಲ್ಲಿದ್ದರು.

ಬ್ಯಾಡಮೂಡ್ಲು, ದೊಡ್ಡಕೆರೆ ಬಳಿ ಒಂಟಿ ಸಲಗ ಪ್ರತ್ಯಕ್ಷ



ಚಾಮರಾಜನಗರ, ಜೂ.22(ಎಸ್‌ಎಸ್)– ತಾಲೂಕಿನ ಬ್ಯಾಡಮೂಡ್ಲು, ದೊಡ್ಡಕೆರೆ ವ್ಯಾಪ್ತಿಯಲ್ಲಿ ಬುಧವಾರ ಒಂಟಿ ಸಲಗ ಪ್ರತ್ಯಕ್ಷವಾಗಿ ಆತಂಕ ಸೃಷ್ಟಿಸಿತು. ಯಳಂದೂರು ಭಾಗದಿಂದ ಸಲಗ ಬಂದಿದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ಹೇಳಿದ್ದು, ಅರಣ್ಯಕ್ಕೆ ಓಡಿಸುವುದಕ್ಕೆ ರಾತ್ರಿವರೆಗೂ ಪ್ರಯತ್ನ ಪಟ್ಟರು.

ಸಲಗ ಗುರುವಾರ ನಸುಕಿನ ಜಾವ 3.40ರ ಹೊತ್ತಿಗೆ ಬೂದಿತಿಟ್ಟುವಿನ ಮುಖ್ಯ ರಸ್ತೆಯಲ್ಲಿ ಸಾಗುತ್ತಿದ್ದ ದೃಶ್ಯ ಮನೆಯೊಂದರ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಮಧ್ಯಾಹ್ನ ಕರಿನಂಜನಪುರ ಸಮೀಪದ ದೊಡ್ಡ ಕೆರೆಯ ನೀರಿನಲ್ಲಿ ಸಲಗ ಕಂಡು ಬಂದಿತ್ತು. ನಂತರ ಬ್ಯಾಡಮೂಡ್ಲುವಿನತ್ತ ಸಾಗಿದ ಸಲಗ ಕೃಷಿ ಜಮೀನುಗಳಿಗೆ ನುಗ್ಗಿತು. ಸ್ಥಳೀಯರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಗದ್ದಲ ಮಾಡಿದ್ದರಿಂದ ಸಲಗ ಅತ್ತಿಂದಿತ್ತ ಓಡಾಡುತ್ತಿತ್ತು. ಸ್ಥಳಕ್ಕೆ ಬಂದ ಅರಣ್ಯ ಇಲಾಖೆ ಸಿಬ್ಬಂದಿ ಜನರನ್ನು ಚದುರಿಸಿ, ಎಚ್ಚರಿಕೆ ವಹಿಸಿದರು.

ಯಳಂದೂರು ಕಡೆಯಿಂದ ಈ ಸಲಗ ಬಂದಿದ್ದು, ಬ್ಯಾಡ ಮೂಡ್ಲು ಭಾಗದಲ್ಲಿದೆ. ಕಾಡಿಗೆ ಓಡಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಚಾಮರಾಜನಗರ ವಲಯ ಅರಣ್ಯಾಧಿಕಾರಿ ಅಭಿಲಾಷ್ ತಿಳಿಸಿದ್ದಾರೆ.

ಮಾದಪ್ಪನ ಭಕ್ತರ ಮೇಲೆ ಕಾಡುಹಂದಿ ದಾಳಿ: ನಾಲ್ವರಿಗೆ ಗಾಯ

ಹನೂರು, ಜೂ.22(ಸೋಮು)– ತಾಲೂಕಿನ ಮಲೆಮಹದೇಶ್ವರ ಬೆಟ್ಟದಲ್ಲಿ ಕಾಡುಹಂದಿಗಳು ದಾಳಿ ನಡೆಸಿದ ಪರಿಣಾಮ ನಾಲ್ವರು ಭಕ್ತರು ಗಾಯಗೊಂಡಿರುವ ಘಟನೆ ತಡರಾತ್ರಿ ಜರುಗಿದೆ.

ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಪಾಲಾರ್ ಪಟ್ಟಿ ಗ್ರಾಮದ ರಾಜ, ಬಾಬು ಬೆಂಗಳೂರಿನ ಹೊಸಪೇಟೆ ನಿವಾಸಿ ನರಸಿಂಹಮೂರ್ತಿ, ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಕುಲುಮೇದೊಡ್ಡಿ ಗ್ರಾಮದ ನಿಂಗಮ್ಮ ಕಾಡು ಹಂದಿ ದಾಳಿಯಿಂದ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದಾರೆ.

ಮಲೆಮಹದೇಶ್ವರಬೆಟ್ಟದ ರಂಗ ಮಂದಿರದಲ್ಲಿ ವಾಸ್ತವ್ಯ ಹೂಡಿದ್ದ ಭಕ್ತರ ಮೇಲೆ ಮಂಗಳವಾರ ತಡರಾತ್ರಿ ಕಾಡು ಹಂದಿಗಳು ಏಕಾಏಕಿ ದಾಳಿ ನಡೆಸಿವೆ. ಪರಿಣಾಮ ತೀವ್ರವಾಗಿ ಗಾಯಗೊಂಡಿದ್ದ ಭಕ್ತರನ್ನು ಪೊಲೀಸರು ಹಾಗೂ ಪ್ರಾಧಿಕಾರದ ಸಿಬ್ಬಂದಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ಕಳುಹಿಸಿದರು. ಈ ಸಂಬಂಧ ಮಲೆಮಹದೇಶ್ವರ ಬೆಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ರಮ ವಹಿಸದ ಅರಣ್ಯ ಇಲಾಖೆ ಅಧಿಕಾರಿಗಳು: ಮಲೆ ಮಾದೇಶ್ವರ ಬೆಟ್ಟದಾದ್ಯಂತ ಭಕ್ತರು ಹಾಗೂ ಗ್ರಾಮಸ್ಥರ ಮೇಲೆ ಕಾಡುಹಂದಿ ದಾಳಿ ಪ್ರಕರಣಗಳು ನಿರಂತರವಾಗಿ ನಡೆಯುತ್ತಿದ್ದರೂ ಸಹ ಕಾಡು ಹಂದಿಗಳನ್ನು ನಿಯಂತ್ರಿಸುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ವಿಫಲರಾಗಿದ್ದು, ಕಾಡು ಹಂದಿಗಳನ್ನು ನಿಯಂತ್ರಣಕ್ಕೆ ಮುಂದಾಗದಿದ್ದರೆ ಪ್ರತಿಭಟಿಸುವುದಾಗಿ ಮಲೆ ಮಹಮದೇಶ್ವರ ಬೆಟ್ಟ ಗ್ರಾಮದ ನಿವಾಸಿಗಳು ಎಚ್ಚರಿಸಿದ್ದಾರೆ.

ಇಂದು ಮಹದೇಶ್ವರಬೆಟ್ಟದಲ್ಲಿ ಸಾಮೂಹಿಕ ವಿವಾಹ

ಚಾಮರಾಜನಗರ, ಜೂ.22–ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಿಂದ ಉಚಿತ ಸಾಮೂಹಿಕ ವಿವಾಹ ಮಹೋತ್ಸವ ಕಾರ್ಯಕ್ರಮವನ್ನು ಜೂ.23 ರಂದು ಬೆಳಗ್ಗೆ 8 ರಿಂದ 9.10 ಗಂಟೆಯವರೆಗೆ ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನದ ರಂಗಮಂದಿರ ಆವರಣದಲ್ಲಿ ಆಯೋಜಿಸಲಾಗಿದೆ.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರಸ್ವಾಮೀಜಿ ಸಾನ್ನಿಧ್ಯಹಾಗೂ ಸಾಲೂರು ಮಠದ ಪ್ರಣವ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯಲಿದೆ. ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಾಮೂಹಿಕ ವಿವಾಹ ಮಹೋತ್ಸವಕ್ಕೆ ಚಾಲನೆ ನೀಡುವರು. ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಉಪಸ್ಥಿತರಿದ್ದು, ನೂತನ ವಧು–ವರರಿಗೆ ಮಾಂಗಲ್ಯ ವಿತರಿಸುವರು.

ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರು ಹಾಗೂ ಪ್ರಾಧಿಕಾರದ ಉಪಾಧ್ಯಕ್ಷೆ ಶಶಿಕಲಾ ಜೊಲ್ಲೆ ಅವರು ನೂತನ ವಧು–ವರರಿಗೆ ವಸ್ತ್ರ ವಿತರಿಸುವರು. ಶಾಸಕ ಆರ್.ನರೇಂದ್ರ ಅಧ್ಯಕ್ಷತೆ ವಹಿಸುವರು. ಸಂಸದ ವಿ. ಶ್ರೀನಿವಾಸಪ್ರಸಾದ್ ನೆನಪಿನ ಕಾಣಿಕೆ ವಿತರಿಸುವರು. ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎನ್.ಮಹೇಶ್, ಸಿ.ಎಸ್.ನಿರಂಜನಕುಮಾರ್, ಕೆ.ಟಿ.ಶ್ರೀಕಂಠೇಗೌಡ, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಹದೇಶ್ವರಬೆಟ್ಟ ಗ್ರಾಪಂ ಅಧ್ಯಕ್ಷ ಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ವರ್ಗಾವಣೆಗೊಂಡ ಪಪಂ ಆರೋಗ್ಯಾಧಿಕಾರಿಗೆ ಬೀಳ್ಕೊಡುಗೆ



ಯಳಂದೂರು, ಜೂ.22(ವಿ.ನಾಗರಾಜು)–ಪಟ್ಟಣ ಪಂಚಾಯಿತಿಯಲ್ಲಿ ಆರೋಗ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿ ಬಡ್ತಿ ಪಡೆದು ವರ್ಗಾವಣೆಗೊಂಡ ಮಹೇಶ್‌ಕುಮಾರ್ ಅವರನ್ನು ಪಪಂನ ಅಧ್ಯಕ್ಷ–ಉಪಾಧ್ಯಕ್ಷರು, ಸದಸ್ಯರು ಹಾಗೂ ನೌಕರರು ಬುಧವಾರ ನಡೆದ ಸಮಾರಂಭದಲ್ಲಿ ಹೃದಯಸ್ಪರ್ಶಿಯಾಗಿ ಬೀಳ್ಕೊಟ್ಟರು.

ಈ ಸಂದರ್ಭದಲ್ಲಿ ಮುಖ್ಯಾಧಿಕಾರಿ ಮಲ್ಲೇಶ್ ಮಾತನಾಡಿ, ಮಹೇಶ್‌ಕುಮಾರ್‌ಗೆ ಮತ್ತಷ್ಟು ಯಶಸ್ಸು ಸಿಗಲಿ ಎಂದು ಹಾರೈಸಿದರು. ಪಪಂ ಅಧ್ಯಕ್ಷೆ ಪ್ರಭಾವತಿ ರಾಜಶೇಖರ್, ಪಪಂ ಉಪಾಧ್ಯಕ್ಷೆ ಲಕ್ಷ್ಮಿ ಮಲ್ಲು, ಸದಸ್ಯರಾದ ಮಹೇಶ್, ವೈ.ಜಿ.ರಂಗನಾಥ ನಾಮ ನಿರ್ದೇಶಿತ ಸದಸ್ಯ ಮಹೇಶ್ ಮಾತನಾಡಿದರು. ಪಪಂ ಸದಸ್ಯರಾದ ಮಹದೇವನಾಯಕ, ಕೆ.ಮಲ್ಲಯ್ಯ, ಮಂಜು, ಬಿ.ರವಿ ರಾಜಸ್ವ ನಿರೀಕ್ಷಕ ನಂಜುಂಡಶೆಟ್ಟಿ, ಪರಶಿವಮೂರ್ತಿ, ಲಕ್ಷ್ಮಿ, ಜಯಲಕ್ಷ್ಮಿ, ರೇಖಾ, ವಿಜಯ, ಮಲ್ಲಿಕಾರ್ಜುನ ಮುಖಂಡರಾದ ನಿಂಗರಾಜು, ಮಲ್ಲು, ಚಂದ್ರು.ರಫ. ಸೇರಿದಂತೆ ಅನೇಕರಿದ್ದರು.

ಬೆಳ್ಳಿ ಪದಕ ಪಡೆದ ಹಾಕಿ ಕ್ರೀಡಾಪಟುಗಳಿಗೆ ಸನ್ಮಾನ



ಮಡಿಕೇರಿ, ಜೂ.22– ಸತತ ಪ್ರಯತ್ನ, ನಿರ್ದಿಷ್ಟ ಗುರಿ, ಕಠಿಣ ಶ್ರಮ ಇದ್ದರೆ ಮಾತ್ರ ಕ್ರೀಡೆಯಲ್ಲಿ ಯಶಸ್ಸು ಸಾಧಿಸಲು ಸಾಧ್ಯ. ಆ ನಿಟ್ಟಿನಲ್ಲಿ ಹಾಕಿ ಕ್ರೀಡಾಕೂಟದಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುವಂತಾಗಬೇಕು ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಕರೆ ನೀಡಿದ್ದಾರೆ.

ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಇತ್ತೀಚೆಗೆ ನಡೆದ ಭಾರತೀಯ ಹಾಕಿ ಹಿರಿಯ ಬಾಲಕಿಯರ ವಿಭಾಗದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ 33 ವರ್ಷಗಳ ನಂತರ ಬೆಳ್ಳಿ ಪದಕ ಪಡೆದಿರುವ ಕ್ರೀಡಾಪಟುಗಳನ್ನು ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಭಾರತೀಯ ಹಾಕಿ ಹಿರಿಯ ಬಾಲಕಿಯರ ವಿಭಾಗದಲ್ಲಿ ಬೆಳ್ಳಿ ಪದಕ ಪಡೆದಿರುವುದು ಶ್ಲಾಘನೀಯ. ತಾವು ಇತರರಿಗೆ ಆದರ್ಶವಾಗಿದ್ದು, ಅದನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಬೇಕು. ರಾಜ್ಯ ತಂಡವನ್ನು ಪ್ರತಿನಿಧಿಸಿ ಬೆಳ್ಳಿ ಪದಕ ಪಡೆದ ಕ್ರೀಡಾಪಟುಗಳು ಮುಂದಿನ ದಿನಗಳಲ್ಲಿ ಕಠಿಣ ಶ್ರಮ, ಸತತ ಪ್ರಯತ್ನದಿಂದ ಇನ್ನೂ ಮಹತ್ತರ ಸಾಧನೆ ಮಾಡಬೇಕು ಎಂದು ಅವರು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ. ಅಯ್ಯಪ್ಪ ಅವರು ಮಾತನಾಡಿ, ಹಾಕಿ ಕ್ರೀಡೆಯಲ್ಲಿ ವೈಯಕ್ತಿಕ ಪರಿಶ್ರಮದ ಜೊತೆಗೆ ತಂಡದ ಪರಿಶ್ರಮವು ಬಹಳ ಮುಖ್ಯ ಪಾತ್ರ ವಹಿಸುತ್ತದೆ. ಒಂದು ತಂಡದ ಯಶಸ್ಸಿನ ಹಿಂದೆ ಗುರುಹಿರಿಯರ ಸಲಹೆ ಮಾರ್ಗದರ್ಶನ ಮುಖ್ಯವಾಗಿದೆ ಎಂದರು.

ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ್ ಅವರು ಮಾತನಾಡಿ, ಐತಿಹಾಸಿಕ ಗೆಲುವನ್ನು ಸಾಧಿಸಿದ ಕ್ರೀಡಾಪಟುಗಳಿಗೆ ಹಾರೈಸಿದ ಅವರು ಮುಂದಿನ ದಿನಗಳಲ್ಲಿ ಹಾಕಿ ಕ್ರೀಡೆಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸುವಂತಾಗಲಿ ಎಂದು ಅವರು ಹೇಳಿದರು.

ಮಾಜಿ ಸೈನಿಕ ಜಯಚಿನ್ನಪ್ಪ ಅವರು ಮಾತನಾಡಿ, ಕ್ರೀಡೆಯಲ್ಲಿ ಆತ್ಮವಿಶ್ವಾಸ, ಪರಿಶ್ರಮ ಸಾಧಿಸುವ ಗುರಿ ಬಹಳ ಮುಖ್ಯ. ಸಮರ್ಪಣೆ, ನಿರ್ಣಯ, ಭಕ್ತಿ ಈ ಮೂರು ಅಂಶಗಳನ್ನು ಹೊಂದಿದರೆ ಮಾತ್ರ ಕ್ರೀಡೆಯಲ್ಲಿ ಯಶಸು ಸಾಧಿಸಲು ಸಾಧ್ಯ ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಜಿ.ಎಸ್.ಗುರುಸ್ವಾಮಿ, ತಂಡದ ವ್ಯವಸ್ಥಾಪಕರಾದ ರಾಕಿ ಪೂವಣ್ಣ ಮಾತನಾಡಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ನಂಜುಂಡೇಗೌಡ, ಚೆಯ್ಯಂಡ ಸತ್ಯ, ಕೊಡಗೆ ಕ್ರೀಡಾ ಶಾಲೆಯ ಆಡಳಿತಾಧಿಕಾರಿ ಜಯರಾಮ, ಹಾಕಿ ತರಬೇತುದಾರರಾದ ಕೆ.ಕೆ.ಬಿಂದಿಯಾ, ಸುಬ್ಬಯ್ಯ, ಜಿ.ಸುರೇಶ, ಕೊಡವ ಹಾಕಿ ಅಕಾಡೆಮಿ ಸದಸ್ಯರು ಇತರರು ಇದ್ದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಜಿ.ಎಸ್. ಗುರುಸ್ವಾಮಿ ಸ್ವಾಗತಿಸಿದರು, ಕೊಡಿಗೆ ಕ್ರೀಡಾ ಶಾಲೆಯ ಮುಖ್ಯೋ ಪಾಧ್ಯಾಯ ಬಿ.ಟಿ.ದೇವಕುಮಾರ ನಿರೂಪಿಸಿದರು, ಶಿಕ್ಷಕ ಎಂ.ಡಿ.ಮುರಳಿ ವಂದಿಸಿದರು.

ಮಾದರಿ ಹೊದ್ದೂರು ಗ್ರಾಪಂಗೆ ಅರುಣಾಚಲ ಪ್ರದೇಶದ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳ ಭೇಟಿ



ಮಡಿಕೇರಿ, ಜೂ.22–'ಸ್ವರಾಜ್ ಸೌಧ' ಸಭಾಂಗಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳ ಮೂಲಕ ಮಾದರಿ ಗ್ರಾಪಂ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಹೊದ್ದೂರು ಗ್ರಾಪಂಗೆ ಅರುಣಾಚಲ ಪ್ರದೇಶದ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳ ತಂಡ ಭೇಟಿ ನೀಡಿತು.

ಅರುಣಾಚಲ ಪ್ರದೇಶದ ಪಂಚಾಯತ್ ರಾಜ್ ವಿಭಾಗದ ಸಹಾಯಕ ನಿರ್ದೇಶಕ ಸುಂಕ್ವಾಡ ಬಂಗೌನ್ಸ್ಗ ನೇತೃತ್ವದ ಪಂಚಾಯತ್ ರಾಜ್‌ನ 32 ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳ ತಂಡ ಭೇಟಿ ನೀಡಿ ಹಲವು ಮಾಹಿತಿಗಳನ್ನು ಸಂಗ್ರಹಿಸಿತು. ಕರ್ನಾಟಕ ಪಂಚಾಯತ್ ರಾಜ್ ವ್ಯವಸ್ಥೆ ಕುರಿತು ಅಧ್ಯಯನ ನಡೆಸುವಲ್ಲಿ ಸಕ್ರಿಯವಾಗಿರುವ ತಂಡ ಹೊದ್ದೂರು ಗ್ರಾ.ಪಂ.ನ ಪ್ರಗತಿ ಕುರಿತು ಮೆಚ್ಚುಗೆ ವ್ಯಕ್ತಪಡಿಸಿತು.

ಗ್ರಾಪಂ ಅಧ್ಯಕ್ಷೆ ಪಿ.ಎ.ಕುಸುಮಾವತಿ, ಉಪಾಧ್ಯಕ್ಷೆ ಸರಸು, ಅಭಿವೃದ್ಧಿ ಅಧಿಕಾರಿ ಅಬ್ದುಲ್ಲಾ ಮತ್ತಿತರರು ಉಪಸ್ಥಿತರಿದ್ದರು.

ವಿ.ಪೇಟೆಯಲ್ಲಿ ಅಂತರರಾಷ್ಟ್ರೀಯ ಯೋಗ ದಿನ ಆಚರಣೆ



ವಿರಾಜಪೇಟೆ, ಜೂ.22– ಮಾನವನ ದೈಹಿಕ, ಮಾನಸಿಕ ಆರೋಗ್ಯ ಹಾಗೂ ಸಾಧನೆಯ ಪರಸ್ಪರ ಸಂಬಂಧವನ್ನು ಯೋಗ ಹೊಂದಿದ್ದು, ಯೋಗದಿಂದ ಬದುಕಿನಲ್ಲಿ ಯಶಸ್ಸು ಸಾಧ್ಯ ಎಂದು ಗೋಣಿಕೊಪ್ಪಲು ಕಾವೇರಿ ಕಾಲೇಜಿನ ಪ್ರಾಂಶುಪಾಲರಾದ ಉಷಾಲತಾ ಅಭಿಪ್ರಾಯಪಟ್ಟಿದ್ದಾರೆ.

ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ವಿರಾಜಪೇಟೆ ಶ್ರೀ ಕಾವೇರಿ ಯೋಗ ಕೇಂದ್ರದ 23ನೇ ವಾರ್ಷಿಕೋತ್ಸವದ ಅಂಗವಾಗಿ ಪಟ್ಟಣದ ಅಪ್ಪಯ್ಯಸ್ವಾಮಿ ರಸ್ತೆಯಲ್ಲಿನ ಕಾವೇರಿ ಆಶ್ರಮದಲ್ಲಿ ಹಮ್ಮಿಕೊಂಡಿದ್ದ ಯೋಗ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಯೋಗದಿಂದ ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಮಾನಸಿಕ ಹಾಗೂ ದೈಹಿಕವಾಗಿ ಆರೋಗ್ಯ ವಂತನಾಗಿರುವ ವ್ಯಕ್ತಿಯು ಜೀವನದಲ್ಲಿ ಸಾಧನೆ ಮಾಡಲು ಸಾಧ್ಯ ಎಂದರು.

ವೈದ್ಯರು, ಪಕ್ಷಿ ತಜ್ಞ ಡಾ.ನರಸಿಂಹನ್ ಮಾತನಾಡಿ, ಕ್ಷಣಿಕವಾದ ಮಾನವನ ಬದುಕಿನಲ್ಲಿ ಆಧ್ಯಾತ್ಮಿಕತೆ ಹಾಗೂ ಆಧ್ಯಾತ್ಮಿಕ ಆರೋಗ್ಯ ಮುಖ್ಯವಾಗಿದೆ. ಮಾನವನ ಬದುಕಿನ ಅರ್ಥವನ್ನು ಕಂಡುಕೊಳ್ಳಲು ಪ್ರತಿಯೊಬ್ಬರು ಪ್ರಯತ್ನಿಸಬೇಕು. ಯೋಗವು ಜೀವನ ಶೈಲಿಯಾದಾಗ ಪರಸ್ಪರ ಸಹಕಾರ, ಸ್ನೇಹ, ಪ್ರೀತಿ ಸಮಾಜದಲ್ಲಿ ವೃದ್ಧಿಸುತ್ತದೆ ಎಂದರು. ವಿರಾಜಪೇಟೆ ಸಾರ್ವಜನಿಕ ಆಸ್ಪತ್ರೆಯ ಡಾ.ಹೇಮಪ್ರಿಯ ಅವರು ಮಾತನಾಡಿ, ಬದುಕಿನಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳಲು ಯೋಗ ನೆರವಾಗುತ್ತದೆ ಎಂದರು.

ಪ್ರಜಾಪಿತ ಬ್ರಹ್ಮಕುಮಾರಿ ಪೀಠದ ವಿರಾಜಪೇಟೆ ಘಟಕದ ಸಂಚಾಲಕರಾದ ಕಮಲ ಅವರು ರಾಜಯೋಗದ ಮಹತ್ವದೊಂದಿಗೆ ಆತ್ಮದ ಪ್ರಾಮುಖ್ಯತೆಯ ಕುರಿತು ಮಾತನಾಡಿದರು. ವೇದಿಕೆಯಲ್ಲಿ ಕಾವೇರಿ ಆಶ್ರಮದ ಗುರುಗಳಾದ ಆತ್ಮಾನಂದ ಸ್ವಾಮೀಜಿ, ಹಿರಿಯ ಯೋಗಪಟುಗಳಾದ ಬಿದ್ದಂಡ ಗಣಪತಿ ಹಾಗೂ ಯೋಗ ಗುರು ಸೀತಾರಾಂ ರೈ ಅವರು ಉಪಸ್ಥಿತರಿದ್ದರು. ಗಾನವಿ ಹಾಗೂ ಸಿಂಚನ ಪ್ರಾರ್ಥಿಸಿದರು.

ಪಾಲಿಬೆಟ್ಟದಲ್ಲಿ ಮಣ್ಣು ಉಳಿಸಿ ಅಭಿಯಾನ

ಗೋಣಿಕೊಪ್ಪ, ಜೂ.22– ಪಾಲಿಬೆಟ್ಟ ಚೆಶೈರ್ ಹೋಮ್ ವಿಶೇಷ ಶಾಲೆಯಲ್ಲಿ ಮಣ್ಣು ಉಳಿಸಿ ಅಭಿಯಾನ ಕಾರ್ಯಕ್ರಮ ನಡೆಯಿತು. ಶಾಲಾ ಸಿಬ್ಬಂದಿ ಕಾವೇರಿ ತಾಯಿಯ ಕುರಿತು ಹಾಡಿದರು. ವಿಶೇಷ ಮಕ್ಕಳು ಮಣ್ಣು ಉಳಿಸಿ ಕುರಿತ ಕಿರು ನಾಟಕವನ್ನು ಪ್ರದರ್ಶಿಸಿದರು. ನೃತ್ಯ ಮಾಡಿ ಸಂಭ್ರಮಿಸಿದರು. ಮಣ್ಣು ಉಳಿಸಿ ಅಭಿಯಾನದಲ್ಲಿ ತೊಡಗಿರುವ ಸದ್ಗುರು ಜಗ್ಗಿವಾಸುದೇವ್ ಅವರ ವೇಷ ತೊಟ್ಟು ವಿದ್ಯಾರ್ಥಿ ಧೀರಜ್ ಗಮನ ಸೆಳೆದರು.

ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ ಮುಖ್ಯಸ್ಥ ಡಾ. ಚೆಪ್ಪುಡೀರ ಜಿ. ಕುಶಾಲಪ್ಪ ಮಾತನಾಡಿ, ಮಣ್ಣಿನ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಮಣ್ಣು ರಕ್ಷಿಸಿಕೊಂಡು ನಮ್ಮ ಜೀವನವನ್ನು ಸಾರ್ಥಕತೆಗೊಳಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಚೆಶೈರ್ ಹೋಮ್ ವಿಶೇಷ ಶಾಲೆ ಆಡಳಿತ ಮಂಡಳಿ ಖಜಾಂಚಿ ಡಾ. ಅಜ್ಜಿನಿಕಂಡ ಗಣಪತಿ ಮಾತನಾಡಿದರು. ಸಂಸ್ಥೆ ಅಧ್ಯಕ್ಷೆ ಗೀತಾ ಚೆಂಗಪ್ಪ, ಉಪಾಧ್ಯಕ್ಷರಾದ ಮನೀತ ರಾಮಸ್ವಾಮಿ, ಕಾರ್ಯದರ್ಶಿ ಆಶಾ ಸುಬ್ಬಯ್ಯ, ಮುಖ್ಯ ಶಿಕ್ಷಕ ಶಿವರಾಜ್, ಸ್ವಯಂ ಸೇವಕರಾದ ಲೀನಾ, ಪಂಚು, ಅಖಿಲ್, ಕರುಂಬಯ್ಯ ಇದ್ದರು.



ಸದ್ಗುರು ಜಗ್ಗಿವಾಸುದೇವ್ ವೇಷ ತೊಟ್ಟು ಗಮನ ಸೆಳೆದ ವಿದ್ಯಾರ್ಥಿ.

ಮೈಸೂರು ಮಿತ್ರ

ಜೂ.26ರವರೆಗೂ ಡಿಜಿಟಲ್ ವಸ್ತುಪ್ರದರ್ಶನ ವೀಕ್ಷಣೆಗೆ ಅವಕಾಶ

ಮೈಸೂರು, ಜೂ.22– ಜಿಲ್ಲಾಡಳಿತ ಹಾಗೂ ಆಯುಷ್ ಇಲಾಖೆ ವತಿಯಿಂದ ಮೈಸೂರು ಅರಮನೆ ಬಳಿಯ ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಯೋಗಕ್ಕೆ ಸಂಬಂಧಪಟ್ಟ ಮಾಹಿತಿಯ ಪ್ರಾತ್ಯಕ್ಷಿಕೆ ಒಳಗೊಂಡ ಡಿಜಿಟಲ್ ವಸ್ತು ಪ್ರದರ್ಶನವನ್ನು ಸಾರ್ವಜನಿಕರಿಂದ ಹೆಚ್ಚು ಸ್ಪಂದನೆ ಬಂದ ಹಿನ್ನಲೆಯಲ್ಲಿ ಜೂ.26 ಭಾನುವಾರದ ವರೆಗೂ ಸಾರ್ವಜನಿಕ ವೀಕ್ಷಣೆಗೆ ವಸ್ತುಪ್ರದರ್ಶನಕ್ಕೆ ಅವಕಾಶ ನೀಡಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ವಸ್ತುಪ್ರದರ್ಶನದ ವಿಕ್ಷಣೆಗೆ ಆಗಮಿಸಬೇಕಾಗಿ ಪ್ರಕಟಣೆಯಲ್ಲಿ ತಿಳಿಸಿದೆ.

ಒಂದನೇ ಪುಟದಿಂದ

ಶೇ.50 ತೆರಿಗೆ ವಿನಾಯ್ತಿ

ಮಾಡುವವರಿಗೆ ನಕ್ಷೆ ಅನುಮೋದನೆಗಾಗಿ ಪ್ರಾಧಿಕಾರದ ಸಭೆಗೆ ಕಾಯುವ ಬದಲು ಆಯುಕ್ತರ ಹಂತದಲ್ಲೇ ಇತ್ಯರ್ಥಗೊಳಿಸುವುದು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾದ ಕಾರಣ ಆಯುಕ್ತರಿಗೆ ಪ್ಲಾನ್ ಅನುಮೋದನೆ ಅಧಿಕಾರ ನೀಡಲಾಯಿತು.

2 ಕಡೆ ಮಾತ್ರ ಗುಂಪು ಮನೆ: ಕೈಗೆಟಕುವ ದರದಲ್ಲಿ ಗುಂಪು ಮನೆ ನೀಡುವ ಯೋಜನೆಗೆ 3 ಕಡೆ ಗುರುತಿಸಲಾಗಿತ್ತಾದರೂ, ಒಂದೆಡೆ ಮಧ್ಯೆ ರಾಜ ಕಾಲುವೆ ಹಾದು ಹೋಗಿರುವುದರಿಂದ ಉಳಿದ ಎರಡು ಕಡೆ ಗುಂಪು ಮನೆ ನಿರ್ಮಿಸಲು ನಿರ್ಧರಿಸಲಾಯಿತು.

ಪೆರಿಫೆರಲ್ ರಸ್ತೆಗೆ ಡಿಪಿಆರ್: ಉದ್ದೇಶಿತ ಪೆರಿಫೆರಲ್ ರಿಂಗ್ ರೋಡ್ ಯೋಜನೆಯ ಕಾರ್ಯಸಾಧ್ಯತಾ ವರದಿ ಪಡೆದು ಡಿಪಿಆರ್ ತಯಾರಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಲು ಮುಡಾ ಸಭೆಯು ನಿರ್ಧರಿಸಿದೆ. ಕೆಟ್ಟು ನಿಂತಿರುವ ರಿಂಗ್ ರಸ್ತೆ ಬೀದಿ ದೀಪ ರಿಪೇರಿಗಾಗಿ ಮೈಸೂರು ಮಹಾನಗರ ಪಾಲಿಕೆಗೆ 12 ಕೋಟಿ ರೂ. ಅನುದಾನ ಬಿಡುಗಡೆ ಮಾಡಲು ಪ್ರಾಧಿಕಾರ ತೀರ್ಮಾನಿಸಿತು.

ನಿವೇಶನಗಳ ಸ್ವಚ್ಛತೆ: ಮಾಲೀಕರಿಂದ ಸಂಗ್ರಹಿಸುತ್ತಿರುವ ಖಾಲಿ ನಿವೇಶನಗಳ ಸ್ವಚ್ಛತಾ ಶುಲ್ಕದಲ್ಲಿ ವರ್ಷಕ್ಕೆ 2 ಬಾರಿ ಸ್ವಚ್ಛತೆ ಮಾಡಬೇಕೆಂದು ಸಭೆಯು ನಿರ್ಧರಿಸಿದೆ. ಮುಡಾದಿಂದ ಸ್ವಚ್ಛತೆ ಮಾಡುತ್ತಿಲ್ಲ ಎಂದು ಸಾರ್ವಜನಿಕರು ಆರೋಪಿಸುತ್ತಿರುವುದರಿಂದ ಶುಲ್ಕ ವಸೂಲಿಯನ್ನೇ ಕೈಬಿಡಬೇಕೆಂದು ಕೆಲ ಸದಸ್ಯರು ಅಭಿಪ್ರಾಯಪಟ್ಟರಾದರೂ, ಕಡೆಗೆ ವರ್ಷಕ್ಕೆರಡು ಬಾರಿ ನಿವೇಶನಗಳನ್ನು ಸ್ವಚ್ಛಗೊಳಿಸಲು ನಿರ್ಧರಿಸಲಾಯಿತು.

ಕುಡಿಯುವ ನೀರಿಗೆ 150 ಕೋಟಿ: ಕಬಿನಿಯಿಂದ ಮೈಸೂರು ನಗರಕ್ಕೆ ಕುಡಿಯುವ ನೀರು ಪೂರೈಸುವ 2ನೇ ಹಂತದ ಬಿದರಗೂಡು ಯೋಜನೆ ಅನುಷ್ಠಾನಕ್ಕೆ 150 ಕೋಟಿ ರೂ. ಮಂಜೂರಾತಿಗೆ ಮುಡಾ ಸಭೆಯು ಒಪ್ಪಿಗೆ ನೀಡಿದೆ. ಸದಸ್ಯರಾದ ಜಿ.ಟಿ. ದೇವೇಗೌಡ, ಎಸ್.ಎ.ರಾಮದಾಸ್, ಎಲ್. ನಾಗೇಂದ್ರ, ಬಿ. ಹರ್ಷವರ್ಧನ್, ಮರಿತಿಬ್ಬೇಗೌಡ, ಕೆ.ಟಿ.ಶ್ರೀಕಂಠೇಗೌಡ, ಸಿ.ಎನ್. ಮಂಜೇಗೌಡ, ಡಾ. ತಿಮ್ಮಯ್ಯ, ಎಸ್‌ಬಿಎಂ ಮಂಜು, ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್, ಸೂಪರಿಂಟೆಂಡೆಂಟ್ ಇಂಜಿನಿಯರ್ ಶಂಕರ್ ಸೇರಿದಂತೆ ಹಲವರು ಸಭೆಯಲ್ಲಿ ಹಾಜರಿದ್ದರು.

ಸರ್ಕಾರ ಪತನ ಸನ್ನಿಹಿತ

ಸೇರಿ ಶಿವಸೇನೆಯ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಏಕನಾಥ್ ಶಿಂಧೆ ಅವರನ್ನು ಆಯ್ಕೆ ಮಾಡಿ, ನಿರ್ಣಯವನ್ನು ರಾಜ್ಯಪಾಲರಿಗೆ ರವಾನಿಸಿದ್ದಾರೆ. ಜೊತೆಗೆ ಶಿವಸೇನಾ ಶಾಸಕ ಸುನಿಲ್ ಪ್ರಭು ಅವರನ್ನು ಮುಖ್ಯ ಸಚೇತಕ ಸ್ಥಾನದಿಂದ ತೆಗೆದುಹಾಕಿ ಭರತ್ ಗೊಗಾವಾಲೆ ಅವರನ್ನು ನೂತನ ಮುಖ್ಯ ಸಚೇತಕರನ್ನಾಗಿ ನೇಮಿಸಿ ಕೊಂಡಿದ್ದಾರೆ. ಅಲ್ಲದೆ ಇಂದು ಸಂಜೆ ಉದ್ಧವ್ ಠಾಕ್ರೆ ಕರೆದಿದ್ದ ತುರ್ತು ಶಾಸಕಾಂಗ ಪಕ್ಷದ ಸಭೆ ಕಾನೂನುಬಾಹಿರ ಎಂದು ಘೋಷಿಸಿದ್ದಾರೆ. ಮಹಾ ವಿಕಾಸ್ ಅಘಾಡಿ (ಎಂವಿಎ) ಮೈತ್ರಿಕೂಟದ 169 ಶಾಸಕರ ಬೆಂಬಲದೊಂದಿಗೆ ಉದ್ಧವ್ ಠಾಕ್ರೆ ಸಿಎಂ ಸ್ಥಾನಕ್ಕೇರಿದ್ದರು. ಇದೀಗ ಶಿವಸೇನೆಯ 56 ಶಾಸಕರ ಪೈಕಿ 38 ಶಾಸಕರು ಬಂಡಾಯ ನಾಯಕ ಏಕನಾಥ್ ಶಿಂಧೆ ಜೊತೆ ತೆರಳಿರುವುದರಿಂದ ಶಿವಸೇನೆ ಬಲ 18ಕ್ಕೆ ಕುಸಿದಿದೆ. ಏಕನಾಥ್ ಶಿಂಧೆ ಹೇಳುತ್ತಿರುವಂತೆ ಅವರೊಂದಿಗೆ 46 ಶಾಸಕರು ಇದ್ದ ಪಕ್ಷದಲ್ಲಿ ಶಿವಸೇನಾ ಬಲ ಕೇವಲ 10ಕ್ಕೆ ಹಾಗೂ ಎಂ.ವಿ.ಎ. ಬಲ 123ಕ್ಕೆ ಕುಸಿಯಲಿದೆ. ಬಂಡಾಯ ಶಾಸಕರು ಬಿಜೆಪಿ ಜೊತೆ ಕೈಜೋಡಿಸಿದರೆ, ಎನ್‌ಡಿಎ ಬಲ 159ಕ್ಕೆ ಏರಲಿದ್ದು, 288 ಶಾಸಕರ ಬಲ ಹೊಂದಿರುವ ಮಹಾರಾಷ್ಟ್ರದಲ್ಲಿ ಎನ್‌ಡಿಎ ಬೆಂಬಲದೊಂದಿಗೆ ಏಕನಾಥ್ ಶಿಂಧೆ ಸರ್ಕಾರ ರಚಿಸುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂಬ ಮಾತುಗಳು ಕೇಳಿಬಂದಿವೆ.

ಶಿವಸೇನೆ ಶಾಸಕರ ಬಂಡಾಯದ ಹಿಂದೆ ಮಹಾರಾಷ್ಟ್ರ ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರ ಕಾರ್ಯತಂತ್ರವಿದೆ ಎಂದು ಹೇಳಲಾಗುತ್ತಿದೆ. ಕಾಂಗ್ರೆಸ್‌ನೊಂದಿಗಿನ ಮೈತ್ರಿಯನ್ನು ವಿರೋಧಿಸಿದ್ದ ಬಂಡಾಯ ಶಾಸಕರು, ಎಂವಿಎ ಮೈತ್ರಿಕೂಟದಿಂದ ಹೊರಬರುವಂತೆ ಉದ್ಧವ್ ಠಾಕ್ರೆ ಅವರಿಗೆ ಒತ್ತಡ ಹೇರುತ್ತಿದ್ದರು. ಇತ್ತೀಚೆಗೆ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ್ದ, 10 ಶಿವಸೇನಾ ಶಾಸಕರು ಮೊದಲು ಸೂರತ್‌ಗೆ ತೆರಳಿದ್ದರು. ನಂತರ ಏಕನಾಥ್ ಶಿಂಧೆ ಜೊತೆ ಮತ್ತೆ 26 ಶಾಸಕರು ಸೂರತ್‌ಗೆ ತೆರಳಿ, ಅಲ್ಲಿನ ಲಿ ಮೆರಿಡಿಯನ್ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಇಂದು ಮಧ್ಯರಾತ್ರಿ ಈ ಶಾಸಕರು ಸೂರತ್‌ನಿಂದ ಅಸ್ಸಾಂನ ಗುವಾಹಟಿಗೆ ತೆರಳಿದ್ದಾರೆ.

ಈ ಮಧ್ಯೆ ಉದ್ಧವ್ ಠಾಕ್ರೆ ಮುಖ್ಯಮಂತ್ರಿಗಳ ಅಧಿಕೃತ ನಿವಾಸವಾದ 'ವರ್ಷಾ' ತೊರೆದು ತಮ್ಮ ಸ್ವಂತ ನಿವಾಸ 'ಮಾತೋಶ್ರೀ'ಗೆ ಕುಟುಂಬ ಸಮೇತ ಸ್ಥಳಾಂತರವಾಗಿದ್ದಾರೆ. ಆದರೆ, ಈ ಕುರಿತು ಸಂಜಯ್ ರಾವತ್ ಸ್ಪಷ್ಟನೆ ನೀಡಿದ್ದು, ಉದ್ಧವ್ ಠಾಕ್ರೆ ಅಧಿಕೃತ ನಿವಾಸವನ್ನು ತೊರೆದಿದ್ದಾರೆಯೇ ಹೊರತು, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿಲ್ಲ. ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ ಎಂದು ತಿಳಿಸಿದ್ದಾರೆ.

ಶಾಸಕರ ಬಂಡಾಯದ ಹಿನ್ನೆಲೆಯಲ್ಲಿ ಫೇಸ್‌ಬುಕ್ ಲೈವ್‌ನಲ್ಲಿ ಮಾತನಾಡಿರುವ ಉದ್ಧವ್ ಠಾಕ್ರೆ, ನಾನು ಆಕಸ್ಮಿಕವಾಗಿ ಮುಖ್ಯಮಂತ್ರಿಯಾಗಿದ್ದೇನೆ. ಮುಖ್ಯಮಂತ್ರಿ ಸ್ಥಾನ ಬರುತ್ತದೆ ಹೋಗುತ್ತದೆ. ಆದರೆ, ಜನರ ಪ್ರೀತಿಯೇ ನಿಜವಾದ ಆಸ್ತಿ. ನನಗೆ ಸಿಎಂ ಸ್ಥಾನದ ಮೇಲೆ ಯಾವುದೇ ಆಸೆ ಇಲ್ಲ ಹಾಗೂ ನಮ್ಮ ಪಕ್ಷ ಶಿವಸೇನೆಯು ಹಿಂದುತ್ವವನ್ನು ಎಂದಿಗೂ ಬಿಟ್ಟು ಕೊಡುವುದಿಲ್ಲ. ಸೂರತ್ ಮತ್ತು ಇತರ ಸ್ಥಳಗಳಲ್ಲಿ ಕುಳಿತು ಏಕೆ ಹೇಳಿಕೆಗಳನ್ನು ನೀಡುತ್ತೀರಿ. ಮುಖ್ಯಮಂತ್ರಿ ಮತ್ತು ಶಿವಸೇನೆ ಅಧ್ಯಕ್ಷ ಸ್ಥಾನವನ್ನು ನಿಭಾಯಿಸಲು ನಾನು ಅಸಮರ್ಥನೆಂದು ನನ್ನ ಮುಂದೆ ಬಂದು ಹೇಳಿ. ಆಗ ತಕ್ಷಣ ರಾಜೀನಾಮೆ ನೀಡುತ್ತೇನೆ. ನನ್ನ ರಾಜೀನಾಮೆ ಪತ್ರವನ್ನು ಸಿದ್ಧಪಡಿಸಿದ್ದೇನೆ. ನೀವೆ ಬಂದು ಅದನ್ನು ರಾಜಭವನಕ್ಕೆ ಕೊಂಡೊಯ್ಯಿರಿ ಎಂದು ಶಿವಸೇನೆ ಶಾಸಕರಿಗೆ ಕರೆ ನೀಡಿದ್ದಾರೆ.

ಈ ನಡುವೆ ಸಿಎಂ ಉದ್ಧವ್ ಠಾಕ್ರೆ ಅವರಿಗೆ ಕೊರೊನಾ ದೃಢಪಟ್ಟಿದೆ ಎಂದು ಕಾಂಗ್ರೆಸ್ ವೀಕ್ಷಕ ಕಮಲ್‌ನಾಥ್ ಸುದ್ದಿಗಾರರಿಗೆ ತಿಳಿಸಿದ್ದಾರೆ. ಅತ್ತ ಮಹಾರಾಷ್ಟ್ರ ರಾಜ್ಯಪಾಲ ಭರತ್ ಸಿಂಗ್ ಕೊಶ್ಯಾರಿ ಅವರಿಗೂ ಕೊರೊನಾ ದೃಢಪಟ್ಟಿದ್ದು, ಆಸ್ಪತ್ರೆಗೆ ದಾಖಲಾಗಿದ್ದಾರೆ. ಶಿವಸೇನೆ ಬಂಡಾಯದಿಂದಾಗಿ ಬಿಜೆಪಿಯಲ್ಲಿ ರಾಜಕೀಯ ಚಟುವಟಿಕೆ ಗರಿಗೆದರಿದ್ದು, ರಾಜ್ಯಾದ್ಯಂತ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆ ಮಾಡುತ್ತಿದ್ದಾರೆ.

ಪೌರಕಾರ್ಮಿಕರ ಮುಷ್ಕರ

ಗುತ್ತಿಗೆ ಪದ್ಧತಿ ಇದ್ದಾಗ ಇದ್ದ ಸಮಸ್ಯೆಗಳು ಇಂದಿಗೂ ಇವೆ. ಹಾಗಾಗಿ ಖಾಯಂ ಮಾಡಬೇಕೆಂಬ ಹೋರಾಟ ನಡೆಸಲಾಗುತ್ತಿದೆ. ಆದರೆ ಸರ್ಕಾರ ಯಾವುದೇ ರೀತಿ ಸ್ಪಂದಿಸುತ್ತಿಲ್ಲ. ಪೌರಕಾರ್ಮಿಕ ಬೇಡಿಕೆ ಈಡೇರಿಸಲು ಸರ್ಕಾರಕ್ಕೆ ಕಾಳಜಿ ಇಲ್ಲ. ಹಾಗಾಗಿ ಜು.1ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ತೀರ್ಮಾನಿಸಲಾಗಿದೆ ಎಂದರು.

ಬದ್ಧತೆ ಮುಖ್ಯ: ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಹೋರಾಟದಲ್ಲಿ ಗುರಿ ಮುಟ್ಟುವವರೆಗೆ ದಿಟ್ಟ ಹೆಜ್ಜೆ ಹಾಕಬೇಕು. ಯಾವುದೇ ಕಾರಣಕ್ಕೂ ಹಿಂದೆ ಸರಿಯಬಾರದು. ಹೋರಾಟದಲ್ಲಿ ಯಾವುದೇ ಗುಂಪು ಗಾರಿಕೆಗೆ ಅವಕಾಶ ನೀಡಬಾರದು. ಪ್ರಾಮಾಣಿಕವಾಗಿ ಬದ್ಧತೆಯಿಂದ ಹೋರಾಟ ನಡೆಸಬೇಕು. ಸಿದ್ದರಾಮಯ್ಯನವರ ಸರ್ಕಾರದ ಅವಧಿಯಲ್ಲೇ ಖಾಯಂ ಮಾಡಬಹುದಿತ್ತು. ಪ್ರಸ್ತುತ ಇರುವ ಸರ್ಕಾರವಂತೂ ಗುತ್ತಿಗೆ ಪದ್ಧತಿಗೇ ಹೆಚ್ಚಿನ ಆದ್ಯತೆ ನೀಡುತ್ತಿದೆ. ಬಿಜೆಪಿ ಸರ್ಕಾರದಲ್ಲಿ ನಾಟಕೀಯವೇ ಹೆಚ್ಚು ಎಂದು ಟೀಕಾಪ್ರಹಾರ ನಡೆಸಿದರು. ದಸಂಸ ಮುಖಂಡ ಹರಿಹರ ಆನಂದಸ್ವಾಮಿ ಮಾತನಾಡಿ, ಶೋಷಿತ ಸಮುದಾಯಗಳ ಏಳಿಗೆಗಾಗಿ ದಲಿತ ಚಳುವಳಿ ಜನ್ಮತಾಳಿತು. ಆದರೆ ದಲಿತ ಚಳುವಳಿ ದಿಕ್ಕು ತಪ್ಪಿ ಛಿದ್ರವಾಗಿದ್ದು, ಒಂದುಗೂಡಿಸುವ ಬದ್ಧತೆ ತೋರಬೇಕಿದೆ. ನಿಮ್ಮ ಹೋರಾಟ ರಾಜಕೀಯ ಕುತಂತ್ರಕ್ಕೆ ಬಲಿಯಾಗಬಾರದು. ಯಾವುದೇ ಸಂದರ್ಭದಲ್ಲೂ ಒಗ್ಗಟ್ಟು ಕಳೆದುಕೊಳ್ಳದೇ ಹೋರಾಟ ನಡೆಸಬೇಕು ಎಂದು ಸಲಹೆ ನೀಡಿದರು. ಕರ್ನಾಟಕ ಬುದ್ಧ ಧಮ್ಮ ಸಮಿತಿಯ ಪ್ರಧಾನ ಕಾರ್ಯದರ್ಶಿ ಆರ್.ಮಹದೇವಪ್ಪ ಪ್ರಗತಿಪರ ಚಿಂತಕರಾದ ರತಿರಾವ್, ನಾ.ದಿವಾಕರ್, ಸಿಪಿಎಂ ಮುಖಂಡ ಬಸವರಾಜು, ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಕೆ.ದೀಪಕ್, ಸಂಶೋಧಕರ ಸಂಘದ ಮರಿದೇವಯ್ಯ, ಮೈಸೂರು ನಗರ ಪಾಲಿಕೆ ಖಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾಸಂಘದ ಉನ್ನತ ಸಮಿತಿ ಅಧ್ಯಕ್ಷ ಎನ್.ಮಾರ, ಪ್ರಧಾನ ಕಾರ್ಯದರ್ಶಿ ಸಿ.ಆರ್.ರಾಚಯ್ಯ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಬಾಗಿನ, ಪಾದಪೂಜೆಯಂತಹ ಉತ್ಪ್ರೇಕ್ಷೆಗಳಿಗೆ ಮರುಳಾಗಬೇಡಿ

ಮೈಸೂರು: ಬಾಗಿನ, ಪಾದಪೂಜೆ ಎಂಬ ಉತ್ಪ್ರೇಕ್ಷೆಗಳಿಗೆ ಪೌರಕಾರ್ಮಿಕರು ಮರಳಾಗಬಾರದು ಎಂದು ಕರ್ನಾಟಕ ಬುದ್ಧಧಮ್ಮ ಸಮಿತಿ ಪ್ರಧಾನ ಕಾರ್ಯದರ್ಶಿ ಆರ್.ಮಹದೇವಪ್ಪ ಹೇಳಿದರು. ಪೌರಕಾರ್ಮಿಕರಿಗೆ ಬಾಗಿನ ಕೊಡುತ್ತೇವೆ. ಪಾದಪೂಜೆ ಮಾಡುತ್ತೇವೆ ಎಂದು ಉತ್ಪ್ರೇಕ್ಷೆ ಮಾಡುವವರ ಬಗ್ಗೆ ಪೌರಕಾರ್ಮಿಕರು ಎಚ್ಚರದಿಂದ ಇರಬೇಕು. ಇದಕ್ಕೆ ಮರಳಾಗುತ್ತಿರುವ ಹಿನ್ನೆಲೆಯಲ್ಲಿ ನಮ್ಮ ಓಟು ಪಡೆದು, ನಮ್ಮ ಜಟ್ಟು ಹಿಡಿಯುವಂತಹವರು ಅಧಿಕಾರಕ್ಕೆ ಬರುತ್ತಿದ್ದಾರೆ ಎಂದರು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಆಶ್ರಮಕ್ಕೆ ಪೌರಕಾರ್ಮಿಕರು ಹೋಗುವುದಿದೆ. ಆದರೆ ಅಲ್ಲಿನ ಶ್ರೀಗಳು ತಳ ಸಮುದಾಯ ಶ್ರೇಯೋಭಿವೃದ್ಧಿ ಬಗ್ಗೆ ನಿಜಕ್ಕೂ ಯೋಚನೆ ಮಾಡಿ ದ್ದಾರೆಯೇ? ಈ ಸಮುದಾಯಗಳ ಶಿಕ್ಷಣ, ವಸತಿ ಸೌಲಭ್ಯದ ಬಗ್ಗೆ ಚಿಂತಿಸಿದ್ದಾರೆಯೇ? ಎಂದು ಪ್ರಶ್ನಿಸಿದರಲ್ಲದೆ, ಸಿದ್ಧೇಶ್ವರ ಸ್ವಾಮೀಜಿ ಬಗ್ಗೆ ಗೌರವ ಹೊಂದಿದ್ದೆ. ಅವರು ಪ್ರಧಾನಿ ನರೇಂದ್ರ ಮೋದಿಯವರ ಭೇಟಿ ವೇಳೆ ಇಲ್ಲಿನ ಜನತೆಯ ಸಂಕಷ್ಟದ ಬಗ್ಗೆ ಏನಾದರೂ ಹೇಳುತ್ತಾರೆ ಎಂದುಕೊಂಡರೆ, ಮೋದಿಯವರನ್ನು ಹಾಡಿ–ಹೊಗಳಿ ಅಟ್ಟಕ್ಕೇರಿಸಿದರು ಎಂದು ಬೇಸರ ವ್ಯಕ್ತಪಡಿಸಿದರು.

ಅಂತರರಾಷ್ಟ್ರೀಯ ಯೋಗ ದಿನಾಚರಣೆ ಸೇರಿದಂತೆ ಪ್ರಧಾನಮಂತ್ರಿಗಳ ಮೈಸೂರು ಕಾರ್ಯಕ್ರಮ ಯಶಸ್ವಿ

ಜಿಲ್ಲಾಡಳಿತ, ಜನಪ್ರತಿನಿಧಿಗಳಿಗೆ ಉಸ್ತುವಾರಿ ಸಚಿವರ ಅಭಿನಂದನೆ



ಮೈಸೂರು, ಜೂ. 22(ಆರ್‌ಕೆ)– 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಸೇರಿದಂತೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪಾಲ್ಗೊಂಡಿದ್ದ ಮೈಸೂರಿನ ಎಲ್ಲಾ ಕಾರ್ಯಕ್ರಮಗಳ ಯಶಸ್ಸಿಗೆ ಕಾರಣರಾದ ಜನಪ್ರತಿನಿಧಿಗಳು, ಜಿಲ್ಲಾಡಳಿತ, ಪೊಲೀಸ್ ಅಧಿಕಾರಿಗಳು, ಮಾಧ್ಯಮದವರು ಹಾಗೂ ಸಾರ್ವಜನಿಕರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅಭಿನಂದನೆ ಸಲ್ಲಿಸಿದ್ದಾರೆ.

ಮೈಸೂರಿನ ಸರ್ಕಾರಿ ಅತಿಥಿಗೃಹದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಮೈಸೂರಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಾರ್ವಜನಿಕರೊಂದಿಗೆ ಯೋಗ ಪ್ರದರ್ಶಿಸಿದ ಪ್ರಧಾನಿಗಳು, ಇಡೀ ವಿಶ್ವವೇ ಮೈಸೂರಿನತ್ತ ಗಮನಹರಿಸುವಂತೆ ಮಾಡಿದ್ದಾರೆ. ಪ್ರಧಾನಿಗಳ ಈ ಕಾರ್ಯಕ್ರಮದಿಂದಾಗಿ ವಿಶ್ವ ಭೂಪಟದಲ್ಲಿ ಮೈಸೂರಿನ ಹೆಸರು ಅಚ್ಚಳಿಯದಂತೆ ಸೇರಿದ್ದು, ಅಭಿವೃದ್ಧಿಗೆ ಪೂರಕ ವಾತಾವರಣ ಸೃಷ್ಟಿಸಿದೆ ಎಂದರು.

ಮೈಸೂರಿನ ಎಲ್ಲಾ ಕಾರ್ಯಕ್ರಮಗಳು ತಮಗೆ ಸಂತೋಷ ಉಂಟುಮಾಡಿದ್ದು, ಮತ್ತೆ ಮತ್ತೆ ಮೈಸೂರಿಗೆ ಬರಬೇಕೆಂದೆನಿಸಿದೆ ಎಂಬ ಮಾತನ್ನು ಸ್ವತಃ ಪ್ರಧಾನಮಂತ್ರಿಗಳೇ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ತಿಳಿಸಿದ್ದಾರೆ ಎಂದು ಜಿಲ್ಲಾ ಮಂತ್ರಿಗಳು ಹೇಳಿದರು.

ಪ್ರಧಾನಿಗಳ ಆಗಮನದಿಂದಾಗಿ ಅರಮನೆ ಆವರಣ, ಸುತ್ತಲಿನ ರಸ್ತೆ, ಫುಟ್‌ಪಾತ್, ಪ್ರಮುಖ ರಸ್ತೆಗಳ ಸ್ವಚ್ಛತೆ ಅಭಿವೃದ್ಧಿಯಾದವು. ಮೈಸೂರು ಮತ್ತು ನಾಗನಹಳ್ಳಿ ಕೋಚಿಂಗ್ ಕಾಂಪ್ಲೆಕ್ಸ್ ಕಾಮಗಾರಿಗಳ ಶಿಲಾನ್ಯಾಸ ನೆರವೇರಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಶ್ರೇಷ್ಠತಾ ಕೇಂದ್ರವನ್ನು ಲೋಕಾರ್ಪಣೆ ಮಾಡಿರುವುದು ಸಂತೋಷ ತಂದಿದೆ ಎಂದು ತಿಳಿಸಿದರು.

ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಯೋಗಕ್ಕೆ ಸಂಬಂಧಿಸಿದ ಆಯುಷ್ ಇಲಾಖೆ ಡಿಜಿಟಲ್ ಮಳಿಗೆಗಳ ಉದ್ಘಾಟನೆ, ಮಹಾರಾಜ ಕಾಲೇಜು ಮೈದಾನದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ನಡೆಸಿದ ಪ್ರಧಾನಿಗಳು, ಸುತ್ತೂರು ಶಾಖಾ ಮಠದಲ್ಲಿ ಸಂಸ್ಕೃತ ಪಾಠಶಾಲೆ ಕಟ್ಟಡ ಉದ್ಘಾಟನೆ ಹಾಗೂ ಪುಸ್ತಕಗಳ ಬಿಡುಗಡೆ ಮಾಡಿರುವುದು ಮೈಸೂರಿಗೆ ಹೆಮ್ಮೆ ತಂದಿದೆ ಎಂದು ಸಚಿವರು ನುಡಿದರು.

ಎಲ್ಲಾ ಕಾರ್ಯಕ್ರಮಗಳನ್ನು ಯಾವುದೇ ಲೋಪದೋಷಗಳಿಲ್ಲದಂತೆ ವ್ಯವಸ್ಥಿತವಾಗಿ ಆಯೋಜಿಸಿ ಯಶಸ್ವಿಯಾಗಲು ಹಗಲು–ರಾತ್ರಿ ದುಡಿದ ಜಿಲ್ಲಾಡಳಿತ, ಆಯುಷ್ ಸೇರಿದಂತೆ ಎಲ್ಲಾ ಇಲಾಖೆಗಳ ಅಧಿಕಾರಿಗಳು, ಸೂಕ್ತ ಭದ್ರತೆ ಒದಗಿಸಿ ನರೇಂದ್ರ ಮೋದಿ ಅವರು ಹಿಂತಿರುಗುವವರೆಗೆ ಶ್ರಮಿಸಿದ ಪೊಲೀಸ್ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳಿಗೆ ಸೋಮಶೇಖರ್ ಅಭಿನಂದನೆ ಸಲ್ಲಿಸಿದರು.

ಸಚಿವರು, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ನಿಗಮ–ಮಂಡಳಿ ಅಧ್ಯಕ್ಷರು, ಜನಪ್ರತಿನಿಧಿಗಳು, ಮಾಧ್ಯಮ ಪ್ರತಿನಿಧಿಗಳು, ಸಾರ್ವಜನಿಕರ ಸಹಕಾರದಿಂದಾಗಿ ಪ್ರಧಾನಿಗಳ ಮೈಸೂರು ಕಾರ್ಯಕ್ರಮಗಳು ಯಶಸ್ವಿಯಾಗಿದ್ದು, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತಿರುವುದಾಗಿ ಸಚಿವರು ನುಡಿದರು.

ಇದೇ ವೇಳೆ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಎಡಿಸಿ ಡಾ. ಬಿ.ಎಸ್. ಮಂಜುನಾಥಸ್ವಾಮಿ, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯ್ತಿ ಸಿಇಓ ಬಿ.ಆರ್.ಪೂರ್ಣಿಮಾ, ಡಿಸಿಪಿಗಳಾದ ಎಂ.ಎಸ್.ಗೀತಾ ಪ್ರಸನ್ನ, ಪ್ರದೀಪ್ ಗುಂಟಿ ಅವರನ್ನು ಪುಷ್ಪಗುಚ್ಛ ನೀಡಿ ಸಚಿವರು ಅಭಿನಂದಿಸಿದರು.

ಸಂಸದ ಪ್ರತಾಪ್ ಸಿಂಹ, ಶಾಸಕ ಎಸ್.ಎ.ರಾಮದಾಸ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮೈಲ್ಯಾಕ್ ಅಧ್ಯಕ್ಷ ಎನ್.ವಿ. ಫಣೀಶ್, ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಕಾಪು ಸಿದ್ದಲಿಂಗಸ್ವಾಮಿ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಪ್ರಭಾಕರರಾವ್ ಸಿಂಧೆ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.

ಪ್ರಧಾನಿ ಮೋದಿ ಭೇಟಿಯಲ್ಲಿ ರಾಜಕೀಯ ವಿಚಾರ ಇಲ್ಲ

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಸ್ಪಷ್ಟನೆ

ಮೈಸೂರು, ಜೂ.22(ಆರ್‌ಕೆಬಿ)–ಪ್ರಧಾನಿ ಮೋದಿ ಅವರನ್ನು ನಾನು ಭೇಟಿಯಾಗಿರುವುದರಲ್ಲಿ ಯಾವುದೇ ರಾಜಕೀಯ ಇಲ್ಲ. ಚಾಮುಂಡೇಶ್ವರಿ ಕ್ಷೇತ್ರದ ಶಾಸಕನಾಗಿ ಅವರಿಗೆ ಸ್ವಾಗತ ಕೋರಿದ್ದೇನಷ್ಟೆ, ಇದರಲ್ಲಿ ಯಾವ ರಾಜಕೀಯ ಉದ್ದೇಶವೂ ಇಲ್ಲ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಸ್ಪಷ್ಟಪಡಿಸಿದ್ದಾರೆ.



ಪ್ರಧಾನಮಂತ್ರಿ ಮೋದಿ ಅವರನ್ನು ಭೇಟಿ ಮಾಡಿದ್ದ ಕುರಿತು ಮೈಸೂರು ಅರಮನೆ ಕೋಟೆ ಆಂಜನೇಯ ದೇವಸ್ಥಾನದ ಬಳಿ ಬುಧವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಪ್ರಧಾನಿಯವರ ಆಗಮನ ನಮಗೆ ಖುಷಿ ತಂದಿದೆ. ಈ ಸಂದರ್ಭದಲ್ಲಿ ಮೈಸೂರಿನ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಅನುದಾನ ನೀಡುವಂತೆ ಮನವಿ ಮಾಡಿದ್ದೇನೆ. ಹಣದ ಕೊರತೆ ಬಗ್ಗೆ ಅವರ ಗಮನ ಸೆಳೆದಿದ್ದೇನೆ. ಅವರು ನನ್ನ ಮನವಿಗೆ ಪೂರಕವಾಗಿ ಸ್ಪಂದಿಸಿದ್ದಾರೆ. ಹಾಗಾಗಿ ಮೈಸೂರಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ಅವರನ್ನು ಭೇಟಿ ಮಾಡಿದ್ದೇನೆಯೇ ಹೊರತು, ಅದರಲ್ಲಿ ಯಾವುದೇ ರಾಜಕೀಯ ಉದ್ದೇಶ ಇಲ್ಲ. ಪ್ರಧಾನಮಂತ್ರಿಗಳು ಎಲ್ಲರಿಗೂ ಪ್ರಧಾನ ಮಂತ್ರಿಗಳೇ. ಹಾಗಾಗಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕನಾಗಿ ಅವರಿಗೆ ಸ್ವಾಗತ ಕೋರಿದ್ದೇನಷ್ಟೇ ಎಂದು ಹೇಳಿದರು.

ಇನ್ನೆರಡು ತಿಂಗಳಲ್ಲಿ ನನ್ನ ರಾಜಕೀಯ ನಡೆ ನಿರ್ಧಾರ: ತಮ್ಮ ಮುಂದಿನ ರಾಜಕೀಯ ನಡೆ ಬಗ್ಗೆ ಎರಡು ತಿಂಗಳಲ್ಲಿ ತಿಳಿಸುವುದಾಗಿ ಜಿ.ಟಿ. ದೇವೇಗೌಡ ತಿಳಿಸಿದರು. ಕಾರ್ಯಕರ್ತರು, ಬೆಂಬಲಿಗರು, ಕ್ಷೇತ್ರದ ಜನತೆಯ ಅಭಿಪ್ರಾಯದಂತೆ ಮುಂದಿನ ತೀರ್ಮಾನ ತೆಗೆದುಕೊಳ್ಳುತ್ತೇನೆ. ಕಾರ್ಯಕರ್ತರ ಸಭೆ ನಡೆಸಿ ಎಲ್ಲಾ ವಿಚಾರವನ್ನು ಸಭೆಯಲ್ಲಿ ಹೇಳುತ್ತೇನೆ. ನನ್ನ ನಡೆ ಕಾರ್ಯಕರ್ತರ ಅಭಿಪ್ರಾಯದ ಪ್ರಕಾರ ಇರುತ್ತದೆ. ಅವರು ಕೈಗೊಳ್ಳುವ ತೀರ್ಮಾನದ ರೀತಿ ಮುಂದುವರಿಯುವುದಾಗಿ ತಿಳಿಸಿದರು.

ಶಾಸಕ ಸಾ.ರಾ ಮಹೇಶ್ ಅವರಿಗೆ ರಾಜ್ಯದ ನಾಯಕರಾಗುವ ಎಲ್ಲಾ ಅರ್ಹತೆ ಇದೆ ಎಂಬ ಎಚ್.ಡಿ.ಕುಮಾರಸ್ವಾಮಿ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಜಿ.ಟಿ.ದೇವೇಗೌಡ, ನಾನು ಈ ಹಿಂದೆಯೇ ಹೇಳಿದ್ದೆ. ಯುವಕರಾಗಿರುವ ಸಾ.ರಾ.ಮಹೇಶ್ ಈಗಾಗಲೇ ಸಚಿವನಾಗಿ ರಾಜ್ಯ ಮಟ್ಟದ ನಾಯಕರಾಗಿದ್ದಾರೆ. ನಾಯಕತ್ವ ವಹಿಸೋದು ತಪ್ಪೇನಿಲ್ಲ ಎಂದು ಹೇಳಿದರು.

ಮೈಸೂರು ಜಿಲ್ಲಾ ಗುತ್ತಿಗೆದಾರರ ಸಂಘ ನಾಳೆ ಉದ್ಘಾಟನೆ



ಮೈಸೂರು, ಜೂ.22 (ಆರ್‌ಕೆಬಿ)–ಸರ್ಕಾರದ ಎಲ್ಲಾ ಇಲಾಖೆಗಳಲ್ಲೂ ಸಾಮಾನ್ಯವಾಗಿರುವ ಗುತ್ತಿಗೆದಾರರ ಸಮಸ್ಯೆಗಳ ನಿವಾರಣೆಗಾಗಿ ಹೋರಾಟ ನಡೆಸಲು ವಿವಿಧ ಇಲಾಖೆಗಳ ಗುತ್ತಿಗೆದಾರರನ್ನು ಒಗ್ಗೂಡಿಸಿ ಮೈಸೂರು ಜಿಲ್ಲಾ ಗುತ್ತಿಗೆದಾರರ ಸಂಘವನ್ನು ಸ್ಥಾಪಿಸಲಾಗಿದೆ ಎಂದು ಸಂಘದ ಕಾರ್ಯಾಧ್ಯಕ್ಷ ಸಿ.ಡಿ.ಕೃಷ್ಣ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾ, ನಗರಪಾಲಿಕೆ, ಕಬಿನಿ, ವರುಣಾ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಸೇರಿದಂತೆ ಹಲವು ಇಲಾಖೆಗಳ ಗುತ್ತಿಗೆದಾರರು ಸಂಘದ ಸದಸ್ಯರಾಗಿದ್ದು, ಈಗಾಗಲೇ 400ಕ್ಕೂ ಹೆಚ್ಚು ಗುತ್ತಿಗೆದಾರರು ಸಂಘದಲ್ಲಿ ಹೆಸರು ನೋಂದಾಯಿಸಿಕೊಂಡಿದ್ದಾರೆ ಎಂದರು.

ಈ ನೂತನ ಸಂಘವನ್ನು ಜೂ.24ರ ಮಧ್ಯಾಹ್ನ 3.30 ಗಂಟೆಗೆ ಮೈಸೂರಿನ ಹೋಟೆಲ್ ರಿಯೋ ಮೆರಿಡಿಯನ್‌ನಲ್ಲಿ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಉದ್ಘಾಟಿಸಲಿದ್ದಾರೆ. ಜಿಲ್ಲಾ ಗುತ್ತಿಗೆದಾರರ ಸಂಘದ ಅಧ್ಯಕ್ಷ ಎ.ಜಿ. ಸುರೇಶ್ ಅಧ್ಯಕ್ಷತೆ ವಹಿಸುವರು. ರಾಜ್ಯ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಎಂ.ರವೀಂದ್ರ ಇನ್ನಿತರರು ಭಾಗವಹಿಸುವರು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸಂಘದ ಪದಾಧಿಕಾರಿಗಳಾದ ಗೌರವಾಧ್ಯಕ್ಷ ಜಿ.ಅಶೋಕ್, ಅಧ್ಯಕ್ಷ ಎ.ಜಿ.ಸುರೇಶ್, ಪ್ರಧಾನ ಕಾರ್ಯದರ್ಶಿ ಕೆ.ರವಿ, ಖಜಾಂಚಿ ಎನ್.ಎನ್.ಮಹದೇವಸ್ವಾಮಿ ಉಪಸ್ಥಿತರಿದ್ದರು.


ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡ ಮತದಾನ

ಶಾಸಕರಾದ ಶ್ರೀನಿವಾಸಗೌಡ, ಗುಬ್ಬಿ ಶ್ರೀನಿವಾಸ್ ಜೆಡಿಎಸ್‌ನಿಂದ ಉಚ್ಚಾಟನೆ

ಇಬ್ಬರೂ ಶಾಸಕರನ್ನು ಅನರ್ಹಗೊಳಿಸಲು ಸ್ಪೀಕರ್ ಅವರಿಗೆ ದೂರು ನೀಡಲೂ ನಿರ್ಧಾರ



ಶ್ರೀನಿವಾಸ ಗೌಡ



ಎಸ್.ಆರ್.ಶ್ರೀನಿವಾಸ

ಬೆಂಗಳೂರು, ಜೂ.22– ರಾಜ್ಯಸಭೆ ಚುನಾವಣೆಯಲ್ಲಿ ಪಕ್ಷದ ವ್ಹಿಪ್ ಉಲ್ಲಂಘಿಸಿ ಅಡ್ಡ ಮತದಾನ ಮಾಡಿದ ಕೋಲಾರ ಶಾಸಕ ಕೆ.ಶ್ರೀನಿವಾಸ ಗೌಡ ಹಾಗೂ ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್ ಅವರನ್ನು ಜೆಡಿಎಸ್ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟನೆ ಮಾಡಲಾಗಿದೆ.

ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಇಂದು ನಡೆದ ಕೋರ್ ಕಮಿಟಿ ಸಭೆಯಲ್ಲಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಕೋರ್ ಕಮಿಟಿ ಅಧ್ಯಕ್ಷ ಬಂಡೆಪ್ಪ ಕಾಶೆಂಪೂರ್ ಮಾಧ್ಯಮಗಳಿಗೆ ಈ ವಿಷಯ ತಿಳಿಸಿದರು.

ಹಾಗೆಂಯೇ ಪಕ್ಷಾಂತರ ನಿಷೇಧ ಕಾಯ್ದೆ ಅಡಿ ಇಬ್ಬರೂ ಶಾಸಕರನ್ನು ವಿಧಾನಸಭೆ ಸದಸ್ಯತ್ವದಿಂದ ಅನರ್ಹಗೊಳಿಸಲು ತಕ್ಷಣವೇ ವಿಧಾನಸಭಾಧ್ಯಕ್ಷರಿಗೆ ದೂರು ನೀಡಲು ಕೂಡ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ನಾಳೆ ಅಥವಾ ನಾಡಿದ್ದರ ಒಳಗಾಗಿ ಸ್ಪೀಕರ್ ಅವರಿಗೆ ದೂರು ನೀಡಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಸಭೆಯಲ್ಲಿ ಸುದೀರ್ಘ ಚರ್ಚೆ: ರಾಜ್ಯಸಭೆ ಚುನಾವಣೆಯಲ್ಲಿ ನಡೆದ ಬೆಳವಣಿಗೆಗಳ ಬಗ್ಗೆ ಕೋರ್ ಕಮಿಟಿ ಸಭೆಯಲ್ಲಿ ವಿಸ್ತೃತವಾಗಿ ಚರ್ಚೆ ನಡೆಯಿತು.

ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಹೆಚ್.ಡಿ.ದೇವೇಗೌಡರು, ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಹೆಚ್.ಡಿ.ರೇವಣ್ಣ, ಸಂಸದ ಪ್ರಜ್ವಲ್ ರೇವಣ್ಣ, ಪಕ್ಷದ ನಾಯಕರಾದ ಜಫ್ರುಲ್ಲಾ ಖಾನ್, ಎಂ.ಕೃಷ್ಣಾರೆಡ್ಡಿ, ರಾಜಾ ವೆಂಕಟಪ್ಪ ನಾಯಕ, ಕೆ.ಎಂ.ತಿಮ್ಮರಾಯಪ್ಪ, ಟಿ.ಎ.ಶರವಣ, ಶಾರದಾ ಪೂರ್ಣನಾಯಕ್, ರೂತ್ ಮನೋರಮಾ, ವಿ.ನಾರಾಯಣಸ್ವಾಮಿ, ಸಮೃದ್ಧಿ ಮಂಜುನಾಥ್, ವಿಲ್ಸನ್ ರೆಡ್ಡಿ, ಸುಧಾಕರ ಲಾಲ್, ಹೆಚ್.ಎಂ.ರಮೇಶ್‌ಗೌಡ, ಆರ್.ಪ್ರಕಾಶ್, ಸಯ್ಯದ್ ಶಫಿ ಉಲ್ಲಾ, ನಾಸಿರ್ ಉಸ್ತಾದ್ ಹಾಗೂ ಕೋರ್ ಕಮಿಟಿ ಸಂಚಾಲಕರಾದ ಕೆ.ಎನ್. ತಿಪ್ಪೇಸ್ವಾಮಿ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು. ಸಭೆಯಲ್ಲಿ ಹೆಚ್.ಡಿ.ದೇವೇಗೌಡರು ಹಾಗೂ ಹೆಚ್.ಡಿ.ಕುಮಾರಸ್ವಾಮಿ ಅವರು ಕೆಲವು ಮಹತ್ವದ ಅಂಶಗಳ ಬಗ್ಗೆ ಪಕ್ಷದ ಪ್ರಮುಖರಿಗೆ ಸಲಹೆ, ಸೂಚನೆಗಳನ್ನು ನೀಡಿದರು.

ಜೂ.25, 10 ಪುಸ್ತಕಗಳ ಬಿಡುಗಡೆ

ಮೈಸೂರು, ಜೂ.22(ಆರ್‌ಕೆಬಿ)–ಬೆಂಗಳೂರಿನ ವೀರಲೋಕ ಪುಸ್ತಕ ಪ್ರಕಾಶನ ಸಂಸ್ಥೆಯು ಜೂ.25 ರಂದು ಸಂಜೆ 5 ಗಂಟೆಗೆ ಮೈಸೂರಿನ ನಟನ ರಂಗಶಾಲೆಯಲ್ಲಿ ಖ್ಯಾತ ಸಾಹಿತಿಗಳ ಹತ್ತು ಪುಸ್ತಕಗಳನ್ನು ಬಿಡುಗಡೆ ಮಾಡಲಾಗುತ್ತಿದೆ ಎಂದು ಮಳವಳ್ಳಿ ಪ್ರಸನ್ನಕುಮಾರ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ವಿಶ್ವೇಶ್ವರ ಭಟ್ಟರ 'ಕೈ ಹಿಡಿದು ನೀ ನಡೆಸು ತಂದೆ', ಕುಂ. ವೀರಭದ್ರಪ್ಪನವರ 'ವಿಶ್ವ ಸುಂದರಿ', ಜೋಗಿ ಅವರ 'ಇವರು ಅವರು ದೇವರು', ರವಿ ಕೃಷ್ಣಾರೆಡ್ಡಿಯವರ 'ಒಳ್ಳೆಯ ಬದುಕಿನ ಸೂತ್ರಗಳು' ದೀಪಾ ಹಿರೇಗುತ್ತಿಯವರ 'ಸೋಲೆಂಬ ಗೆಲುವು', ಗಣೇಶ್ ಕಾಸರಗೋಡು ಅವರ 'ಲಾಸ್ಟ್ ಡೇಸ್ ಆಫ್ ಲೆಜೆಂಡ್ಸ್' ಹಾಗೂ 'ಬೆಳ್ಳಿತೆರೆಯ ಬಂಗಾರದ ಗೆರೆ', ರಂಗಸ್ವಾಮಿ ಮೂಕನಹಳ್ಳಿ ಅವರ 'ಮನಿ ಮನೆ ಎಕಾನಮಿ', ಅನಂತ ಹುದೆಂಗಜೆ ಅವರ 'ನಿಮಗೆಷ್ಟು ಹಣ ಬೇಕು?', ರಮೇಶ್ ಅರವಿಂದ್ ಅವರ 'ಆರ್ಟ್ ಆಫ್ ಸಕ್ಸಸ್' ಪುಸ್ತಕಗಳು ಬಿಡುಗಡೆ ಮಾಡಲಾಗುವುದು ಎಂದರು.

ಕನ್ನಡ ಸಂಸ್ಕೃತಿ ಚಿಂತಕ ಪ್ರೊ.ಕೃಷ್ಣೇಗೌಡರು ಉದ್ಘಾಟನೆ ನೆರವೇರಿಸುವರು. ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಚಿತ್ರನಟ ಮಂಡ್ಯ ರಮೇಶ್, ಲೇಖಕರಾದ ಗಣೇಶ್ ಕಾಸರಗೋಡು, ರಂಗಸ್ವಾಮಿ ಮೂಕನಹಳ್ಳಿ, ಕುಸುಮಾ ಆಯರಹಳ್ಳಿ ಭಾಗವಹಿಸುವರು ಎಂದರು. ನಮ್ಮ ಸಂಸ್ಥೆಯು ಓದುಗರನ್ನು ತಲುಪಲು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ರಾಜ್ಯದ 8 ಲಕ್ಷ ಓದುಗರ ಮಾಹಿತಿ ಸಂಗ್ರಹಿಸಿದ್ದೇವೆ. ಅವರಿಗಾಗಿ ಮೊಟ್ಟ ಮೊದಲಿಗೆ ಕನ್ನಡ ಪುಸ್ತಕಗಳ ಕಾಲ್ ಸೆಂಟರ್ ತೆರೆದಿದ್ದು, ವಾಟ್ಸಾಪ್ ಕಾಲ್, ಟೆಕ್ಸ್ಟ್ ಮೆಸೇಜ್ ಮೂಲಕ ಕನ್ನಡ ಪುಸ್ತಕಗಳ ಮಾರಾಟ, ಪ್ರೇರಣೆ ಮಾಡಲಿದ್ದೇವೆ. ಜೊತೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಪುಸ್ತಕಗಳಿಗೆ ಮಾರುಕಟ್ಟೆ ಒದಗಿಸುವ ಉದ್ದೇಶ ಹೊಂದಿದ್ದೇವೆ. ಎಂದರು.

ಸ್ವಿಗ್ಗಿ, ಜೊಮ್ಯಾಟೊ ರೀತಿಯಲ್ಲಿ ಓದುಗರ ಮನೆಗೇ ಕನ್ನಡ ಪುಸ್ತಕ ಸೇವೆ

ಸ್ವಿಗ್ಗಿ, ಜೊಮ್ಯಾಟೋ ರೀತಿಯಲ್ಲಿ ಪುಸ್ತಕ ಸೇವೆ: ಮನೆ ಮನೆಗೆ ಅವರ ಬೇಡಿಕೆಯಂತೆ ಆಹಾರ ಪೂರೈಸುವ ಯೋಜನೆ ಜಾರಿಗೊಳಿಸಿದ್ದೇವೆ. 080–6926 2222 ಅಥವಾ 7022122121 ಸಂಖ್ಯೆಗೆ ಕರೆ ಮಾಡಿದರೆ ಅಥವಾ ಸಂದೇಶ ಕಳಿಸಿದರೆ ಸಾಕು, ಅವರು ಕೇಳುವ ಯಾವುದೇ ಪ್ರಕಾಶನದ, ಯಾವುದೇ ಲೇಖಕರ, ಯಾವುದೇ ಪುಸ್ತಕವನ್ನು ಸ್ವಿಗ್ಗಿ, ಜೊಮ್ಯಾಟೋ ರೀತಿಯಲ್ಲಿ ಓದುಗರಿಗೆ ಅವರಿದ್ದ ಕಡೆಗೆ ಕಳುಹಿಸಲಿದ್ದೇವೆ ಎಂದರು. ಗೋಷ್ಠಿಯಲ್ಲಿ ಎಂ.ರವಿಕುಮಾರ್, ಮೂಕನಹಳ್ಳಿ ರಂಗಸ್ವಾಮಿ ಇದ್ದರು.



ಚಾಮುಂಡಿಬೆಟ್ಟದ ಗ್ರಾಮಸ್ಥರಿಗೆ ಬುಧವಾರ ಗ್ರಾಪಂ ಕಚೇರಿಯಲ್ಲಿ ವಿವಿಧ ಪಿಂಚಣಿ, ಮಾಸಾಶನ ಸೇರಿದಂತೆ ಸರ್ಕಾರಿ ಸೌಲಭ್ಯಗಳ ಮಂಜೂರಾತಿ ಆದೇಶ ಪತ್ರಗಳನ್ನು ಚಾ.ಬೆಟ್ಟ ಗ್ರಾಪಂ ಅಧ್ಯಕ್ಷ ಕೆ.ಭರತ್ ವಿತರಿಸಿದರು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರೂಪೇಶ್, ಗ್ರಾಪಂ ಸದಸ್ಯರಾದ ಸುಜಾತ, ಮಂಜುನಾಥ ಇತರರು ಉಪಸ್ಥಿತರಿದ್ದರು.

ಕೆಲಸ ಹುಡುಕಿಕೊಂಡು ಹೋದ ವ್ಯಕ್ತಿ ನಾಪತ್ತೆ

ಮೈಸೂರು,ಜೂ.22–ಕೆಲಸ ಹುಡುಕಿಕೊಂಡು ಹೋದ ವ್ಯಕ್ತಿಯೊಬ್ಬರು ನಾಪತ್ತೆಯಾಗಿರುವ ಬಗ್ಗೆ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರು ತಾಲೂಕು ರಮ್ಮನಹಳ್ಳಿ ವಾಸಿ ಮಹದೇವಸ್ವಾಮಿ(44) ಕಾಣೆಯಾದವರು. ಹೋಟೆಲ್‌ವೊಂದರಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡಿಕೊಂಡಿದ್ದ ಮಹದೇವಸ್ವಾಮಿ, ಅಲ್ಲಿ ಕೆಲಸ ಬಿಟ್ಟು ಕೆಲವು ದಿನಗಳ ಕಾಲ ಮನೆಯಲ್ಲಿದ್ದರೆನ್ನಲಾಗಿದೆ. ಏ. 20ರಂದು ಕೆಲಸ ಹುಡುಕಿಕೊಂಡು ಬರುವುದಾಗಿ ಹೇಳಿ ಹೋದವರು ಇದುವರೆಗೂ ಮನೆಗೆ ಹಿಂತಿರುಗಿಲ್ಲ. ಮೊಬೈಲ್ ಕೂಡ ಸ್ವಿಚ್‌ಆಫ್ ಆಗಿದೆ ಎಂದು ಅವರ ಪತ್ನಿ ಸವಿತಾ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಸುಳಿವು ಸಿಕ್ಕವರು ದೂ.: 0821–2520040, 2444800, 2444955 ಮೂಲಕ ಸಂಪರ್ಕಿಸಲು ಕೋರಲಾಗಿದೆ.

ನಾಲ್ವಡಿ ಜಯಂತಿ ನಾಡಹಬ್ಬವಾಗಿ ಆಚರಿಸಲ್ಪಡಬೇಕು

● ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಮತ ● ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು 40ನೇ ವರ್ಷದ ಪುಣ್ಯಸ್ಮರಣೆ

ಮೈಸೂರು,ಜೂ.22(ಎಂಟಿವೈ)– ನಾಡಿಗೆ ತನ್ನದೇ ಆದ ಅಮೂಲ್ಯ ಕೊಡುಗೆ ನೀಡಿರುವ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮ ದಿನಾಚರಣೆ ಕೇವಲ ಮೈಸೂರು ಭಾಗಕ್ಕೆ ಸೀಮಿತಗೊಳಿಸದೆ ನಾಡಹಬ್ಬವಾಗಿ ಆಚರಿಸುವಂತಾಗಬೇಕು ಎಂದು ವಿಧಾನಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಇನ್ಸ್‌ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಭಾಂಗಣದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ಮಾಜಿ ಮುಖ್ಯಮಂತ್ರಿ ದಿ.ಡಿ. ದೇವರಾಜ ಅರಸ್ ಅವರ 40ನೇ ವರ್ಷದ ಪುಣ್ಯ ಸ್ಮರಣೆಯ ಪ್ರಯುಕ್ತ ಬುಧವಾರ ಆಯೋಜಿಸಿದ್ದ 'ಧ್ವನಿ ಕೊಟ್ಟ ಧಣಿ' ಪ್ರಶಸ್ತಿ ಪ್ರದಾನ ಹಾಗೂ ಡಾ. ಜಗನ್ನಾಥ ಶೆಟ್ಟಿ ಅವರ ರಚನೆಯ ದೇವರಾಜ ಅರಸು ಬದುಕು ಮತ್ತು ರಾಜಕಾರಣ ಕುರಿತ 'ಕರ್ನಾಟಕದ ಧ್ರುವತಾರೆ' ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಡಿ. ದೇವರಾಜ ಅರಸು ಅವರನ್ನು ಈ ನಾಡು ದಿನನಿತ್ಯ ಸ್ಮರಿಸುತ್ತದೆ. ಈ ನಾಡಿಗೆ, ದೇಶಕ್ಕೆ ಇಬ್ಬರ ಕೊಡುಗೆ ಅಪಾರ. ಹೀಗಾಗಿ, ನಾಲ್ವಡಿ ಜಯಂತಿಯನ್ನು ನಾಡಹಬ್ಬವಾಗಿ ಆಚರಿಸಬೇಕು. ಇದಕ್ಕೆ ಎಲ್ಲಾ ಸಮಾಜದ ಜನರು, ಸರ್ಕಾರ ಮುಂದಾಗಬೇಕು ಎಂದು ಹೇಳಿದರು.



ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ಸ್ಮರಣೆ ಅಂಗವಾಗಿ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ವಿವಿಧ ಕ್ಷೇತ್ರದ ಸೇವೆ ಸಾಧಕರಿಗೆ 'ಧ್ವನಿ ಕೊಟ್ಟ ಧಣಿ' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ರಾಜ್ಯದಲ್ಲಿ ಧ್ವನಿಯಿಲ್ಲದವರಿಗೆ ಧ್ವನಿ ಕೊಟ್ಟ ಧಣಿ ಎಂದರೆ ಅದು ಮಾಜಿ ಮುಖ್ಯಮಂತ್ರಿ ದಿ.ಡಿ. ದೇವರಾಜ ಅರಸು ಒಬ್ಬರೇ. ಉಳುವವನೆ ಭೂಮಿ ಒಡೆಯ, ಜೀತ ಮುಕ್ತ ಪದ್ಧತಿಯನ್ನು ಜಾರಿಗೊಳಿಸಿ ದೇಶಕ್ಕೆ ಮಾದರಿಯಾಗುವುದಲ್ಲದೇ, ಬಡವರ, ಶೋಷಿತರ, ದಲಿತರ, ಹಿಂದುಳಿದವರ ಪಾಲಿಗೆ ಬೆಳಕಾದವರು. ಮೈಸೂರಿನಲ್ಲಿ ದೇವರಾಜ ಅರಸು ಅವರ ಪುತ್ಥಳಿ ನಿರ್ಮಾಣ ಮಾಡುವ ಸಂಬಂಧ ಪರಿಷತ್ತಿನಲ್ಲಿ ವಿಷಯ ಪ್ರಸ್ತಾಪಿಸುವ ಮೂಲಕ ಪುತ್ಥಳಿ ನಿರ್ಮಾಣಕ್ಕೆ ಪ್ರಯತ್ನ ಮಾಡುತ್ತೇನೆ. ಅರಸು ಸಮಾಜದವರು ನಿಸ್ವಾರ್ಥಿಗಳು. ಒಂದು ಕಾಲದಲ್ಲಿ ಆಡಳಿತ ಮಾಡಿದವರು, ಇಂದು ಸಾಮಾನ್ಯ ಜನರಾಗಿ ಬದುಕುತ್ತಿದ್ದು, ಮುಂದಿನ ದಿನಗಳಲ್ಲಿ ಈ ಸಮಾಜದವರು ಮೀಸಲಾತಿ ಕೇಳಬೇಕಾಗಬಹುದು ಎಂದು ಅಭಿಪ್ರಾಯಪಟ್ಟರು.

ಪ್ರಶಸ್ತಿ ಪ್ರದಾನ: ಇದೇ ವೇಳೆ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾಲೇಜು ಶಿಕ್ಷಣ ಮತ್ತು ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಎಸ್‌ವಿಐಇ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಪ್ರಭಾಕರಶೆಟ್ಟಿ, ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ನಿವೃತ್ತ ಜಿಲ್ಲಾ ವ್ಯವಸ್ಥಾಪಕ ಜಯದೇವರಾಜೇ ಅರಸ್, ಕುಸುಮಾನಂದ ಗ್ರೂಪ್ ಆಫ್ ಇಂಡಸ್ಟ್ರೀಸ್ ಅಧ್ಯಕ್ಷ ಕೊಳ್ಕಬೈಲ್ ಗಣೇಶ ನಾರಾಯಣ ಹೆಗ್ಡೆ, ಭರತನಾಟ್ಯ ಕಲಾವಿದೆ ಡಾ.ವಿ. ಮಾಲಿನಿ, ಎಲ್‌ಐಸಿಯ ಮುಖ್ಯ ಸಂಘಟಕ ಎಸ್.ಎನ್. ಸತ್ಯಪ್ರಕಾಶ್ ಅರಸ್ ಅವರಿಗೆ 'ಧ್ವನಿ ಕೊಟ್ಟ ಧಣಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ. ಶಿವಣ್ಣ ಉದ್ಘಾಟಿಸಿದರು. ಅಖಿಲ ಕರ್ನಾಟಕ ಕರಾವಳಿ ಒಕ್ಕೂಟದ ಅಧ್ಯಕ್ಷ ಡಾ.ಎಸ್. ಶ್ರೀನಿವಾಸ ಶೆಟ್ಟಿ ಕೃತಿ ಕುರಿತು ಮಾತನಾಡಿದರು. ತವರು ಅರಸು ಮಹಿಳಾ ಸಮಾಜದ ಅಧ್ಯಕ್ಷೆ ವಿಜಯಲಕ್ಷ್ಮಿ ಅರಸ್ ಅಧ್ಯಕ್ಷತೆ ವಹಿಸಿದ್ದರು. ಅನ್ವೇಷಣಾ ಸೇವಾ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಅಮರನಾಥರಾಜೇ ಅರಸ್, ಅಧ್ಯಕ್ಷ ಡಾ.ಎಂ.ಜಿ.ಆರ್. ಅರಸ್, ಲೇಖಕ ಡಾ. ಜಗನ್ನಾಥ ಶೆಟ್ಟಿ ಅರಸು ಸಂಘದ ಅಧ್ಯಕ್ಷ ಹೆಚ್.ಎಂ.ಟಿ.ಲಿಂಗರಾಜೇ ಅರಸ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಸ್ತ್ರೀಶಕ್ತಿ ಸಂಘಗಳಿಗೆ ಆರ್ಥಿಕ ನೆರವು: ಅ. 2ರಂದು ಯೋಜನೆಗೆ ಚಾಲನೆ

• ಸಿಎಂ ಬೊಮ್ಮಾಯಿ ಪ್ರಕಟ • ರಾಜ್ಯಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶ ಉದ್ಘಾಟನೆ



ಬೆಂಗಳೂರು, ಜೂ.22(ಕೆಎಂಶಿ)– ಸ್ತ್ರೀಶಕ್ತಿ ಸಂಘಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಗೆ ಅಕ್ಟೋಬರ್ 2 ರಂದು ಚಾಲನೆ ನೀಡಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಅವರು ಇಂದು ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, – ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು ಹಾಗೂ ಸುಮಂಗಲಿ ಸೇವಾ ಆಶ್ರಮ, ಬೆಂಗಳೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ಸ್ತ್ರೀಶಕ್ತಿ ಸಂಘಗಳು ರಾಜ್ಯದ ಆರ್ಥಿಕತೆಗೆ ಕೊಡುಗೆ ನೀಡಲು ಅನುಕೂಲವಾಗುವಂತೆ ಪ್ರಥಮ ಬಾರಿ ಆಯವ್ಯಯದಲ್ಲಿ 1.5 ಲಕ್ಷ ರೂ.ಗಳ ಆರ್ಥಿಕ ನೆರವು, ಅಭಯಂಕರ್ ಬ್ಯಾಂಕ್ ಜೋಡಣೆ, ಯಂತ್ರೋಪಕರಣ, ಪ್ರಾಜೆಕ್ಟ್‌ಗಳು, ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಮಾಡಲಾಗುವುದು.

ಅಮೆಜಾನ್‌ನಂತಹ ಆನ್‌ಲೈನ್ ವೇದಿಕೆಗಳಲ್ಲಿ ಈ ಉತ್ಪನ್ನಗಳನ್ನು ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗುವುದು. ಪ್ರಾಯೋಗಿಕವಾಗಿ ಎಲಿವೇಟ್ ಕಾರ್ಯಕ್ರಮ ಪ್ರಾರಂಭಿಸಿದ್ದು, ಒಂದು ಸ್ತ್ರೀಶಕ್ತಿ ಸಂಘ ತಿಂಗಳಿಗೆ ಸುಮಾರು 50 ಲಕ್ಷ ವಹಿವಾಟನ್ನು ಮಾಡುತ್ತಿದೆ. ಇದು ಸಂಘಟಿತವಾದ ಶ್ರಮದ ಶಕ್ತಿ ಎಂದು ತಿಳಿಸಿದರು.

ರಾಜ್ಯದ ಗ್ರಾಮೀಣ ಹಾಗೂ ನಗರ ಪ್ರದೇಶದ ಸ್ತ್ರೀಶಕ್ತಿಯ ಸಬಲೀಕರಣ ಆಗಬೇಕು. ನಮ್ಮ ಸ್ಥಳೀಯ ಮಟ್ಟದ ಸಂಘಸಂಸ್ಥೆಗಳ ಉತ್ಪನ್ನಗಳು ವಿದೇಶದಲ್ಲಿ ಮಾರಾಟವಾಗಬೇಕು ಎನ್ನುವ ಆಸೆ ಸರ್ಕಾರದ್ದು. ಆಗ ನಮ್ಮ ಆರ್ಥಿಕತೆಗೆ ಬಹಳ ಶಕ್ತಿ ಬರುತ್ತಿದೆ.

ಈ ದೇಶದಲ್ಲಿನ ಮಹಿಳೆಯರ ದುಡಿಮೆಗೆ ಬೆಲೆ ಕೊಡಬೇಕಿದೆ. ಅವರಿಗೆ ಆರ್ಥಿಕ ಸ್ವಾತಂತ್ರ್ಯ ಬಂದಾಗ ಶೈಕ್ಷಣಿಕ, ಸಾಮಾಜಿಕವಾಗಿಯೂ ಸಬಲರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಸೇವಾಸಂಸ್ಥೆಗಳು ಸಮಾನತೆಯ ಕ್ರಾಂತಿ ತರುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಒಳ್ಳೆಯ ಕೆಲಸ ಮಾಡುವ ಚಿಂತನೆ, ಪ್ರೇರಣೆ ದೊರಕುತ್ತದೆ. ಒಳ್ಳೆಯ ಕೆಲಸಗಳನ್ನು ಮಾಡುವ ಚಿಂತನೆ ಹಾಗೂ ಕ್ರಿಯಾಯೋಜನೆ ಇರಬೇಕು. ಪ್ರತಿ ವರ್ಷ ಕನಿಷ್ಠ 5 ಕ್ಷೇತ್ರಗಳಿಗೆ ಗುರಿ ನಿಗದಿಪಡಿಸಿ ಸಾಧಿಸಲು ಪ್ರಯತ್ನಿಸಿ, ಸರ್ಕಾರವೂ ಪೂರಕ ಸಹಕಾರವನ್ನು ನೀಡುತ್ತದೆ ಎಂದರು. ದೇಶದ ತಲಾವಾರು ಆದಾಯದಲ್ಲಿ ರಾಜ್ಯ 3ನೇ ಸ್ಥಾನ ದಲ್ಲಿದೆ. ಇದಕ್ಕೆ ಕೇವಲ ರಾಜ್ಯದ 30 % ಜನತೆ ಮಾತ್ರ ಕೊಡುಗೆ ನೀಡುತ್ತಿದ್ದು, 70% ಜನತೆ ಜೀವನೋಪಾಯಕ್ಕಾಗಿ ದುಡಿಯುತ್ತಿದ್ದಾರೆ.

ಈ 70% ಜನರಿಗೆ ಆರ್ಥಿಕ ನೆರವು, ಮಾರುಕಟ್ಟೆ ವ್ಯವಸ್ಥೆಗಳನ್ನು ನೀಡುವ ಮೂಲಕ ಶ್ರಮಿಕ ವರ್ಗದ ಜನರು ರಾಜ್ಯದ ಆರ್ಥಿಕತೆಗೆ ಕೊಡುಗೆ ನೀಡುವಂತಾಗುತ್ತದೆ. ಈಗ ದುಡಿಮೆಯೇ ದೊಡ್ಡಪ್ಪ ತಳಹಂತದ ಶ್ರಮಿಕ ವರ್ಗದಿಂದಲೇ ದೇಶ ಕಟ್ಟುವ ಕೆಲಸವಾಗುತ್ತಿದೆ ಎಂದರು.

ರೈತ ಉತ್ಪನ್ನಗಳ ಸಂಘಗಳ ಮೂಲಕ ರೈತ ಉತ್ಪನ್ನಗಳ ಮೌಲ್ಯವರ್ಧನೆ, ಹೆಚ್ಚಿನ ದರದಲ್ಲಿ ಮಾರಾಟಕ್ಕೆ ಯೋಜನೆಗಳನ್ನು ಕೇಂದ್ರ ಸರ್ಕಾರ ಪ್ರಾರಂಭಿಸಿದ್ದು, ಅದನ್ನು ಕರ್ನಾಟಕದಲ್ಲಿ ಉತ್ತಮ ರೀತಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಮೀನುಗಾರಿಕೆ, ಕುಶಲಕರ್ಮಿಗಳಿಗೂ ಈ ಯೋಜನೆಗಳನ್ನು ವಿಸ್ತರಣೆ ಮಾಡಲಾಗುತ್ತಿದೆ. ಚೆನ್ನಪಟ್ಟಣದಲ್ಲಿ ಆಟಿಕೆ, ಇಳಕಲ್, ಬೆಳಗಾವಿ ಶಹಾಪುರ, ಶಿಡ್ಲಘಟ್ಟ ಮತ್ತು ಮೊಳಕಾಲ್ಮೂರು ಸೀರೆ ಮೈಕ್ರೋಕ್ಲಸ್ಟರ್ ಅನ್ನು ಅಭಿವೃದ್ಧಿಪಡಿಸಲಾಗುವುದು. ಹೀಗೆ ಸ್ಥಳೀಯ ಕುಶಲಕರ್ಮಿಗಳ ಉತ್ಪನ್ನಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ ಎಂದರು.

ಮಹಿಳೆಯರಿಗೆ ರೂಪಿಸಿರುವ ಯೋಜನೆಗಳ ಲಾಭವನ್ನು ಪಡೆದುಕೊಳ್ಳಬೇಕು, ಆತ್ಮವಿಶ್ವಾಸದಿಂದ ಮುನ್ನಡೆಯಿರಿ. ಸರ್ಕಾರ ನಿಮ್ಮೊಂದಿಗಿದೆ. ಮಹಿಳೆಯರು ನಿಸರ್ಗದತ್ತವಾಗಿ ಶಕ್ತಿಯನ್ನು ಹೊಂದಿರುತ್ತಾರೆ. ಶಕ್ತಿಯ ಗುಣ ತಾಳ್ಮೆ. ಅದರಿಂದಲೇ ಎಲ್ಲವನ್ನೂ ಸಾಧಿಸಲು ಸಾಧ್ಯ.

ನಮ್ಮದು ಉಳಿತಾಯ ಮಾಡುವ ಸಂಸ್ಕೃತಿ. ಸಂಸ್ಕೃತಿಯ ಫಲವನ್ನು ನಾವು ಅನುಭವಿಸುತ್ತಿದ್ದೇವೆ. ದುಡಿಮೆಯನ್ನು ಗುರುತಿಸಬೇಕು. ನಿಮ್ಮ ಶ್ರಮಕ್ಕೆ ಬೆಲೆ, ಸ್ಥಾನಕ್ಕೆ ಗೌರವ, ನಿಮ್ಮ ಅಸ್ತಿತ್ವಕ್ಕೆ ದೊಡ್ಡ ಗುರುತು, ಬೆಂಬಲ ಕೊಟ್ಟಾಗ ದೇಶ ಸಮೃದ್ಧವಾಗಿ ಅಭಿವೃದ್ಧಿಯಾಗುತ್ತದೆ.

ಆ ನಿಟ್ಟಿನಲ್ಲಿ ನಮ್ಮ ಸರ್ಕಾರ ಬದ್ಧವಾಗಿದೆ. ಸರ್ಕಾರ ಮಹಿಳೆಯರಿಗೆ ರೂಪಿಸಿರುವ ಯೋಜನೆಗಳ ಲಾಭವನ್ನು ಪಡೆದುಕೊಳ್ಳಬೇಕು ಎಂದರು. ಇನ್ನಷ್ಟು ಬದ್ಧತೆಯಿಂದ ಕಾರ್ಯಕ್ರಮಗಳ ಅನುಷ್ಠಾನ ಮಾಡಲಾಗುವುದು. ವಿಶೇಷವಾಗಿ ಸುಶೀಲಮ್ಮನವರ ಸೇವೆ ನಮ್ಮೆಲ್ಲರಿಗೂ ಆದರ್ಶಪ್ರಾಯ ಹಾಗೂ ಮಾರ್ಗದರ್ಶಕವಾಗಿದೆ. ಅವರ ಮಾರ್ಗದರ್ಶನದಲ್ಲಿ ನಾವೆಲ್ಲರೂ ನಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡೋಣ ಎಂದರು.


ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿಯವರು ಸುಮಾರು 75 ಸಾವಿರ ಜನರಿಗೆ ಉದ್ಯೋಗ ನೀಡಿದ್ದಾರೆ. ಆಡಿದ್ದನ್ನು ಮಾಡಿ ತೋರಿಸುವವರು ಅವರು ಎಂದರು. ರಾಜ್ಯವನ್ನು ಸುಭಿಕ್ಷವಾಗಿಸಲು ಸೇವಾ ಸಂಸ್ಥೆಗಳ ಪಾತ್ರ ದೊಡ್ಡದಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಬೊಕ್ಕಸಕ್ಕೆ ಭಾರವಾಗಿರುವ ನಿಗಮಗಳ ಮುಚ್ಚಲು ನಿರ್ಧಾರ

ಕಂದಾಯ ಸಚಿವ ಆರ್. ಅಶೋಕ್ ನೇತೃತ್ವದ ಸಂಪುಟ ಉಪಸಮಿತಿ ಶಿಫಾರಸು

ಬೆಂಗಳೂರು, ಜೂ.22(ಕೆ.ಎಂ.ಶಿ.) – ಬೊಕ್ಕಸಕ್ಕೆ ಭಾರವಾಗಿರುವ ನಿಗಮಗಳನ್ನು ಮುಚ್ಚುವ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ.

ಸುದ್ದಿಗಾರರಿಗೆ ಕಂದಾಯ ಸಚಿವ ಆರ್.ಅಶೋಕ್ ಈ ವಿಷಯ ತಿಳಿಸಿದರಲ್ಲದೆ, ಸಮಾಜ ಕಲ್ಯಾಣ ಹಾಗೂ ನೀರಾವರಿ ಇಲಾಖೆ ಹೊರತುಪಡಿಸಿ, ಉಳಿದ ಇಲಾಖೆಗಳಿಗೆ ಇನ್ನು ಮುಂದೆ ಒಂದೇ ನಿಗಮವಿರುತ್ತದೆ. ಸರ್ಕಾರದ ಈ ನಿರ್ಧಾರದಿಂದ ಬೊಕ್ಕಸಕ್ಕೆ ದೊಡ್ಡ ಪ್ರಮಾಣದಲ್ಲಿ ಹಣ ಉಳಿತಾಯವಾಗುವುದರ ಜೊತೆಗೆ ಆಡಳಿತ ಸಿಬ್ಬಂದಿಯ



ಕೊರತೆಯನ್ನು ನೀಗಿಸಬಹುದು.

ಪ್ರತಿ ನಿಗಮಕ್ಕೆ ಐಎಎಸ್ ಇಲ್ಲವೆ ಕೆಎಎಸ್ ದರ್ಜೆಯ ಅಧಿಕಾರಿಗಳು, ಸರ್ಕಾರೀಯೇತರ ಅಧ್ಯಕ್ಷರು, ದೊಡ್ಡ ಪ್ರಮಾಣದ ಸಿಬ್ಬಂದಿಯನ್ನು ಹೊಂದಿರುತ್ತಿತ್ತು. ಕೆಲವು ಇಲಾಖೆಗಳಲ್ಲಿ ನಾಲ್ಕರಿಂದ ಐದು ನಿಗಮಗಳಿದ್ದು, ಅವುಗಳಿಗೆ ಕೆಲಸವೇ ಇರುವುದಿಲ್ಲ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುತ್ತಿತ್ತು, ಸಿಬ್ಬಂದಿಯ ಕೊರತೆಯು ಕಾಣುತ್ತಿತ್ತು. ಇನ್ನು ಮುಂದೆ ಅನುಪಯುಕ್ತ ನಿಗಮಗಳನ್ನು ರದ್ದು ಮಾಡಲಾಗುವುದು.

ನನ್ನ ನೇತೃತ್ವದಲ್ಲಿ ನೇಮಕವಾಗಿದ್ದ ಸಚಿವ ಸಂಪುಟ ಉಪಸಮಿತಿಯಲ್ಲಿ ಯಾವ ನಿಗಮಗಳನ್ನು ಮುಚ್ಚಬೇಕು ಮತ್ತು ಯಾವುದನ್ನು ವಿಲೀನ ಮಾಡಬೇಕೆಂಬುದನ್ನು ತೀರ್ಮಾನ ಕೈಗೊಳ್ಳಲಾಗಿದೆ.

ಕೇವಲ ನಿಗಮಗಳಷ್ಟೇ ಅಲ್ಲ ಪ್ರತಿ ಜಿಲ್ಲೆಯಲ್ಲಿ 3 ರಿಂದ 4 ಯೋಜನಾ ಪ್ರಾಧಿಕಾರಗಳಿರುತ್ತವೆ. ಅವುಗಳನ್ನು ಜಿಲ್ಲೆಗೆ ಒಂದೇ ಪ್ರಾಧಿಕಾರವೆಂದು ಗುರುತಿಸಿ, ಉಳಿದೆಲ್ಲವನ್ನು ಅವುಗಳೊಂದಿಗೆ ವಿಲೀನ ಮಾಡಲಾಗುವುದು.

ಈ ಹಿಂದೆ ರಾಜಕೀಯ ಒತ್ತಡಗಳ ಕಾರಣಕ್ಕಾಗಿ ಹೆಚ್ಚುವರಿ ನಿಗಮಗಳನ್ನು ಸ್ಥಾಪಿಸುವ ಕೆಲಸ ನಡೆಯುತ್ತಾ ಬಂದಿದ್ದು, ಈಗ ಅಂತಹ ನಿಗಮಗಳನ್ನು ಮುಚ್ಚಲು ತೀರ್ಮಾನಿಸಲಾಗಿದೆ ಎಂದರು.

ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ ಹುಟ್ಟುಹಬ್ಬ

ವಿವಿಧ ಸೇವಾ ಕಾರ್ಯಗಳ ಮೂಲಕ ಅರ್ಥಪೂರ್ಣ ಆಚರಣೆ





ಸಿದ್ದಲಿಂಗಪುರ ಗ್ರಾಪಂಯಲ್ಲಿ ಇಲ್ಲಿನ ಎಲ್ಲಾ ಪೌರಕಾರ್ಮಿಕರಿಗೆ ಹೇಮಂತ್‌ಕುಮಾರ್‌ಗೌಡ ಸಮವಸ್ತ್ರ ವಿತರಣೆ ಮಾಡಿದರು. ಮತ್ತೊಂದು ಚಿತ್ರದಲ್ಲಿ ಅವರನ್ನು ಮೈಸೂರಿನ ಅವರ ಕಚೇರಿಯಲ್ಲಿ ಬಿಜೆಪಿ ಮುಖಂಡರು ಹಾಗೂ ಅವರ ಅಭಿಮಾನಿಗಳು ಸನ್ಮಾನಿಸಿ, ಹೂಗುಚ್ಛ ನೀಡಿ ಶುಭಾಶಯ ಕೋರಿದರು.

ಮೈಸೂರು,ಜೂ.22(ಪಿಎಂ)– ವಿವಿಧ ಸೇವಾ ಕಾರ್ಯಗಳೊಂದಿಗೆ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರೂ ಆದ ಬಿಜೆಪಿ ಮುಖಂಡ ಹೇಮಂತ್‌ಕುಮಾರ್ ಗೌಡ ಅವರು ಬುಧವಾರ ತಮ್ಮ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿಕೊಂಡರು.

ಸಿದ್ದಲಿಂಗಪುರ ಗ್ರಾಪಂಗೆ ಭೇಟಿ ನೀಡಿದ ಅವರು, ಇಲ್ಲಿನ ಎಲ್ಲಾ ಪೌರಕಾರ್ಮಿಕರಿಗೆ ಸಮವಸ್ತ್ರ ವಿತರಣೆ ಮಾಡಿದರು. ಬಳಿಕ ಮಾತನಾಡಿದ ಹೇಮಂತ್‌ಕುಮಾರ್ ಗೌಡ, ಪೌರಕಾರ್ಮಿಕರು ಸ್ವಚ್ಛತಾ ಸೇನಾನಿಗಳು. ಅವರಿಂದಾಗಿಯೇ ನಮ್ಮ ಪರಿಸರ ಸ್ವಚ್ಛತೆಯಿಂದ ಕೂಡಿದ್ದು, ಇಡೀ ಸಮಾಜ ಆರೋಗ್ಯದಿಂದ ಇರಲು ಸಾಧ್ಯವಾಗಿದೆ. ಕೋವಿಡ್ ಸಂದರ್ಭದಲ್ಲಂತೂ ಪ್ರತಿಯೊಬ್ಬರಿಗೂ ಪೌರಕಾರ್ಮಿಕರ ಮಹತ್ವ ಅರಿವಾಯಿತು ಎಂದು ನುಡಿದರು.

ಕೋವಿಡ್ ಸಂದರ್ಭದಲ್ಲಿ ಸಿದ್ದಲಿಂಗಪುರ ಗ್ರಾಪಂನ ಎಲ್ಲಾ ಪೌರಕಾರ್ಮಿಕರ ಕಾರ್ಯವೈಖರಿಯನ್ನು ಹತ್ತಿರದಿಂದ ನೋಡಿದ್ದು, ನಿಜಕ್ಕೂ ಅವರ ಸೇವೆ ಪ್ರಶಂಸನೀಯ. ಪೌರಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಲು ಯಾವುದೇ ಸಂದರ್ಭದಲ್ಲಿಯಾದರೂ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಸರ್ಕಾರದ ಪ್ರತಿನಿಧಿಯಾಗಿದೆ ಅವರಿಗೆ ಸದಾ ಸ್ಪಂದಿಸುತ್ತೇನೆ ಎಂದು ಹೇಳಿದರು.

ಆಸ್ಪತ್ರೆಯಲ್ಲಿ ಸೇವಾ ಕಾರ್ಯ: ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಇಎಸ್‌ಐ ಆಸ್ಪತ್ರೆಗೆ ಭೇಟಿ ನೀಡಿದ ಹೇಮಂತ್‌ಕುಮಾರ್ ಗೌಡ, ನವಜಾತ ಶಿಶುಗಳ ಹಾರೈಕೆಗಾಗಿ 6 ತೊಟ್ಟಿಗಳನ್ನು ಕೊಡುಗೆಯಾಗಿ ನೀಡಿದರು. ಅಲ್ಲದೆ, ಆಸ್ಪತ್ರೆಯ ಎಲ್ಲಾ ಡಿ–ಗ್ರೂಪ್ ನೌಕರರಿಗೆ ಬಟ್ಟೆ ವಿತರಣೆ ಮಾಡಿ, ಆಸ್ಪತ್ರೆ ಸಿಬ್ಬಂದಿಗೆ ಮಧ್ಯಾಹ್ನ ಊಟ ವ್ಯವಸ್ಥೆ ಮಾಡಿಸಿದ್ದರು.

ಅಭಿಮಾನಿಗಳಿಂದ ಅಭಿನಂದನೆ: ಹೇಮಂತ್ ಕುಮಾರ್‌ಗೌಡ ಅವರ ಹುಟ್ಟುಹಬ್ಬದ ಪ್ರಯುಕ್ತ ಪ್ರಾಧಿಕಾರದ ಅವರ ಕೊಠಡಿಯಲ್ಲಿ ಬಿಜೆಪಿ ಮುಖಂಡರು ಹಾಗೂ ಅವರ ಅಭಿಮಾನಿಗಳು ಸನ್ಮಾನಿಸಿ, ಹೂಗುಚ್ಛ ನೀಡಿ ಶುಭಾಶಯ ಕೋರಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಮಾಧ್ಯಮ ಪ್ರಮುಖ್ ರಾಜಕುಮಾರ್, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮಹಾದೇವಪ್ಪ, ಪ್ರಧಾನ ಕಾರ್ಯದರ್ಶಿ ಕೃಷ್ಣಮೂರ್ತಿ, ಪಕ್ಷದ ಮುಖಂಡರಾದ ವೇದರಾಜ, ಸೈಲೆಂಟ್ ಶಿವು, ನೇಹಾ, ಜಿಲ್ಲಾ ಎಸ್‌ಟಿ ಮೋರ್ಚಾ ಅಧ್ಯಕ್ಷ ಚಿದಂಬರ್, ಮಹಾಶಕ್ತಿ ಕೇಂದ್ರ ಅಧ್ಯಕ್ಷ ಲೋಹಿತ್ ಗೌಡ, ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿವೇಕ್‌ಗೌಡ, ವಕೀಲ ಕುಮಾರ್, ಮುಖಂಡರಾದ ನಂಜುಂಡಸ್ವಾಮಿ, ಮಹಾದೇವ, ಹರೀಶ್, ಲಾರಿ ಶ್ರೀನಿವಾಸ್, ಮಹದೇವಯ್ಯ, ಕೂರ್ಗಳ್ಳಿ ಲೋಕೇಶ್, ರೇವಣ್ಣ, ಟಿ.ನರಸೀಪುರ ಶಿವಕುಮಾರ, ಸಿದ್ದೇಶ್ ವರಕೋಡು, ಪ್ರಕಾಶ್, ವಿಜಯನಗರ ದಶರತ್ ಮತ್ತಿತರರು ಹಾಜರಿದ್ದರು.

ಆಫ್ಘನ್‌ನಲ್ಲಿ ಭೂಕಂಪ: ಮೃತರ ಸಂಖ್ಯೆ 1,000ಕ್ಕೆ ಏರಿಕೆ

ಕಾಬೂಲ್, ಜೂ.22– ಅಫ್ಘಾನಿಸ್ತಾನದಲ್ಲಿ ಬುಧವಾರ ತೀವ್ರ ಭೂಕಂಪ ಸಂಭವಿಸಿದ ನಂತರ ಮೃತರ ಸಂಖ್ಯೆ 1,000ಕ್ಕೆ ಏರಿಕೆಯಾಗಿದೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ.



ದೇಶದ ಆಗ್ನೇಯ ಭಾಗದಲ್ಲಿರುವ ಖೋಸ್ಟ್ ನಗರದ ಬಳಿ ಇಂದು ಮುಂಜಾನೆ ತೀವ್ರ ಭೂಕಂಪ ಸಂಭವಿಸಿದೆ. ಖೋಸ್ಟ್ ಪ್ರಾಂತ್ಯದ ಸ್ಪೆರಾ ಜಿಲ್ಲೆ ಮತ್ತು ಪಕ್ಟಿಕಾ ಪ್ರಾಂತ್ಯದ ಬರ್ಮಲಾ, ಜಿರುಕ್, ನಾಕಾ ಮತ್ತು ಗಯಾನ್ ಜಿಲ್ಲೆಗಳು ಹೆಚ್ಚು ಹಾನಿಗೆ ಒಳಗಾಗಿವೆ.

ಭೂಕಂಪದಿಂದಾಗಿ 1,000 ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. 1,500 ಕ್ಕೂ ಹೆಚ್ಚು ಜನರು ಗಂಭೀರ ಗಾಯಗೊಂಡಿದ್ದಾರೆ. ಅನೇಕ ಹಳ್ಳಿಗಳು ನಾಶವಾಗಿವೆ ಎಂದು ಪಕ್ಟಿಕಾ ಪ್ರಾಂತ್ಯದ ಸಂಸ್ಕೃತಿ ಮತ್ತು ಮಾಹಿತಿ ವಿಭಾಗದ ಮುಖ್ಯಸ್ಥ ಅಮೀನ್ ಹುಝೈಫಾ ಸ್ಪುಟ್ನಿಕ್‌ಗೆ ಮಾಹಿತಿ ನೀಡಿದ್ದಾರೆ.

ಸ್ಥಳಕ್ಕೆ ಹೆಲಿಕಾಪ್ಟರ್ ಹಾಗೂ ರಕ್ಷಣಾ ತಂಡ ಧಾವಿಸಿದ್ದು, ರಕ್ಷಣಾ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಸ್ಥಳೀಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ತಾಲಿಬಾನ್ ವಕ್ತಾರ ಜಬೀವುಲ್ಲಾ ಮುಜಾಹಿದ್ ಮಾತನಾಡಿ, ಭೂಕಂಪದಿಂದ ಸಂತ್ರಸ್ತರಾಗಿರುವ ಜನರಿಗೆ ನೆರವು ನೀಡುವ ಕುರಿತು ಚರ್ಚಿಸಲು ಇಂದು ತುರ್ತು ಸಚಿವ ಸಂಪುಟ ಸಭೆ ನಡೆಸಲಾಯಿತು. ಭೂಕಂಪದಿಂದ ಹಾನಿಗೊಳಗಾದ ಜನರಿಗೆ ಸಹಾಯ ಮಾಡುವುದರ ಜೊತೆಗೆ, ಸಂಬಂಧಿತ ಸಂಸ್ಥೆಗಳು ರಕ್ಷಣಾ ತಂಡಗಳನ್ನು ಕಳುಹಿಸಲು ಕಾರ್ಯಪ್ರವೃತ್ತವಾಗಿವೆ ಎಂದು ತಿಳಿಸಿದ್ದಾರೆ.



ನಂ.ಗೂಡು ಬಳಿ ನಕಲಿ ರಸಗೊಬ್ಬರ ಉತ್ಪಾದನಾ ಘಟಕ

• ನಂಜನಗೂಡು, ಮೈಸೂರು ಕೃಷಿ ಇಲಾಖೆ ಅಧಿಕಾರಿಗಳ ಜಂಟಿ ಕಾರ್ಯಾಚರಣೆ • ಅಪಾರ ಪ್ರಮಾಣದ ನಕಲಿ ಗೊಬ್ಬರ ವಶ • ಕಡಿಮೆ ಬೆಲೆಗೆ ಸ್ಥಳೀಯವಾಗಿ ದೊರೆಯುವ ಗೊಬ್ಬರ ಖರೀದಿಸದಂತೆ ರೈತರಿಗೆ ಎಚ್ಚರಿಕೆ

ಕಳೆದ ಹಲವು ವರ್ಷಗಳಿಂದ ಕಳಪೆ ಗೊಬ್ಬರ ವಿತರಣೆಯಾಗುತ್ತಿರುವ ಬಗ್ಗೆ ರೈತರಿಂದ ದೂರು ಕೇಳಿ ಬರುತ್ತಿತ್ತು. ತಾಲೂಕಿನ ಹಂಡುವಿನಹಳ್ಳಿ ರೈತ ರಾಜು ಎಂಬುವರು ದೂರು ನೀಡಿದ ಮೇರೆಗೆ ನಕಲಿ ಗೊಬ್ಬರ ಮಾರಾಟಗಾರರ ಬಳಿ ಖರೀದಿಸಿದ್ದ ಗೊಬ್ಬರ ಪರಿಶೀಲನೆಗೆ ಒಳಪಡಿಸಿದಾಗ ಅದು ನಕಲಿ ಗೊಬ್ಬರ ಎಂದು ಮೇಲ್ನೋಟಕ್ಕೆ ತಿಳಿದು ಬಂದಿತು. ಈ ಗೊಬ್ಬರ ತಯಾರಿಕಾ ಘಟಕವನ್ನು ಪತ್ತೆ ಹಚ್ಚಲು ಶಾಸಕ ಬಿ.ಹರ್ಷವರ್ಧನ್ ಸುಳಿವಿನ ಮೇರೆಗೆ ಕಾರ್ಖಾನೆಗೆ ದಾಳಿ ಮಾಡಲಾಯಿತು.

– ದೀಪಕ್, ತಾಲೂಕು ಕೃಷಿ ಸಹಾಯಕ ನಿರ್ದೇಶಕ.

ನಂದಿ ಬ್ರ್ಯಾಂಡ್ ಹೆಸರಿನ ಸಾಯಿಲ್ ಕಂಡೀಷನರ್, ಪೊಟಾಷಿಯಂ, ಮ್ಯಾಗ್ನೇಷಿಯಂ, ಸಲ್ಫರ್, ದ್ರವ ರೂಪದ ಔಷಧಗಳು, ನಕಲಿ ಗೊಬ್ಬರ ಅಪಾರ ಪ್ರಮಾಣದಲ್ಲಿ ದೊರೆತಿದೆ. ಈ ರಸಗೊಬ್ಬರ ತಯಾರಿಕೆಗೆ ಯಾವುದೇ ಲೈಸೆನ್ಸ್ ಪಡೆದಿಲ್ಲ. ಜೊತೆಗೆ ಬೆಂಗಳೂರಿನ ನಕಲಿ ವಿಳಾಸವಿರುವ ಕರ್ನಾಟಕ ಬಿಸಿನೆಸ್ ಕಾರ್ಪೊರೇಷನ್ ಹೆಸರಿನಲ್ಲಿ ನಂಬರ್ ಪ್ಲೇಟ್ ಇಲ್ಲದ ಟೆಂಪೋ, ವಾಹನಗಳನ್ನು ಬಳಸಿ ಮಾರಾಟ ಮಾಡುತ್ತಿದ್ದಾರೆ. ಈ ಬಗ್ಗೆ ಪೊಲೀಸರಿಗೆ ದೂರು ನೀಡಿ, ಎಫ್‌ಐಆರ್ ದಾಖಲು ಮಾಡಲಾಗಿದೆ.

– ರಾಜು, ಜಿಲ್ಲಾ ಉಪ ಕೃಷಿ ನಿರ್ದೇಶಕ.

ನಂಜನಗೂಡು, ಜೂ.22(ಸುದರ್ಶನ್)– ನಂಜನಗೂಡು– ಗುಂಡ್ಲುಪೇಟೆ ತಾಲೂಕುಗಳ ಗಡಿಯ ಹಿರೀಕಾಟಿ ಗ್ರಾಮಕ್ಕೆ ಸೇರಿದ ಜಮೀನೊಂದರಲ್ಲಿ ನಕಲಿ ರಸಗೊಬ್ಬರ ತಯಾರಿಕಾ ಘಟಕ ಪತ್ತೆಯಾಗಿದ್ದು, ಖಚಿತ ಮಾಹಿತಿ ಮೇರೆಗೆ ಘಟಕದ ಮೇಲೆ ನಂಜನಗೂಡು, ಮೈಸೂರು ಕೃಷಿ ಇಲಾಖೆ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ ಅಪಾರ ಪ್ರಮಾಣದ ನಕಲಿ ರಸಗೊಬ್ಬರದ ಮೂಟೆಗಳನ್ನು ವಶಪಡಿಸಿಕೊಂಡಿದ್ದಾರೆ.

ಎರೆಮಣ್ಣಿಗೆ ಸುಣ್ಣ, ಗರ್ಭಿಣಿ ಸ್ತ್ರೀಯರಿಗೆ ವಿತರಿಸುವ ಪುಷ್ಟಿ ಪುಡಿಯನ್ನು ಮಿಶ್ರಣ ಮಾಡಿ ರಸಗೊಬ್ಬರವೆಂದು ನಂದಿ ಬ್ರ್ಯಾಂಡ್ ಹೆಸರಿನಲ್ಲಿ ಮಾರಾಟ ಮಾಡಲು ಚೀಲಗಳಲ್ಲಿ ತುಂಬಿಸುತ್ತಿದ್ದರು. ಈ ವೇಳೆ ಅಧಿಕಾರಿಗಳನ್ನು ಕಂಡು ಸಿಬ್ಬಂದಿ ಹಾಗೂ ಮಾಲೀಕರು ಸ್ಥಳದಿಂದ ಪರಾರಿಯಾಗಿದ್ದಾರೆ.

ದಾಳಿ ವೇಳೆ ನಕಲಿ ಗೊಬ್ಬರ ತಯಾರಿಕೆಗೆ ಬಳಸುವ ಯಂತ್ರೋಪಕರಣಗಳು, ಎರೆಮಣ್ಣು, ಕೆಂಪುಮಣ್ಣು, ಸುಣ್ಣ, ದ್ರವ ರೂಪದ ಕಚ್ಚಾ ವಸ್ತುಗಳು ಮತ್ತು ಕಲರ್‌ಗೆ ಉಪಯೋಗಿಸುವ ರೆಡ್‌ಆಕ್ಸೈಡ್, ಪ್ಯಾಕಿಂಗ್‌ಗೆ ಬಳಸುವ ಚೀಲಗಳು, ಬಾಟಲ್‌ಗಳು, ಲೇಬಲ್‌ಗಳು ಮತ್ತು ಅಂತಿಮವಾಗಿ ಮಾರುಕಟ್ಟೆಗೆ ಅಪಾರ ಪ್ರಮಾಣದಲ್ಲಿ ಸರಬರಾಜಿಗೆ ಸಿದ್ಧವಾಗಿದ್ದನ್ನು ಕಂಡು ಕೃಷಿ ಅಧಿಕಾರಿಗಳು ದಂಗಾದರು. ಗರ್ಭಿಣಿ ಸ್ತ್ರೀಯರಿಗೆ ವಿತರಿಸುವ ಉಚಿತ ಪುಷ್ಟಿ ಪೌಡರ್‌ಗಳು ಸಹ ರಾಶಿ ರಾಶಿ ಬಿದ್ದಿದೆ. ನಂಬರ್ ಪ್ಲೇಟ್ ಇಲ್ಲದ ಟೆಂಪೋ, ಲಾರಿ, ಆಟೋಗಳು ಇರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಈ ಸಂಬಂಧ ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಖದೀಮರ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ. ಇದೇ ವೇಳೆ ಗುಂಡ್ಲುಪೇಟೆ ಸಹಾಯಕ ಕೃಷಿ ನಿರ್ದೇಶಕ ಪ್ರವೀಣ್, ಕೃಷಿ ಅಧಿಕಾರಿಗಳಾದ ಕೃಷ್ಣ, ರಮೇಶ್ ಸೇರಿದಂತೆ ಇತರರು ಇದ್ದರು.





ದೂರುದಾರ ರೈತ ರಾಜು ಪತ್ರಿಕೆಯೊಂದಿಗೆ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಗೊಬ್ಬರ ಮಾರಾಟಕ್ಕೆ ಬಂದವರ ಬಳಿ ಕಡಿಮೆ ಬೆಲೆಗೆ ಸಿಗುತ್ತದೆಂದು 10 ಮೂಟೆ ಗೊಬ್ಬರ ಖರೀದಿಸಿದೆ. ಆ ಗೊಬ್ಬರವನ್ನು ಬಾಳೆ, ಟೊಮೆಟೊ ಬೆಳೆಗೆ ಹಾಕಿದಾಗ ಬೆಳೆ ನಾಶವಾಯಿತು. ನನಗೆ ಅನುಮಾನ ಬಂದು ಚೀಲದೊಂದಿಗೆ ಕೃಷಿ ಅಧಿಕಾರಿಗಳಿಗೆ ದೂರು ನೀಡಿದೆ. ರೈತರು ಕಡಿಮೆ ಬೆಲೆಗೆ ಸಿಗುತ್ತದೆಂದು ಸ್ಥಳೀಯವಾಗಿ ಯಾವುದೇ ಗೊಬ್ಬರಗಳನ್ನು ಖರೀದಿಸಿ ಮೋಸ ಹೋಗಬಾರದು ಎಂದು ಮನವಿ ಮಾಡುತ್ತೇನೆ ಎಂದರು.

ಹುಣಸೂರಿನ ಆದಿಚುಂಚನಗಿರಿ ಕಾಲೇಜಿಗೆ ಶೇ.81ರಷ್ಟು ಫಲಿತಾಂಶ



ಹುಣಸೂರು, ಜೂ.22(ಕೆಕೆ)– ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶದಲ್ಲಿ ಹುಣಸೂರಿನ ಆದಿಚುಂಚನಗಿರಿ ಪದವಿ ಪೂರ್ವ ಕಾಲೇಜಿಗೆ ಶೇ. 81ರಷ್ಟು ಫಲಿತಾಂಶ ಬಂದಿದೆ ಎಂದು ಕಾಲೇಜಿನ ಪ್ರಾಂಶುಪಾಲ ಹೆಚ್.ಜಿ.ಕುಮುದಾ ಹೇಳಿದರು.

ವಾಣಿಜ್ಯ ವಿಭಾಗದಲ್ಲಿ ಎಂ.ಕೆ.ಧೀರಜ್ 580(96) ಪ್ರಥಮ, ಶರತ್‌ಬಾಬು 552 ದ್ವಿತಿಯ ಹಾಗೂ ಕಲಾ ವಿಭಾಗದಲ್ಲಿ ಗಿರೀಶ್ 539(90) ಪ್ರಥಮ, ಹೆಚ್.ಆರ್.ಮಾನಸ 536(89) ದ್ವಿತೀಯ, ಪವನ್‌ಕುಮಾರ್ 531(89) ತೃತೀಯ ಸ್ಥಾನ, ಧನುಶ್ರೀ 523(88) 4ನೇ ಸ್ಥಾನ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಕಾಲೇಜಿನ 101 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಈ ಪೈಕಿ 81 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದು ಮಾಹಿತಿ ನೀಡಿದರು.

ಬೆಟ್ಟದಪುರದಲ್ಲಿ ಕೈಗಾರಿಕಾ ತರಬೇತಿ ಕೇಂದ್ರ ಉದ್ಘಾಟನೆ



ಬೆಟ್ಟದಪುರ, ಜೂ.22(ಶಿವದೇವ್)– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಗ್ರಾಮದಲ್ಲಿ ಸುಮಾರು 31 ಕೋಟಿ ರೂ. ವೆಚ್ಚದಲ್ಲಿ ಉನ್ನತೀಕರಿಸಿದ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಶಾಸಕ ಕೆ.ಮಹದೇವ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಐಟಿಐನಿಂದ ಗ್ರಾಮಾಂತರ ಪ್ರದೇಶದ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದ್ದು, ಸರ್ಕಾರಿ, ಅರೆ ಸರ್ಕಾರಿ ಹಾಗೂ ಸ್ವಯಂ ಉದ್ಯೋಗ ಮಾಡುವ ಮೂಲಕ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಅನುಕೂಲವಾಗಲಿದೆ ಎಂದರು. ಕೇಂದ್ರದ ಪ್ರಾಂಶುಪಾಲ ಶ್ರೀಧರ್ ಮಾತನಾಡಿದರು.

ಈ ವೇಳೆ ಉಪತಹಶೀಲ್ದಾರ್ ಶಶಿಧರ್, ಗ್ರಾಪಂ ಅಧ್ಯಕ್ಷೆ ಮಂಜುಳಾ ಚಂದ್ರೇಗೌಡ, ಉಪಾಧ್ಯಕ್ಷೆ ಸೌಮ್ಯಾ ಸಂತೋಷ್, ಸದಸ್ಯರಾದ ರಾಜಶೇಖರ್, ಗಿರಿಗೌಡ ಬೆಟ್ಟದತುಂಗ ಗ್ರಾಪಂ ಅಧ್ಯಕ್ಷ ದೇವರಾಜ್, ತಾಲೂಕು ಜೆಡಿಎಸ್ ಮಹಿಳಾ ಅಧ್ಯಕ್ಷೆ ಪ್ರೀತಿ ಅರಸ್, ಟಿಎಪಿಸಿಎಂಎಸ್ ಅಧ್ಯಕ್ಷ ನಾಗೇಂದ್ರ, ಮುಖಂಡರಾದ ಗಗನ್, ದೇವರಾಜು, ನರಸಿಂಹೇಗೌಡ, ಸ್ವಾಮಿಗೌಡ, ಗ್ರಾಪಂ ಪಿಡಿಓ ದಿವಾಕರ್, ಇಂಜಿನಿಯರ್ ನಿಶ್ಚಿತಾ ಹಾಜರಿದ್ದರು.

ಹೆಚ್.ಡಿ.ಕೋಟೆ: ಆಸ್ಪತ್ರೆಗೆ ದಾಖಲಾಗಿದ್ದ ಯುವಕ ಸಾವು

ವೈದ್ಯರ ನಿರ್ಲಕ್ಷ್ಯ ಆರೋಪ: ಪೋಷಕರ ಪ್ರತಿಭಟನೆ



ಕರುಳುಬೇನೆ ಚಿಕಿತ್ಸೆಗೆ ಎಂದು ಕಳೆದ ಮೂರು ದಿನಗಳಿಂದ ನಮ್ಮ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆಯುತ್ತಿದ್ದರು. ಮಂಗಳವಾರ ರಾತ್ರಿ ಆಪರೇಷನ್ ಮಾಡುತ್ತಿದ್ದ ಸಂದರ್ಭದಲ್ಲಿ ಯುವಕನಿಗೆ ಹೃದಯಾಘಾತವಾಗಿದೆ. ಈ ಸಂದರ್ಭದಲ್ಲಿ ನಮ್ಮ ಆಸ್ಪತ್ರೆಯ ವೈದ್ಯರ ಸಮೇತ ಆಂಬುಲೆನ್ಸ್‌ನಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಮಿಷನ್ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ದಾರಿ ಮಧ್ಯೆ ಯುವಕ ಸಾವನ್ನಪ್ಪಿದರು.

–ಡಾ.ಹಿಲ್ಡಾ ಲೋಬೋ, ಆಸ್ಪತ್ರೆಯ ವೈದ್ಯ.

ಯುವಕ ಮೃತಪಟ್ಟ ನಂತರ ಪಟ್ಟಣದ ಖಾಸಗಿ ಆಸ್ಪತ್ರೆಯ ಮುಂಭಾಗ ಸಾರ್ವಜನಿಕರು ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಆಸ್ಪತ್ರೆಯ ವೈದ್ಯರಿಂದ ವರದಿ ಪಡೆದಿದ್ದೇನೆ. ಇದನ್ನು ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಸಲ್ಲಿಸಲಾಗುವುದು.

–ಡಾ.ಟಿ.ರವಿಕುಮಾರ್, ತಾಲೂಕು ಆರೋಗ್ಯಾಧಿಕಾರಿ, ಹೆಚ್.ಡಿ.ಕೋಟೆ.

ಹೆಚ್.ಡಿ.ಕೋಟೆ, ಜೂ.22(ಮಂಜು)– ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಯುವಕನೋರ್ವ ಚಿಕಿತ್ಸೆ ವೇಳೆ ಸಾವನ್ನಪ್ಪಿದ್ದು, ಈತನ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿ ಯುವಕನ ಪೋಷಕರು ಹಾಗೂ ಸಂಬಂಧಿಕರು ಆಸ್ಪತ್ರೆಯ ವಿರುದ್ಧ ಪ್ರತಿಭಟನೆ ನಡೆಸಿರುವ ಘಟನೆ ಹೆಚ್.ಡಿ.ಕೋಟೆ ಪಟ್ಟಣದಲ್ಲಿ ಬುಧವಾರ ನಡೆದಿದೆ.



ಪಟ್ಟಣದ ಶಿವಾಜಿ ನಗರದ ನಿವಾಸಿ ರಾಜೇಶ್ ಅವರ ಪುತ್ರ ಇಮ್ಯಾನುಲ್(21) ಮೃತಪಟ್ಟ ಯುವಕ. ಈತನನ್ನು ಕಳೆದ ಮಂಗಳವಾರ ಕರುಳುಬೇನೆ ಹೊಟ್ಟೆನೋವು ಸಮಸ್ಯೆಯಿಂದ ಪಟ್ಟಣದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶಸ್ತ್ರ ಚಿಕಿತ್ಸೆ ಮಾಡುವ ವೇಳೆ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾನೆ ಎಂದು ಸಂಬಂಧಿಕರು ಆರೋಪಿಸಿ, ಆಸ್ಪತ್ರೆಯ ಮುಂಭಾಗದ ರಸ್ತೆ ತಡೆ, ನಡೆಸಿ ಪ್ರತಿಭಟನೆ ನಡೆಸಿದರು.


ಆಸ್ಪತ್ರೆಯಲ್ಲಿ ವೈದ್ಯರ ನಿರ್ಲಕ್ಷ್ಯದಿಂದ ಬಹಳಷ್ಟು ಸಾವು– ನೋವುಗಳು ಆಗುತ್ತಿರುವುದರಿಂದ ಸಂಬಂಧಪಟ್ಟ ಮೇಲಾಧಿಕಾರಿಗಳು ಆಸ್ಪತ್ರೆಯ ಆಡಳಿತ ಅಧಿಕಾರಿಗಳು ಹಾಗೂ ವೈದ್ಯರ ಮೇಲೆ ಕ್ರಮ ಜರುಗಿಸಬೇಕು. ಮೃತ ಯುವಕನ ಕುಟುಂಬಕ್ಕೆ ನ್ಯಾಯ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ಪೊಲೀಸರು ಮಧ್ಯಪ್ರವೇಶಿಸಿ ಪ್ರತಿಭಟನಾಕಾರರನ್ನು ಮನವೊಲಿಸಲು ಪ್ರಯತ್ನಿಸಿದರು. ಆದರೆ, ಇದು ಯಶಸ್ಸು ಕಾಣಲಿಲ್ಲ. ಬಳಿಕ, ಪಟ್ಟಣದ ರಾಜಕೀಯ ಮುಖಂಡರೊಬ್ಬರು ಮಧ್ಯಪ್ರವೇಶಿಸಿ ಆಸ್ಪತ್ರೆಯ ಆಡಳಿತ ಅಧಿಕಾರಿಗಳೊಂದಿಗೆ ಚರ್ಚಿಸಿ ಮೃತ ಯುವಕನ ಕುಟುಂಬಕ್ಕೆ 2.5ಲಕ್ಷ ರೂ. ಪರಿಹಾರ ಕೊಡಿಸುವ ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆದರು.

ಮೈಸೂರು ಮಿತ್ರ ಗುರುವಾರ 23 ಜೂನ್ 2022

ನಾಗರಹೊಳೆಯಲ್ಲಿ ಸ್ಟೀಲ್ ರೋಪ್ ಬೇಲಿ

ಉಸ್ತುವಾರಿ ಸಚಿವ ಸೋಮಶೇಖರ್ ಪರಿಶೀಲನೆ



ಮೈಸೂರು, ಜೂ.22– ಕಾಡಿನಿಂದ ನಾಡಿಗೆ ಲಗ್ಗೆ ಇಡುವ ಕಾಡಾನೆಗಳ ನಿಯಂತ್ರಣಕ್ಕೆ, ರಾಜ್ಯದಲ್ಲೇ ಮೊದಲ ಬಾರಿಗೆ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ದಲ್ಲಿ ಅಳವಡಿಸಿರುವ ಸ್ಟೀಲ್ ವೈಯರ್ ರೋಪ್ ಬ್ಯಾರಿಕೇಡ್ ಅನ್ನು ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ರಾದ ಎಸ್.ಟಿ.ಸೋಮಶೇಖರ್ ವೀಕ್ಷಿಸಿದರು.

ನಾಗರಹೊಳೆ ರಾಷ್ಟ್ರೀಯ ಉದ್ಯಾನ ವನದ ವೀರನಹೊಸಹಳ್ಳಿ ವಲಯ ವ್ಯಾಪ್ತಿ ಯಲ್ಲಿ ರೈಲ್ವೆ ಹಳಿ ಬ್ಯಾರಿಕೇಡ್‌ಗಳನ್ನೇ ಆನೆಗಳು ದಾಟಿ ಬರುವುದರಿಂದ ಸ್ಟೀಲ್ ವೈಯರ್ ರೋಪ್ ಬ್ಯಾರಿಕೇಡ್ ಅನ್ನು ಅಳವಡಿಕೆ ಮಾಡಲಾಗಿದೆ. ಆನೆಗಳ ತಡೆಗೆ ಹೇಗೆ ಸಹಕಾರಿಯಾಗಲಿದೆ ಎಂಬುದನ್ನು ಸಚಿವರಿಗೆ ಅರಣ್ಯ ಅಧಿಕಾರಿಗಳು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು.

ರೈಲ್ವೆ ಬ್ಯಾರಿಕೇಡ್‌ಗೆ ಹಳಿಗಳ ಕೊರತೆ ಹಾಗೂ ದುಬಾರಿ ವೆಚ್ಚ ತಗುಲುವುದ ರಿಂದ ರಾಜ್ಯದಲ್ಲಿ ಇದೇ ಪ್ರಥಮ ಬಾರಿಗೆ ರೋಪ್ ಬ್ಯಾರಿಕೇಡ್ ಅಳವಡಿಸಲಾಗಿದೆ. 13 ಅಡಿ ಉದ್ದದ, 1.5 ಟನ್ ತೂಕದ ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಸಿಮೆಂಟ್ ಕಂಬಗಳನ್ನು ನಿರ್ಮಿಸಿ ಅದನ್ನು ಭೂಮಿಯಿಂದ 5 ಅಡಿ ಆಳದಲ್ಲಿ ನೆಡ ಲಾಗುತ್ತದೆ. ನಾಗರಹೊಳೆಯಲ್ಲಿ ಪ್ರಥಮ ಪ್ರಯೋಗ ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಇತ್ತೀಚಿನ ದಿನಗಳಲ್ಲಿ ಮಾನವ–ವನ್ಯ ಜೀವಿ ಸಂಘರ್ಷ ಹೆಚ್ಚಾಗುತ್ತಿದೆ. ಕಾಡಿ ನಿಂದ ನಾಡಿಗೆ ಆನೆಗಳ ದಾಳಿ ತಡೆಗೆ ರೈಲ್ವೆ ಹಳಿಗಳ ಬ್ಯಾರಿಕೇಡ್, ಸೋಲಾರ್ ತಂತಿ ಬೇಲಿ ಸೇರಿದಂತೆ ಹಲವು ಕ್ರಮ ಗಳನ್ನು ಅರಣ್ಯ ಇಲಾಖೆ ಕೈಗೊಂಡಿದೆ. ಈಗ ಸ್ಟೀಲ್ ವೈಯರ್ ರೋಪ್ ಬ್ಯಾರಿ ಕೇಡ್ ಅಳವಡಿಕೆ ಮಾಡಿದ್ದು, ಇದರಿಂದ ಆನೆಗಳು ನಾಡಿಗೆ ಆಗಮಿಸುವುದನ್ನು ತಡೆ ಯಲು ಸಹಕಾರಿಯಾಗುತ್ತದೆ ಎಂದರು.

ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ವೀರನಹೊಸಹಳ್ಳಿ ವಲಯ ವ್ಯಾಪ್ತಿಯಲ್ಲಿ ಸ್ಟೀಲ್ ವೈಯರ್ ರೋಪ್ ಬ್ಯಾರಿಕೇಡ್ ಅಳವಡಿಕೆ ಮಾಡಲಾಗಿದೆ. ಇದೊಂದು ಹೊಸತನದ ಪ್ರಯೋಗವಾಗಿದೆ ಎಂದು ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಸೇತುವೆ ನಿರ್ಮಾಣಕ್ಕೆ ಶಾಸಕರಿಂದ ಭೂಮಿಪೂಜೆ



ತಿ.ನರಸೀಪುರ, ಜೂ.22(ಎಸ್‌ಕೆ)– ತಾಲೂಕಿನ ದೊಡ್ಡೇಬಾಗಿಲು ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆ ಅನುದಾನ ದಡಿ ನಿರ್ಮಾಣ ಮಾಡಲಾಗುತ್ತಿರುವ ಬೆನಕನ ಹಳ್ಳಿ–ದೊಡ್ಡೇಬಾಗಿಲು ರಸ್ತೆ ಸಂಖ್ಯೆ 9.40 ರಲ್ಲಿ ರಾಮಸ್ವಾಮಿ ನಾಲೆಗೆ ಅಡ್ಡಲಾಗಿ ನಿರ್ಮಿಸಲಾಗುವ ಸೇತುವೆ ನಿರ್ಮಾಣ ಕಾಮಗಾರಿಗೆ ಶಾಸಕ ಎಂ.ಅಶ್ವಿನ್‌ಕುಮಾರ್ ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ರೈತರ ಜಮೀನುಗಳಿಗೆ ತೆರಳಲು ಮತ್ತು ನೆರೆಯ ಗ್ರಾಮಗಳಿಗೆ ಹೋಗುವ ಜನರಿಗೆ ಇದು ಪ್ರಮುಖ ರಸ್ತೆಯಾಗಿರುವುದರಿಂದ ಕಾಲುವೆ ಮೇಲಿನ ಸೇತುವೆ ನಿರ್ಮಾಣ ಕಾರ್ಯ ಗುಣಮಟ್ಟದಿಂದ ಕೂಡಿರಬೇಕು ಎಂದು ಹೇಳಿದರು. ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಪ್ರಮಾಣದ ಜನರು ವ್ಯವಸಾಯವನ್ನು ಮುಖ್ಯ ಕಸುಬನ್ನಾಗಿ ಅವಲಂಬಿಸಿದ್ದಾರೆ. ಅವರ ವ್ಯವಸಾಯದ ಚಟುವಟಿಕೆಗಳಿಗೆ ಅನು ಕೂಲ ಕಲ್ಪಿಸಿಕೊಡಬೇಕಾದದ್ದು ಅನಿವಾರ್ಯ. ರೈತರು ಜಮೀನಿಗೆ ವ್ಯವಸಾಯ ಪರಿಕರ ಗಳನ್ನು ಕೊಂಡೊಯ್ಯಲು, ಭತ್ತದ ಕಟಾವು ಮಾಡಲು ಹಾಗೂ ಬೆಳೆದ ಉತ್ಪನ್ನಗಳನ್ನು ಸಲೀಸಾಗಿ ಸಾಗಿಸಬೇಕಾದರೆ ಉತ್ತಮವಾದ ರಸ್ತೆಗಳು ಅವಶ್ಯಕವಾಗಿದೆ. ಹಾಗಾಗಿ, ಕಾಲುವೆ ಮೇಲಿನ ಸೇತುವೆ ಕಾಮಗಾರಿ ಗುಣಮಟ್ಟ ದಿಂದ ಕೂಡಿರಬೇಕು. ಆಗ ಮಾತ್ರವೇ ರೈತ ಕೃಷಿ ಚಟುವಟಿಕೆ ನಿರಾಯಾಸವಾಗಿ ಮಾಡಲು ಸಾಧ್ಯ ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಎಸ್.ಎನ್. ಸಿದ್ಧಾರ್ಥ, ಜಯಪಾಲ್ ಭರಣಿ, ಕ್ಷೇತ್ರಾಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಪಿಎಸಿಸಿಎಸ್ ಅಧ್ಯಕ್ಷ ಮಹದೇವಯ್ಯ, ರಮೇಶ್, ಸೋಸಲೆ ರಾಜೇಶ್, ಗ್ರಾಪಂ ಮಾಜಿ ಅಧ್ಯಕ್ಷ ಶಂಭು ದೇವಪುರ ರಮೇಶ್, ಲೋಕೋಪಯೋಗಿ ಎಇಇ ನತೀಶ್, ಜಿಪಂ ಎಇಇ ರಾಜು ನಾಯಕ್, ಕೆಆರ್‌ಡಿಎಲ್‌ಜೆಇ ದಿಲೀಪ್, ದೀಪು, ದರ್ಶನ್, ಬೇವಿನಹಳ್ಳಿ ಸತೀಶ್ ಮತ್ತಿತರರಿದ್ದರು.

ಬೈಲುಕುಪ್ಪೆ ಟಿಬೆಟಿಯನ್ ವಸಾಹತುವಿನಲ್ಲಿ ಯೋಗಾಭ್ಯಾಸ



ಬೈಲುಕುಪ್ಪೆ, ಜೂ.22(ರಾಜೇಶ್)– ಪಿರಿಯಾಪಟ್ಟಣ ತಾಲೂಕಿನ ಬೈಲುಕುಪ್ಪೆಯ ಟಿಬೆಟಿ ಯನ್ ವಸಾಹತು ವಿನಲ್ಲಿ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ವಿಶ್ವ ಯೋಗ ದಿನದ ಪ್ರಯುಕ್ತ ಬೈಲಕುಪ್ಪೆ ಸಂಭೋಟ ಟಿಬೆಟಿಯನ್ ಕೈಲಾಸ ಪುರ ಶಾಲೆಯಲ್ಲಿ ಪುಟ್ಟ ಪುಟ್ಟ ಮಕ್ಕಳು ಯೋಗ ಮಾಡುವುದರಲ್ಲಿ ನಿರತರಾಗಿದ್ದರು. ರಜೆಯ ಹಿನ್ನೆಲೆಯಲ್ಲಿ ಭಾರತಕ್ಕೆ ಆಗಮಿಸಿರುವ ವಿದೇಶಿ ಶಿಕ್ಷಕಿ ವಿದ್ಯಾರ್ಥಿಗಳಿಗೆ ಯೋಗ ತರಬೇತಿ ನೀಡಿದ್ದು ವಿಶೇಷವಾಗಿತ್ತು. ಮೈಸೂರು ಜಿಲ್ಲೆಗೆ ಯೋಗ ದಿನದಂದು ಆಗಮಿಸಿರುವ ಪ್ರಧಾನಿ ನರೇಂದ್ರ ಮೋದಿಯ ಬಗ್ಗೆ ಟಿಬೆಟಿಯನ್ ಶಿಕ್ಷಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಕೆ.ಆರ್.ರಮ್ಯಗೆ ಅತ್ಯುನ್ನತ ಶ್ರೇಣಿ



ಮಲ್ಕುಂಡಿ, ಜೂ.22 (ಚನ್ನಪ್ಪ)– ನಂಜನಗೂಡು ತಾಲೂಕಿನ ಕಡಬೂರು ಗ್ರಾಮದ ವಿದ್ಯಾರ್ಥಿನಿ ಕೆಆರ್. ರಮ್ಯ ದ್ವಿತೀಯ ಪಿಯುಸಿ ಯಲ್ಲಿ 553 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಅರ್ಜಿ ಆಹ್ವಾನ

ಹೆಚ್.ಡಿ.ಕೋಟೆ, ಜೂ.22(ಮಂಜು)– ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಬಾಲಕರ, ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಪ್ರವರ್ಗ 1, 2ಎ, 3ಎ, ಪರಿಶಿಷ್ಟ ಜಾತಿ ಹಾಗೂ ಪಂಗಡ ಸೇರಿದಂತೆ ಇತರೆ ಜನಾಂಗಗಳಿಗೆ ಸೇರಿದ ಹೊಸ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಜೂ.22ರಿಂದ 30ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು www.bcwd.karnataka.gov.in ಸಂಪರ್ಕಿಸಬೇಕು. ಮಾಹಿತಿಗೆ ಸಹಾಯವಾಣಿ ಸಂಖ್ಯೆ 080–8050370006 ಅಥವಾ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಂಪರ್ಕಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಕೋಟೆಯಲ್ಲಿ ಹೊಸ ಮದ್ಯದ ಅಂಗಡಿ ತೆರೆಯಲು ಅವಕಾಶ ನೀಡಿಲ್ಲ



ಹೆಚ್.ಡಿ.ಕೋಟೆ, ಜೂ.22(ಮಂಜು)– ನನ್ನ ನಾಲ್ಕು ವರ್ಷದ ಅಧಿಕಾರದ ಅವಧಿಯಲ್ಲಿ ತಾಲೂಕಿನಲ್ಲಿ ಹೊಸದಾಗಿ ಒಂದೇ ಒಂದು ಮದ್ಯದ ಅಂಗಡಿ ತೆರೆಯಲು ಅವಕಾಶ ನೀಡಿಲ್ಲ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಹ್ಯಾಂಡ್‌ಪೋಸ್ಟ್ ಸಿದ್ದೇಗೌಡ ಕಲ್ಯಾಣ ಮಂಟಪದಲ್ಲಿ ಶ್ರೀಧರ್ಮಸ್ಥಳ ಗ್ರಾಮ ಅಭಿವೃದ್ಧಿ ಯೋಜನೆಯಿಂದ ನಡೆದ 1543ನೇ ಮದ್ಯವರ್ಜನ ಶಿಬಿರದ ಸಮಾರೋಪದಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಹೊಸದಾಗಿ ಮದ್ಯದ ಅಂಗಡಿ ತೆರೆಯಲು ಸರ್ಕಾರದಿಂದ ಹಲವಾರು ಪ್ರಸ್ತಾವನೆಗಳು ಬಂದವು. ಅದಕ್ಕೆ ನಾನು ಅವಕಾಶ ನೀಡಿಲ್ಲ. ಶಾಲಾ, ಕಾಲೇಜು ತೆರೆಯಲು ಸರ್ಕಾರಕ್ಕೆ ನನ್ನ ಲೆಟರ್ ಬಳಕೆ ಮಾಡಿದ್ದೇನೆ ಹೊರತು, ಮದ್ಯದ ಅಂಗಡಿ ತೆರೆಯಲು ಒಂದೇ ಒಂದು ಲೆಟರ್ ಬಳಕೆ ಮಾಡಿಕೊಂಡಿಲ್ಲ ಎಂದು ತಿಳಿಸಿದರು.

ಪಾನ ಮುಕ್ತ ಸಮಾಜ ಮಾಡುವುದೇ ನನ್ನ ಮೊದಲ ಆದ್ಯತೆ. ತಾಲೂಕಿನ ಅಭಿವೃದ್ಧಿ ದೃಷ್ಟಿ ಯಿಂದ ನಿರುದ್ಯೋಗ ಯುವಕ, ಯುವತಿಯರಿಗೆ ಸ್ಥಳೀಯವಾಗಿ ಗಾರ್ಮೆಂಟ್ಸ್, ಕಾರ್ಖಾನೆ ತೆರೆದು ಉದ್ಯೋಗ ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ತಿಳಿಸಿದರು.

ಶ್ರೀಧರ್ಮಸ್ಥಳ ಗ್ರಾಮ ಅಭಿವೃದ್ಧಿ ಸಂಸ್ಥೆಯವರು ಮದ್ಯವರ್ಜನ ಶಿಬಿರಗಳನ್ನು ನಡೆಸುವ ಮೂಲಕ ಪಾನ ಮುಕ್ತ ಮಾಡಲು ಹೋರಾಟ ಮಾಡುತ್ತಿದ್ದಾರೆ, ಅದಕ್ಕೆ ಸಂಪೂರ್ಣ ಸಹಕಾರ ನೀಡುತ್ತೇನೆ. ಒಂದು ವಾರಗಳ ಕಾಲ ಮದ್ಯವರ್ಜನ ಶಿಬಿರ ನಡೆಸುವ ಬದಲು 15ದಿನಗಳ ಕಾಲ ನಡೆಸಿದರೆ ಜನರಿಗೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆ ಎಂದರು.

ಗ್ರಾಮ ಅಭಿವೃದ್ಧಿ ಯೋಜನೆ ಪ್ರಾದೇಶಿಕ ನಿರ್ದೇಶಕ ಗಂಗಾಧರ್ ರೈ ಮಾತನಾಡಿ, ಐದು ದಶಕ ಗಳಿಂದ ಶ್ರೀಧರ್ಮಸ್ಥಳ ಗ್ರಾಮ ಅಭಿವೃದ್ಧಿ ಯೋಜನೆ ರಾಜ್ಯದ ಎಲ್ಲಾ ವರ್ಗದ ಜನರ ಅಭಿವೃದ್ಧಿಗೆ ವಿನೂತನವಾದ ಕಾರ್ಯಕ್ರಮ ರೂಪಿಸಿದೆ. ಆ ಮೂಲಕ ಬಡವರು, ಮಹಿಳೆಯರು, ರೈತರು, ಕೂಲಿ ಕಾರ್ಮಿಕರು ಸಬಲೀಕರಣಗೊಂಡಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ಪ್ರೇಮ್‌ಸಾಗರ್, ಶ್ರೀಧರ್ಮಸ್ಥಳ ಗ್ರಾಮ ಅಭಿವೃದ್ಧಿ ಜಿಲ್ಲಾ ನಿರ್ದೇಶಕ ಲಕ್ಷ್ಮಣ್, ತಾಲೂಕು ನಿರ್ದೇಶಕ ಶಶಿಧರ್, ದಿವಾಕರ್, ಕನ್ನಡ ಪ್ರಮೋದ್, ಭಾಸ್ಕರ್, ಇಂದ್ರಮ್ಮ, ಹೋಂಡಾ ನಯಾಜ್, ವಸಂತ್‌ಕುಮಾರ್, ಅಶ್ವಿನಿ, ಪವಿತ್ರಾ, ಶ್ವೇತಾ, ವಿನೂತಶೆಟ್ಟಿ, ಭಾರತಿ, ಕೃಷ್ಣ ಮೂರ್ತಿ, ಕುಮಾರ್, ಮಂಜುಳಾ, ಜೆ.ಪಿ.ಶಿವರಾಜು, ಮಹಾದೇವಪ್ಪ, ಈರೇಗೌಡ ಇದ್ದರು.

ನಾಳೆ ಸರಗೂರಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿ




ಸರಗೂರು, ಜೂ.22(ನಾಗೇಶ್)– ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಸರಗೂರು, ಹೆಚ್.ಡಿ.ಕೋಟೆ ಘಟಕದಿಂದ ಜೂ.24ರಂದು ಜಗ ಜ್ಯೋತಿ ಬಸವೇಶ್ವರ ಜಯಂತಿ ಮಹೋತ್ಸವವನ್ನು ಆಯೋಜಿಸಲಾಗಿದೆ ಎಂದು ಮಹಾಸಭಾ ತಾಲೂಕು ಘಟಕದ ಅಧ್ಯಕ್ಷ ಡಿ.ಜಿ.ಶಿವರಾಜು ತಿಳಿಸಿದರು.

ಬಸವ ಜಯಂತಿ ಕಾರ್ಯಕ್ರಮ ಹಿನ್ನೆಲೆಯಲ್ಲಿ ಪಟ್ಟಣದಲ್ಲಿರುವ ಮಹಾಸಭಾದ ಕಚೇರಿಯಲ್ಲಿ ಬುಧ ವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆಯ ಹತ್ತಿರವಿರುವ ವೀರಶೈವ ಸಮಾಜದ ನಿವೇಶನದಲ್ಲಿ ಮಧ್ಯಾಹ್ನ 12ಕ್ಕೆ ಸುತ್ತೂರು ಶ್ರೀಕ್ಷೇತ್ರ ವೀರಸಿಂಹಾಸನ ಮಹಾಸಂಸ್ಥಾನ ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯಸಾನಿಧ್ಯದಲ್ಲಿ ನಡೆಯಲಿರುವ ಧಾರ್ಮಿಕ ಸಭೆಯ ದಿವ್ಯ ಸಮ್ಮುಖ ವನ್ನು ದೇವನೂರು ತ್ರಿವಿಧ ದಾಸೋಹ ಗುರುಮಲ್ಲೇಶ್ವರ ಮಹಾಸಂಸ್ಥಾನ ಮಠದ ಮಹಾಂತ ಸ್ವಾಮೀಜಿ, ಸೋಮಹಳ್ಳಿ ವೀರಸಿಂಹಾಸನ ಶಿಲಾಮಠದ ಸಿದ್ದ ಮಲ್ಲ ಸ್ವಾಮೀಜಿ ವಹಿಸುವರು ಎಂದು ಹೇಳಿದರು.

ಮಹಾಸಭಾದ ರಾಷ್ಟ್ರೀಯ ಘಟಕದ ಪ್ರಧಾನ ಕಾರ್ಯದರ್ಶಿ, ಶಾಸಕರೂ ಆದ ಈಶ್ವರಖಂಡ್ರೆ ಧಾರ್ಮಿಕ ಸಭೆ ಉದ್ಘಾಟಿಸಲಿದ್ದಾರೆ. ಮಹಾಸಭಾದ ತಾಲೂಕು ಘಟಕದ ಅಧ್ಯಕ್ಷ ಡಿ.ಜಿ.ಶಿವರಾಜು ಅಧ್ಯಕ್ಷತೆ ವಹಿಸುವರು. ಸಂಸದ ವಿ.ಶ್ರೀನಿವಾಸ್‌ಪ್ರಸಾದ್ ಪ್ರತಿಭಾ ಪುರಸ್ಕಾರ ವಿತರಿಸುವರು. ಶಾಸಕ ಅನಿಲ್ ಚಿಕ್ಕಮಾದು ಬಸವೇಶ್ವರ ಭಾವಚಿತ್ರ ಅನಾವರಣ ಮಾಡುವರು. ಅತಿಥಿಗಳಾಗಿ ಮಹಾಸಭಾದ ರಾಷ್ಟ್ರೀಯ ಘಟಕದ ಉಪಾಧ್ಯಕ್ಷ ಸಚ್ಚಿದಾನಂದಮೂರ್ತಿ, ಕಾರ್ಯದರ್ಶಿ ರೇಣುಕಾ ಪ್ರಸನ್ನ, ಜಿಲ್ಲಾ ಘಟಕ ಅಧ್ಯಕ್ಷ ಎಸ್.ಶಿವಮೂರ್ತಿ ಕಾನ್ಯ ಆಗಮಿಸುವರು. ಪಟ್ಟಣದ ಜೆಎಸ್‌ಎಸ್ ಪ್ರೌಢಶಾಲೆಯ ಶಿಕ್ಷಕ ಸಿದ್ದಲಿಂಗಸ್ವಾಮಿ ಉಪನ್ಯಾಸ ನೀಡುವರು ಎಂದರು.


ಇದಕ್ಕೂ ಮೊದಲು ಬೆಳಗ್ಗೆ 7.30ಕ್ಕೆ ಪಟ್ಟಣದ ಬಿಡುಗಲು ಪಡುವಲು ವಿರಕ್ತಮಠದ ಮಹದೇವ ಸ್ವಾಮೀಜಿ ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸುವರು. ಬೆಳಗ್ಗೆ 8ಕ್ಕೆ ಮಹಾಸಭಾದ ಗೌರವಾಧ್ಯಕ್ಷರು, ಹಂಚೀ ಪುರ ಮಠದ ಚನ್ನಬಸವ ಸ್ವಾಮೀಜಿ, ದಡದಹಳ್ಳಿ ಮಠದ ಡಾ.ಷಡಕ್ಷರಿ ಸ್ವಾಮೀಜಿ ಅವರು ಬಸವೇಶ್ವರ ಭಾವ ಚಿತ್ರ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಪಟ್ಟಣದ ಮುಖ್ಯ ರಸ್ತೆಯಲ್ಲಿರುವ ಕೆಇಬಿ ಕಚೇರಿ ಮುಂಭಾಗ ದಿಂದ ಹೊರಟು ಮುಖ್ಯ ರಸ್ತೆಯ ಮೂಲಕ ಸಂಭ್ರಮ ದಿಂದ ಸಮಾಜದ ನಿವೇಶನದಲ್ಲಿ ನಿರ್ಮಿಸಲಿರುವ ಶರಣರ ಅನುಭವ ಮಂಟಪ ಸೇರಲಿದೆ. ನಂತರ ಕುದೇರು ಮಠದ ಗುರುಶಾಂತ ಸ್ವಾಮೀಜಿ, ಪುರಮಠದ ಚಂದ್ರಶೇಖರ ಸ್ವಾಮೀಜಿ, ಬೀಚನಹಳ್ಳಿ ಮಠದ ನಾಗೇಂದ್ರ ಸ್ವಾಮೀಜಿ, ಮಾದಾಪುರ ಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಹಂಚೀಪುರ ಮಠದ ಕಿರಿಯ ತೋಂಟದಾರ್ಯ ಸ್ವಾಮೀಜಿ, ಜಕ್ಕಹಳ್ಳಿ ಮಠದ ನಂದೀಶ ಸ್ವಾಮೀಜಿ, ಯಡಿಯಾಲ ಮಠದ ಕೆಂಡಗಣ್ಣ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ ಎಂದು ತಿಳಿಸಿದರು.

ಸಭೆಯಲ್ಲಿ ಪಪಂ ಉಪಾಧ್ಯಕ್ಷ ವಿನಾಯಕ ಪ್ರಸಾದ್, ತಾಪಂ ಮಾಜಿ ಸದಸ್ಯ ಮಹದೇವಸ್ವಾಮಿ, ಮಹಾಸಭಾದ ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ, ಕಾರ್ಯದರ್ಶಿ ಶಿವ ಕುಮಾರ್, ನಿರ್ದೇಶಕರಾದ ಬಾಡಗ ಮಾದಪ್ಪ, ದೊರೆ ಸ್ವಾಮಿ, ಸೋಮಶೇಖರ್, ಎಲ್.ಶಿವಣ್ಣ, ಡಿ.ಎಸ್.ಮಹ ದೇವಪ್ಪ, ನಾಗರಾಜಪ್ಪ, ಡಿ.ಜಿ.ಮಲ್ಲೇಶ್, ನಟರಾಜು, ಶರಣ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಕೆ.ಗುರುಸ್ವಾಮಿ, ಮಲ್ಲಿಕಾರ್ಜುನ, ಟಿ.ಎಸ್.ನಾಗರಾಜು ಹಾಜರಿದ್ದರು.



ತಿ.ನರಸೀಪುರ ಅಂಗವಿಕಲರ ಸಮೃದ್ಧಿ ಸೇವಾ ಟ್ರಸ್ಟ್‌ನಿಂದ ನಡೆದ ಅಂಗವಿಕಲರ ಟೆಸ್ಟ್ ಕಾರ್ಯಕ್ರಮದಲ್ಲಿ ತುಂಬಲ ಗ್ರಾಪಂ ಮಾಜಿ ಸದಸ್ಯ ಟಿ.ಎನ್.ನಾಗರಾಜು ಅವರನ್ನು ಸನ್ಮಾನಿಸ ಲಾಯಿತು. ಈ ವೇಳೆ ಟ್ರಸ್ಟ್‌ನ ತಾಲೂಕು ಸಂಯೋಜಕರೂ ಆದ ಅಧ್ಯಕ್ಷ ಎಸ್.ಸಿದ್ದರಾಜು, ಕಾರ್ಯದರ್ಶಿ ಸುರೇಶ್, ಖಜಾಂಚಿ ಲಕ್ಷ್ಮಮ್ಮ, ತಾಲೂಕು ಸಂಯೋಜಕಿ ಬಿ.ಆರ್.ವೀಣಾ, ನಾಗರಾಜಮೂರ್ತಿ, ಮಲ್ಲಪ್ಪ, ಅಶ್ವಿನಿ, ರಾಜೇಶ್ವರಿ, ಪ್ರೇಮಾ, ರವಿ, ಅಂಬಿಕಾ ಹಾಜರಿದ್ದರು.

ಸವಿತಾ ನಿಧನ



ಹುಣಸೂರು, ಜೂ.22(ಕೆಕೆ)– ತಾಲೂಕಿನ ರತ್ನಪುರಿ ಕಾಲೋನಿ ಗ್ರಾಮದ ಶಂಕರ್ ಅವರ ಪತ್ನಿ ಸವಿತಾ(55) ಅನಾರೋಗ್ಯದಿಂದ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ರಾತ್ರಿ ನಿಧನರಾದರು. ಮೃತರು ಪತಿ, ಪುತ್ರರಾದ ಪ್ರಜ್ವಲ್ ಶಂಕರ್, ನಿಶ್ಚಲ್ ಶಂಕರ್ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಮೈಸೂರಿನ ರುದ್ರಭೂಮಿಯಲ್ಲಿ ಗುರುವಾರ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಮಹಿಳೆ ಸುಶಿಕ್ಷಿತರಾದರೆ ಸಮೃದ್ಧ ಸಮಾಜ ಸಾಧ್ಯ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಸಮಾವೇಶದಲ್ಲಿ ಕಾಂ ದೇವಿ



ಹುಣಸೂರು, ಜೂ.22(ಕೆಕೆ)– ಮಹಿಳೆ ಸುಶಿಕ್ಷಿತರಾದರೆ ಸಮೃದ್ಧ ಸಮಾಜ ಕಟ್ಟಲು ಸಾಧ್ಯವಾಗುತ್ತದೆ. ಆದರೆ ಮಹಿಳೆ ಎಂಬ ಕಾರಣಕ್ಕಾಗಿ ಇಂದು ದೌರ್ಜನ್ಯ ಮಾಡ ಲಾಗುತ್ತಿದೆ. ಇದರ ವಿರುದ್ಧ ಮಹಿಳೆಯರು ಸೆಟೆದು ನಿಲ್ಲುವಂತಾಗಬೇಕು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷೆ ಕಾಂ ದೇವಿ ಹೇಳಿದರು.

ಪಟ್ಟಣದ ಕಲ್ಕುಣಿಕೆಯ ಬಸವನಗುಡಿ ಬೀದಿಯಲ್ಲಿ ಜನವಾದಿ ಮಹಿಳಾ ಸಂಘಟನೆಯ ಪ್ರಥಮ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆ ಯರ ಮೇಲಿನ ದೌರ್ಜನ್ಯಗಳು, ಜಾತಿ ಧರ್ಮದ ಹೆಸರಿನಲ್ಲಿ ಶೋಷಣೆಗಳು ನಿರಂತರವಾಗಿ ನಡೆಯುತ್ತಿವೆ. ಇದರ ವಿರುದ್ಧ ಸಂಘಟನೆಗಳನ್ನು ಕಟ್ಟುವ ಮುಖಾಂತರ ಮಹಿಳೆಯರು ದೌರ್ಜನ್ಯಗಳನ್ನು ತಡೆಯಲು ಸಾಧ್ಯ. ಅಲ್ಲದೆ ತಮ್ಮ ಹಕ್ಕುಗಳನ್ನು ಪಡೆಯಬಹುದು ಎಂದರು.

ಸಮಾಜದಲ್ಲಿ ಮಹಿಳೆಯರಿಗೆ ಸರಿ ಸಮಾನವಾದ ಹಕ್ಕುಗಳು ಸಿಗಬೇಕೆಂದು ಜನವಾದಿ ಮಹಿಳಾ ಸಂಘಟನೆ ನಿರಂತರ ವಾಗಿ ಹೋರಾಟ ಮಾಡುತ್ತಿದೆ. ದೇಶ ದಲ್ಲಿ ಒಂದು ಕೋಟಿಗೂ ಹೆಚ್ಚು ಸದಸ್ಯ ರನ್ನು ಹೊಂದಿ ಎಲ್ಲಾ ವಿಭಾಗದ ಮಹಿಳೆಯರನ್ನು ಸಂಘಟಿಸುತ್ತ ಆತ್ಮ ವಿಶ್ವಾಸವನ್ನು ತುಂಬುತ್ತಿದೆ. ಆದ್ದರಿಂದ ಮಹಿಳೆಯರು ಸಂಘಟಿತರಾಗುವುದರ ಮೂಲಕ ತನ್ನೆಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು ಎಂದರು.

ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಆಶಾ ಬಸವರಾಜು ಮಾತನಾಡಿ, ಮಹಿಳೆ ಇಂದು ಬಾನೆತ್ತರಕ್ಕೂ ಬೆಳೆದು ನಿಂತಿ ದ್ದಾಳೆ. ಆದರೆ ದೌರ್ಜನ್ಯಗಳು ನಿಂತಿಲ್ಲ. ಹೆಣ್ಣು ಸಮಾಜ ಕಣ್ಣು. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ. ತಾಯಿಯೇ ಮೊದಲ ಗುರು. ತಾನು ಮನಸ್ಸು ಮಾಡಿದರೆ ಏನೆಲ್ಲಾ ಸಾಧನೆ ಮಾಡ ಬಹುದು ಎಂಬುದಕ್ಕೆ ಈ ಮಾತುಗಳೆ ಸಾಕ್ಷಿಯಾಗಿದೆ. ಧೃತಿಗೆಡದೆ ಜನವಾದಿ ಮಹಿಳಾ ಸಂಘಟನೆ ಕಟ್ಟುವ ಮೂಲಕ ನಮ್ಮ ಹಕ್ಕುಗಳನ್ನು ಪಡೆಯಲು ಮುಂದಾ ಗೋಣ ಎಂದು ಕರೆ ನೀಡಿದರು.

ವೇದಿಕೆಯಲ್ಲಿ ರಾಜ್ಯ ಕಾರ್ಯದರ್ಶಿ ಮಳವಳ್ಳಿ ಸುನೀತಾ, ಮುಖಂಡರಾದ ಕೆ.ಎಸ್.ಗೀತಾ, ಪದ್ಮಾವತಿ, ಪ್ರೀತಿ, ಸಂಗೀತಾ, ವಸಂತಕುಮಾರಿ ಮತ್ತಿತರರು ಭಾಗವಹಿ ಸಿದ್ದರು. ಇದೇ ಸಂದರ್ಭದಲ್ಲಿ ನೂತನ ತಾಲೂಕು ಸಮಿತಿಯನ್ನು ರಚಿಸಲಾಯಿತು.

ಅಧ್ಯಕ್ಷರಾಗಿ ಆಶಾ ಬಸವರಾಜು, ಕಾರ್ಯ ದರ್ಶಿಯಾಗಿ ಪ್ರೀತಿ, ಉಪಾಧ್ಯಕ್ಷರಾಗಿ ಪದ್ಮಾವತಿ, ನೀಲಮ್ಮ, ಸಹ ಕಾರ್ಯದರ್ಶಿ ಗಳಾಗಿ ಕೆ.ಎಸ್.ಗೀತಾ, ರಂಜಿತಾ ಮತ್ತು ಸದಸ್ಯರಾಗಿ ಲತಾ, ಪದ್ಮಾ, ಗಾಯಿತ್ರಿ, ವಸಂತಾ, ಮಂಜುಳಾ ಆಯ್ಕೆಯಾದರು.



ಮೈಸೂರು ತಾಲೂಕು ಇಲವಾಲ ಹೋಬಳಿ ಆನಂದೂರು ಗ್ರಾಪಂ ಪಿಡಿಓ ಭ್ರಷ್ಟಾಚಾರ ನಡೆಸುತ್ತಿದ್ದಾರೆ ಎಂದು ಆರೋಪಿಸಿ ನಡೆಯುತ್ತಿರುವ ಪ್ರತಿಭಟನೆ 6ನೇಕ್ಕೆ ಕಾಲಿಟ್ಟಿತ್ತು. ಈ ವೇಳೆ ಮೈಸೂರು ತಾಲೂಕು ಅಧ್ಯಕ್ಷ ಆನಂದೂರು ಪ್ರಭಾಕರ್, ಸಹ ಕಾರ್ಯದರ್ಶಿ ನಾಗನಹಳ್ಳಿ ಚಂದ್ರಶೇಖರ್, ಸಂಘಟನಾ ಕಾರ್ಯದರ್ಶಿ ಚಿಕ್ಕನಹಳ್ಳಿ ಎ.ರಾಘವೇಂದ್ರ, ಯುವ ಘಟಕದ ಸಂಚಾಲಕ ಆನಂದೂರು ದಿನೇಶ್ ಸೇರಿದಂತೆ ರೈತರು ಇದ್ದರು.

ತಿದ್ದುಪಡಿ

ದಿ.22.06.2022 ರಂದು ಮೈಸೂರು ಮಿತ್ರ ಪತ್ರಿಕೆಯಲ್ಲಿ ಪ್ರಕಟಣೆಗೊಂಡಿರುವ ಸಾರ್ವಜನಿಕ ಪ್ರಕಟಣೆಯಲ್ಲಿ ಕಕ್ಷಿದಾರರ ತಂದೆಯ ಹೆಸರು ದಿ. ಮೊಹಮ್ಮದ್ ಅಲಿ ಎಂಬುದರ ಬದಲಾಗಿ **ದಿ. ಮೊಹಮ್ಮದ್ ಆನೀಫ್** ಎಂದು ಹಾಗೂ ನನ್ನ ಕ್ಷಕಿದಾರರಿಗೆ ಬರೆದು ಕೊಟ್ಟಿರುವ ನೊಂದಾಯಿತ ಆಧಾರ ಪತ್ರದ ದಿನಾಂಕ 03.04.1996 ರ ಬದಲಾಗಿ **03-04-1993** ಎಂದು ಓದಿಕೊಳ್ಳುವುದು ಇನ್ನುಳಿದ ವಿಷಯಗಳು ಸರಿಯಾಗಿರುತ್ತವೆ. ಸಹಿ/- ಪಿ.ಡಿ ಮೇದಪ್ಪ, ವಕೀಲರು

ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಲಿ
ಸಮುದಾಯದ ನಿರ್ಮಾಣದತ್ತ

ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009 ದೂರವಾಣಿ: 080-22273511-16

ಸಂಖ್ಯೆ: ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ-10/2022-23 ದಿನಾಂಕ: 22-06-2022

ತಿದ್ದುಪಡಿ ಪ್ರಕಟಣೆ-2

ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು ಇಲವಾಲ ಹೋಬಳಿ, ಕಲ್ಲೂರು, ನಾಗನಹಳ್ಳಿ, ಕಾವಲ್ ಯಲಚನಹಳ್ಳಿ ಹಾಗೂ ಗುಂಗ್ರಾಲ್ ಛತ್ರ ಗ್ರಾಮಗಳ ಹಲವು ಸರ್ವೆ ನಂಬರುಗಳ ಜಮೀನುಗಳಲ್ಲಿ ಕರ್ನಾಟಕ ಗೃಹ ಮಂಡಳಿಯು ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿ ಪ್ರಸ್ತುತ ಲಭ್ಯವಿರುವ ನಿವೇಶನಗಳನ್ನು ಅರ್ಹ ಅರ್ಜಿದಾರರುಗಳಿಗೆ ಹಂಚಿಕೆ ಮಾಡುವ ಸಲುವಾಗಿ ದಿನಾಂಕ: 28.05.2022 ರ ಪ್ರಜಾವಾಣಿ, ಅಂದೋಲನ ಮತ್ತು ಮೈಸೂರು ಮಿತ್ರ ದಿನಪತ್ರಿಕೆಗಳಲ್ಲಿ ಇ-ಲಾಟರಿ ದಿನಾಂಕವನ್ನು: 24.06.2022ರಂದು ನಿಗಧಿಪಡಿಸಲಾಗಿತ್ತು. ಕಾರಣಾಂತರಗಳಿಂದ **ಇ-ಲಾಟರಿ ದಿನಾಂಕವನ್ನು 08.07.2022 ಕ್ಕೆ ಮುಂದೂಡಲಾಗಿರುತ್ತದೆ.** ಉಳಿದಂತೆ ದಿನಾಂಕ: 21.05.2022 ರಂದು ನೀಡಿರುವ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/CP/1031/Zenkar/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು-570001, ಕರ್ನಾಟಕ,
ದೂರವಾಣಿ ಸಂಖ್ಯೆ: +91-0821-2520512 (Off), 2520803 (Fax),
Email- mmcrimysore@yahoo.com, website: www.mmcri/karnataka.gov.in

ಸಂಖ್ಯೆ: ಸರಬ/ಒಪಿಡಿ/ಟೆಂಡರ್/21/2022-23 ದಿನಾಂಕ: ಜೂನ್ 15, 2022

ಟೆಂಡರ್ ಅಧಿಸೂಚನೆ

ವಿಷಯ: 2022-23ನೇ ಸಾಲಿಗೆ ಈ ವಿದ್ಯಾಲಯದ ಸಹ ಆಸ್ಪತ್ರೆಗಳ ಒಳ / ಹೊರ ರೋಗಿಗಳ ದಾಖಲಾತಿ ವಿಭಾಗಗಳ ನಿರ್ವಹಣೆ ಮತ್ತು ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆ ಮತ್ತು ಇತರೆ ಸರ್ಕಾರಿ ಉಚಿತ ಚಿಕಿತ್ಸಾ ಯೋಜನೆಗಳ ನಿರ್ವಹಣೆಗಳ ಪೂರ್ಣ ಪ್ಯಾಕೇಜ್‌ಗಳ ಸೇವೆಯನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಿರುವ ಬಗ್ಗೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999-ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಸಹ ಆಸ್ಪತ್ರೆಗಳಾದ ಕೆ.ಆರ್. ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಮತ್ತು ಪಿ.ಕೆ.ಟಿ.ಬಿ. ಮತ್ತು ಸಿ.ಡಿ. ಆಸ್ಪತ್ರೆಗಳಲ್ಲಿ ಹೊರ/ಒಳ ರೋಗಿಗಳ ದಾಖಲಾತಿ ಮತ್ತು ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆ, ಇತರೆ ಉಚಿತ ಚಿಕಿತ್ಸಾ ಯೋಜನೆಗಳ ಸಂಪೂರ್ಣ ನಿರ್ವಹಣೆ ಹಾಗೂ ಗಣಕಯಂತ್ರ, ಪ್ರಿಂಟರ್‌ಗಳು ಮತ್ತು ಆಸ್ಪತ್ರೆಯ ನಿರ್ವಹಣಾ ಕೌಂಟರ್‌ಗಳಿಗೆ ಅವಶ್ಯವಿರುವ ಸ್ಟೇಷನರಿಗಳ ಸರಬರಾಜಿನೊಂದಿಗೆ ಸಂಪೂರ್ಣ ಪ್ಯಾಕೇಜ್‌ನ ವಾರ್ಷಿಕ ನಿರ್ವಹಣೆಗಾಗಿ ನೋಂದಾಯಿತ ಅಥವಾ ಮಾನ್ಯತೆ ಪಡೆದ ಸಂಸ್ಥೆಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://eproc.karnataka.gov.in** ಮೂಲಕ ದಿನಾಂಕ **21-06-2022** ರಿಂದ ಪಡೆಯಬಹುದಾಗಿದ್ದು, ದಿನಾಂಕ **21-07-2022** ರಂದು ಅಪರಾಹ್ನ **5.00** ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/- ನಿರ್ದೇಶಕರು ಮತ್ತು ಡೀನ್,
ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು.

ವಾಸಾಸಂ/ಮೈಸೂರು/ಶಿರಡಿ ಸಾಯಿ/139/2022-23